SAPTHAGIRI (KANNADA)
SPIRITUAL ILLUSTRATED MONTHLY
Volume:03, Issue: 11 Pages:56
June - 2024, Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಜೂನ್ 2024

ಬೆಲೆ ರೂ. 20/-



## ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಜ್ಯೇಷ್ಠಾಭಿಷೇಕ

2024 , ಜೂನ್ 19 ರಿಂದ 21 ರ ವರೆಗೆ



## ಅಪ್ಪಲಾಯಗುಂಟ ಶ್ರೀ ಪ್ರಸನ್ನ ವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು

| ದಿನಾಂಕ | ವಾರ | ಹಗಲು | ರಾತ್ರಿ |
|---|---|---|---|
| 16-06-2024 | ಭಾನುವಾರ | ------------------ | ಅಂಕುರಾರ್ಪಣೆ |
| 17-06-2024 | ಸೋಮವಾರ | ತಿರುಚ್ಚಿ ಉತ್ಸವ,ಧ್ವಜಾರೋಹಣ | ದೊಡ್ಡಶೇಷವಾಹನ |
| 18-06-2024 | ಮಂಗಳವಾರ | ಚಿಕ್ಕಶೇಷವಾಹನ | ಹಂಸವಾಹನ |
| 19-06-2024 | ಬುಧವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 20-06-2024 | ಗುರುವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 21-06-2024 | ಶುಕ್ರವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 22-06-2024 | ಶನಿವಾರ | ಹನುಮದ್ವಾಹನ<br>ಸಾ॥ : ವಸಂತೋತ್ಸವ | ಗಜವಾಹನ |
| 23-06-2024 | ಭಾನುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 24-06-2024 | ಸೋಮವಾರ | ರಥೋತ್ಸವ | ಅಶ್ವವಾಹನ |
| 25-06-2024 | ಮಂಗಳವಾರ | ಚಕ್ರಸ್ನಾನ | ಧ್ವಜಾವರೋಹಣ |



## ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳು

| | | |
|---|---|---|
| 17-06-2024 | ಸೋಮವಾರ | ಶ್ರೀ ಕೃಷ್ಣ ಸ್ವಾಮಿಯವರಿಗೆ |
| 18-06-2024 | ಮಂಗಳವಾರ | ಶ್ರೀ ಸುಂದರರಾಜ ಸ್ವಾಮಿಯವರಿಗೆ |
| 19-06-2024 | ಬುಧವಾರ | ಶ್ರೀ ಪದ್ಮಾವತಿ ಅಮ್ಮನವರಿಗೆ |
| 20-06-2024 | ಗುರುವಾರ | ಶ್ರೀ ಪದ್ಮಾವತಿ ಅಮ್ಮನವರಿಗೆ |
| 21-06-2024 | ಶುಕ್ರವಾರ | ಶ್ರೀ ಪದ್ಮಾವತಿ ಅಮ್ಮನವರಿಗೆ |

# ಭಗವದ್ಗೀತೆ



**ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ**
**ಉಭಯೋರಪಿ ದೃಷ್ಟೋಽಂತ ಸ್ತ್ವನಯೋಸ್ತತ್ತ್ವದರ್ಶಿಭಿಃ**
(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -16)

**ಜಗತ್ಕಾರಣವಾದ ಮೂಲ ಪ್ರಕೃತಿಗೂ, ಪ್ರಕೃತಿಗೂ ಮೂಲನಾದ ಭಗವಂತನಿಗೂ ನಾಶವೆಂಬುದಿಲ್ಲ. (ಹಾಗೆಯೇ ಕೆಟ್ಟ ಕೆಲಸದಿಂದ ಎಂದೂ ಶುಭವಿಲ್ಲ. ಒಳ್ಳೆಯ ಕೆಲಸದಿಂದ ಎಂದೂ ಕೇಡಾಗದು) ಈ ಎರಡು ತತ್ತ್ವಗಳ ನಿರ್ಣಯವನ್ನು ತತ್ತ್ವಜ್ಞಾನಿಗಳು ಬಲ್ಲರು.**



ಕರೆತಾರೆ ಕರೆತಾರೆ ಶ್ರೀನಿವಾಸನ
ಕರೆತಾರೆ ಕರೆತಾರೆ ಶ್ರೀನಿವಾಸನ
ಸುರರರಸ ಸ್ವಾಮಿ ಶ್ರೀವೆಂಕಟೇಶನ

ಬರಹೇಳೆ ಬರಹೇಳೆ ಬೇಗ ಕರಿಮಗನೆ ರಂಗಗೆ
ಸಿರಿರಾಣಿರಮಣ ಘನಾಂಗಗೆ
ಅರಘಳಿಗೆ ಸರಸವಲ್ಲಿ ಅರಸನಿಲ್ಲದವಳೆ ಸಲ್ಲ
ಸ್ಮರನೆಂಬೊ ಸಿರಿಕಳ್ಳ ಕರುಣ್ಯಲ್ಲ


ಸುಂದರ ಸುಂದರ ಶುಭ ಮಂದಿರನ್ನ ದಯಾರಸ
ಸುಂದರನ್ನ ವರಕಂಬುಕಂದರನ್ನ
ಚೆಂದಾವರೆಗಣ್ಣವನ ಸಿಂಧೂರ ವರದನ್ನ ದೆ -
ವೇಂದ್ರಜಿತ ಪಾರಿಜಾತ ತಂದನ್ನ

ಹೋಯಿತೆ ಹೋಯಿತೆ ಹೊನ್ನಪ್ರಾಯ ಯದುರಾಯ ಬಾರ
ದಾಯಿತೀ ಅವಸ್ಥೆ ಹುಟ್ಟು ಹೊಂದಿ
ಕಾಯಬೇಕೆಂದೊಮ್ಮಿಗೆ ಉದಯವಾಸ ಪ್ರಸನ್ವೆಂಕಟ
ರಾಯ ಬಂದ ಫಲಿಸಿತಾನಂದ

- ಶ್ರೀ ಪ್ರಸನ್ನ ವೆಂಕಟದಾಸರು

(ಹತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ವಿಜ್ಞಾತಶಾಸನಗತಿ ರ್ವಿಪರೀತ ವೃತ್ತ್ಯಾ ವೃತ್ರಾದಿಭಿಃ ಪರಿಚಿತಾಂ ಪದವೀಂ ಭಜಾಮಿ**

**ಏವಂವಿಧೇ ವೃಷಗಿರೀಶದಯೇ ಮಯಿ ತ್ವಂ ದೀನೇ ವಿಭೋಃ ಶಮಯ ದಂಡಧರತ್ವ ಲೀಲಾಮ್ ॥93॥**

ಈ ಪದ್ಯದಲ್ಲಿ ಆಚಾರ್ಯರು ಜ್ಞಾಪಿಸಿಕೊಂಡಿರುವ ವೃತ್ರಾಸುರನ ಸಂಹಾರದ ಕಥೆ ಬಹಳ ಸ್ವಾರಸ್ಯವಾದದ್ದು. ಅದನ್ನು ಇಲ್ಲಿ ಸಂಗ್ರಹವಾಗಿ ತಿಳಿದುಕೊಳ್ಳುವುದು ಅವಶ್ಯಕವಾಗಬಹುದು. ವೃತ್ರಾಸುರನು ತನ್ನ ತಪೋಬಲದಿಂದ ಅಜೇಯನಾಗಿ ಪ್ರಪಂಚವನ್ನೆಲ್ಲ ತಲ್ಲಣಗೊಳಿಸುತ್ತಿದ್ದನು. ತ್ರಿಭುವನವನ್ನೂ ತನ್ನ ಅಧೀನ ಮಾಡಿಕೊಂಡು ದೇವತೆಗಳನ್ನು ಸ್ವರ್ಗಲೋಕದಿಂದ ಹೊಡೆದಟ್ಟಿ ಅಲ್ಲಿಯೂ ತನ್ನ ಸರ್ವಾಧಿಕಾರವನ್ನು ನಡೆಸುತ್ತಿರಲು ದೇವತೆಗಳು ಕಂಗಾಲಾಗಿ ಬ್ರಹ್ಮನ ಬಳಿ ಓಡಿ ಹೋದರು. ಬ್ರಹ್ಮನ ಸೂಚನೆಯಂತೆ ದಧೀಚಿ ಮಹರ್ಷಿಗಳ ಬಳಿ ಹೋಗಿ, ಅವರು ಹೇಳಿದ ರೀತಿಯಲ್ಲಿ ಅವರ ಬೆನ್ನು ಮೂಳೆಯನ್ನು ಪಡೆದು ಅದ ರಿಂದ ವಜ್ರಾಯುಧವನ್ನು ನಿರ್ಮಿಸಿಕೊಂಡು ಇಂದ್ರನು ವೃತ್ರಾಸುರನನ್ನು ಎದುರಿಸಿದನು. ಎಷ್ಟು ಹೊರಾಡಿದರೂ ದಣಿಯದೆ ವೃತ್ರಾಸುರನು ಪ್ರಬಲನಾಗಿದ್ದು ಅಸ್ತ್ರಪ್ರತ್ಯಸ್ತ್ರಗಳ ವಿನಿಮಯವಾಗುತ್ತಿದ್ದು, ಬಹಳ ಕಾಲದವರೆಗೂ ಹೋರಾಡುತ್ತಲೇ ಇದ್ದ ಇಂದ್ರನ ಮೇಲೆ ಕೋಪಾವಿಷ್ಟನಾದ ಅಸುರನು ಕಡೆಗೆ ಇಂದ್ರನನ್ನೇ ಅಪೋಶನವಾಗಿ ತೆಗೆದುಕೊಳ್ಳುವುದಾಗಿ ಹಾಯೆಂದು ಬಾಯ್ದೆರೆದುಕೊಂಡು ಓಡಿ ಬಂದು ಅವನನ್ನು ನುಂಗಿಬಿಟ್ಟನು. ಆದರೆ ಮತ್ತನಾದ ಅಸುರನಿಗೆ ಆಕಳಿಗೆ ಬಂದದ್ದರಿಂದ ಇಂದ್ರನು ಅವನ ಬಾಯಿಯಿಂದ ಹೊರಕ್ಕೆ ಬಂದು ಬಿಟ್ಟನು. ಅನಂತರ ಇಂದ್ರನು ಅಸುರನೊಡನೆ ಸ್ನೇಹ ಬೆಳೆಸಿಕೊಂಡು ಅವನೊಡನೆ ಸಮುದ್ರ ತೀರದಲ್ಲಿ ಸಂಚರಿಸುತ್ತಿದ್ದನು. ಆಗ ಭಗವಂತನು ಸೂಚಿಸಿದ್ದಂತೆ ಸಮುದ್ರದ ನೊರೆಯನ್ನು ದಧೀಚಿ ಋಷಿಯ ಬೆನ್ನು ಮೂಳೆಯ ವಜ್ರಾಯುಧದಿಂದ ತೆಗೆದು ಕೊಂಡು ಅಸುರನ ತಲೆಯ ಮೇಲಿಡಲಾಗಿ ಅವನು ಮೃತಿ ಹೊಂದಿದನು.

ಭಗವಂತನು ಆ ಸಮುದ್ರದ ನೊರೆಯಲ್ಲಿ ಸೇರಿಕೊಂಡಿದ್ದು ಅಸುರನ ಮೃತ್ಯುವಿಗೆ ಕಾರಣನಾದನು. ವೃತ್ರಾಸುರನೇ ಕೇಳಿಕೊಂಡಿದ್ದಂತೆ ಹನಿಯಾಗಿಯೂ ಇಲ್ಲದ ಒಣಗಿದ್ದು ಅಲ್ಲದ ಪದಾರ್ಥವಾದ ನೊರೆಯಿಂದ ಆಯುಧದ ಸಂಯೋಗದಿಂದ ಅವನ ಮರಣ ಸಂಭವಿಸಿತು.ಹೀಗೆ ತಪಶ್ಶಕ್ತಿಯ ಪ್ರಭಾವದಿಂದ ಅಸಾಧಾರಣವಾದ ಶಕ್ತಿಗಳನ್ನು ಪಡೆದು ಮತ್ತರಾಗಿ ಲೋಕ ಕಂಟಕರಾಗಿರುವ ಚೇತನರನ್ನು ಕೂಡ ಉದ್ಧರಿಸುವುದಕ್ಕಾಗಿ ತಾನೇ ಏನಾದರೊಂದು ಉಪಾಯವನ್ನು ಹೂಡಿ ದಂಡನೆಯನ್ನೂ ವಿಧಿಸಿ ತನ್ಮೂಲಕ ಅವರನ್ನು ಉದ್ಧರಿಸುವುದಕ್ಕಿಂತ ಹೆಚ್ಚಿನದಾದದ್ದು ಭಗವಂತನಿಗೆ ಚೇತನರಲ್ಲಿರುವ ಪ್ರೇಮವನ್ನು ತೋರಿಸಲು ಯಾವುದೂ ಇರಲಾರದು. ಹೀಗೆ ಅಪರಾಧಿ ಚೇತನರನ್ನು ಶಿಕ್ಷೆಗೆ ಗುರಿಮಾಡುವನೆಂಬುದು ಚೆನ್ನಾಗಿ ತಿಳಿದಿದ್ದರೂ ಕೂಡ ವೃತ್ರಾಸುರನೇ ಮೊದಲಾದವರಿಂದ ಅನುಸರಿಸಲ್ಪಟ್ಟ ಅಪರಾಧಿಗಳ ಸ್ಥಾನವನ್ನೇ ತಾನೂ ಪಡೆದಿರುತ್ತೇನೆಂದು ತನ್ನಲ್ಲಿ ನೈಚ್ಯವನ್ನು ಆಚಾರ್ಯರು ಆರೋಪಿಸಿಕೊಳ್ಳುತ್ತಾರೆ. ಹಾಗಿದ್ದರೂ ಕೂಡ ದಯಾದೇವಿಯ ಕಟಾಕ್ಷವಿದ್ದರೆ ಚೇತನರ ಅಪರಾಧಗಳೆಲ್ಲವನ್ನೂ ಭಗವಂತನು ಮರೆತೇ ಬಿಡುವಂತೆ ಮಾಡುವಳೆಂದು ಹಿಂದೆಯೇ ವಿವರಿಸಿರುವಂತೆ, ಭಗವಂತನು ತನ್ನ ಅಪರಾಧಗಳನ್ನು ಮರೆತು ತನ್ನ ಮೇಲೆ ದಂಡನಾರೂಪವಾದ ಶಾಸನವನ್ನು ಮಾಡದೇ ಇರುವಂತೆ ಮಾಡಬೇಕೆಂದು, ಆಚಾರ್ಯರು ದೇವಿಯನ್ನು ಪ್ರಾರ್ಥಿಸುತ್ತಾರೆ. ಅಂದರೆ ಭಗವಂತನು ತನ್ನ ಮೇಲೆ ಪೂರ್ಣವಾದ ದಯಾಕಟಾಕ್ಷವನ್ನು ಬೀರಿ ತನ್ನ ಅಪರಾಧಗಳನ್ನೆಲ್ಲ ಕ್ಷಮಿಸಿ ಉದ್ಧರಿಸಲೆಂದು ಭಾವ.

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ - ಶ್ರೀಕ್ರೋಧಿ ನಾಮ ಸಂವತ್ಸರ ವೈಶಾಖ-ಜ್ಯೇಷ್ಠ ಮಾಸ ಸಂಚಿಕೆ

ಸಂಪುಟ : 03 ಜೂನ್ - 2024 ಸಂಚಿಕೆ : 11




**ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ**
**ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ**


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ||ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ.ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು,
ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ.,ಪ್ರೆಸ್,
2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಸಾರಸ್ವತ ಕುಲಚಂದ್ರಮ ಶ್ರೀಶ್ರೀ ಪಾದರಾಜರು | -ಎಸ್.ಕೆ. ಗೋಪಿನಾಥ್ | 07 |
| ಭಾನುವಳ್ಳಿ ಶ್ರೀ ಲಕ್ಷ್ಮೀನಾರಾಯಣ ಹಾಗೂ ಕೊಮಾರನಹಳ್ಳಿಯ ದೇವಾಲಯಗಳು | -ಕೆಂಗೇರಿ ಚಕ್ರಪಾಣಿ | 10 |
| ವೃಕ್ಷಾರಾಧನೆಯೇಕೆ? ಹೇಗೆ? | -ಡಾ|| ಗುರುರಾಜ ಪೋಶೆಟ್ಟಿಹಳ್ಳಿ | 12 |
| ಹರಿದಾಸರ ಒಡನಾಡಿ ಶ್ರೀ ವಿಜಯೀಂದ್ರ ತೀರ್ಥರು | - ಶ್ರೀಧರ ರಾಯಸಂ | 16 |
| ಪಂಚ ಪ್ರಯಾಗಗಳು | -ಹನುಮಂತ ಮ. ದೇಶಕುಲಕರ್ಣಿ | 18 |
| ತಿರುಪತಿಯ ಶಾಸನಗಳಲ್ಲಿ ವಿಜಯನಗರ ಕಾಲದ ಜಲತಂತ್ರಜ್ಞಾನ ಒಂದು ಸಮೀಕ್ಷ | - ಡಾ|| ಹರಿಹರ ಶ್ರೀನಿವಾಸರಾವ್ | 21 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | -ದಿ|| ಶ್ರೀನಿವಾಸನ್ ಬಿ.ಎನ್. | 23 |
| ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಸೇವಾಪ್ರುಘಣ್ಯನು-ಶ್ರೀ ಆಂಜನೇಯಸ್ವಾಮಿ | ---- | 28 |
| ಹರಿಕಥಾಮೃತ ಸಾರ ಮಹಿಮೆ ಬಲು ಅಪಾರ (ಮಾತೃಕ ಸಂಧಿ) | -ಪ್ರಿಯಾ ಪ್ರಾಣೇಶ ಹರಿದಾಸ | 31 |
| ಮಹಾಕ್ಷಾತ್ರೆ ವಿದುಲೆ | -ಡಾ|| ವಾಣಿಶ್ರೀ ಬಿ.ಎಮ್. | 33 |
| ಆರೋಗ್ಯ ಸಂರಕ್ಷಣೆಗೆ ಕರಿಬೇವು | -ಡಿ.ಎಸ್.ಬದ್ರಿನಾಥ್ | 34 |
| ತಿರುವೆಳ್ಳಿಯಂಗುಡಿ | - ಸೂರ್ಯವಂಶಿ | 37 |
| ಸಂಸ್ಕೃತ ಕಲಿಯೋಣ | -ವಿ. ಪ್ರದೀಪ್ ಕುಮಾರ್ | 39 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ. ಆರ್. ನರಸಿಂಹನ್ | 42 |
| ಶ್ರೀವೆಂಕಟಾಚಲ ಮಹಾತ್ಮೆ | -ಶ್ರೀಮತಿ. ಎನ್.ಪಾರ್ವತಿ | 44 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ|| ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ನಮಸ್ಕಾರದ ಪ್ರಾಮುಖ್ಯತೆ | - ಪ್ರಣವ | 48 |
| ಚಿತ್ರಕಥೆ -ಹರಿನಾಮ ಮಹಿಮೆ | -ಶ್ರೀನಿವಾಸ ದೀಕ್ಷಿತರು | 52 |


ಮುಖಚಿತ್ರ - ವಜ್ರಕವಚ, ಮುತ್ತಿನಕವಚ, ಸ್ವರ್ಣಕವಚ ಅಲಂಕಾರದಲ್ಲಿ ಶ್ರೀ ಮಲೆಯಪ್ಪ ಸ್ವಾಮಿಯವರು, ತಿರುಮಲೆ

ಹಿಂಬದಿಚಿತ್ರ - ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳು, ತಿರುಚಾನೂರು


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಂಪಾದಕೀಯ

# ಮಾನವ ಸೇವೆಯೇ ಮಾಧವ ಸೇವೆ

ವಿಷ್ಣುಸಹಸ್ರನಾಮದಲ್ಲಿ ಇರುವ "ಯೋಗೋ ಯೋಗವಿದಾಂ ವರಃ ಎಂಬ ವಿಶಿಷ್ಟವಾದ ಮಾತು. ಇದು ವಿಷ್ಣುವಿನ ಒಂದು ಪ್ರತ್ಯೇಕವಾದ ಗುಣವನ್ನು (ಗುರುತ್ವದ ಪರಿಮಾಣ) ತಿಳಿಯಪಡಿಸುವ ಒಂದು ಶ್ಲೋಕ! "ಯೋಗೋ" ಎಂದರೆ ಮನಸ್ಸಿನ ಸ್ಥೈರ್ಯವನ್ನು ಸೂಚಿಸುತ್ತದೆ. "ಯೋಗೋ" ಎಂದರೆ ಧ್ಯಾನ. "ವಿದಾಂವರಃ" ಎಂದರೆ ಯೋಗ ವಿಧಿಗಳಿಗೆ ಉತ್ತಮನಾದವನು ಎಂದರ್ಥ! ಈ ಪದಗಳು ವಿಷ್ಣುವಿನ ಭಕ್ತರಿಗೆ ಧ್ಯಾನದಲ್ಲಿ ಸ್ಥಿರತ್ವವನ್ನು ಕಲ್ಪಿಸುತ್ತದೆ. ಹಾಗೇ - "ಯೋಗ ಕ್ಷೇಮಂ ವಹಾಮ್ಯಹಂ" ಎಂಬ ವಾಕ್ಯವನ್ನು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ್ದಾನೆ. ಕುರುಕ್ಷೇತ್ರದ ಯುದ್ಧದ ಸಂದರ್ಭದಲ್ಲಿ ಅರ್ಜುನನು ತನ್ನ ಮನಸ್ಸನ್ನು ಸ್ಥಿರಗೊಳಿಸುವುದಕ್ಕೆ ಯೋಗಭಾವನೆ ಮತ್ತು ಆತ್ಮಸಮರ್ಪಣೆಯನ್ನು ತಿಳಿಸುವುದಕ್ಕೆ ಶ್ರೀ ಕೃಷ್ಣನು ಉಪಯೋಗಿಸಿದ ಭಗವದ್ಗೀತೆ ಎಂಬ ಉಪದೇಶವು ಜಗತ್ಪ್ರಸಿದ್ಧವಾಗಿದೆ.

"ಯೋಗ" ಒಂದು ಪ್ರಾಚೀನ ಭಾರತೀಯ ಅಭ್ಯಾಸ ಮತ್ತು ತಂತ್ರಾತ್ಮಕವಾದ ಮಾಧ್ಯಮವಾಗಿದೆ. ಇದು ಮಾನಸಿಕ, ಶಾರೀರಕವಾದದ್ದು, ಇದರಲ್ಲಿ ಮನಸ್ಸು ಮತ್ತು ಶರೀರವು ಸಹಜವಾಗಿ ಸಾಧನೆಯನ್ನು ಮಾಡುತ್ತವೆ. ಯೋಗದಲ್ಲಿ-ವ್ಯಾಯಾಮ, ಪ್ರಾಣಾಯಾಮ, ಧ್ಯಾನ, ಮತ್ತು ಆಧ್ಯಾತ್ಮಿಕವಾದ ಅಭ್ಯಾಸಗಳಿವೆ. ಯೋಗದ ಮುಖಾಂತರ ಮನಸ್ಸನ್ನು ಶಾಂತಗೊಳಿಸಿಕೊಳ್ಳಬಹುದು. ಯೋಗ ಎಂಬ ಅಭ್ಯಾಸವನ್ನು ರೂಢಿಸಿಕೊಂಡು ಸ್ವಚ್ಛವಾದ ಹೃದಯ, ಆರೋಗ್ಯ, ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಪಡೆಯಬಹುದು.

"ಯೋಗಃ ಕರ್ಮಸು ಕೌಶಲ" ಕರ್ಮಸು ಕೌಶಲ ಎನ್ನುವುದು ಕರ್ಮಾನುಷ್ಠಾನವನ್ನು ಸಮರ್ಥವಾಗಿ ನಿರ್ವಹಿಸುವಂತಹ ಸಾಮರ್ಥ್ಯ ಎಂದು ಅರ್ಥ. ಈ ವಿಧದಲ್ಲಿ ವ್ಯಕ್ತಿ ತನ್ನ ಕರ್ತವ್ಯಗಳ ಮೇಲೆ ಆಸಕ್ತಿಯನ್ನು ಹೊಂದದೆ, ನಿಷ್ಕಾಮವಾಗಿ ನಿರ್ವಹಿಸುವ ಯೋಗ್ಯತೆಯನ್ನು ಹೊಂದುತ್ತಾನೆ. ಆದರೆ, ಈ ಯೋಗಾನುಷ್ಠಾನ-ಯೋಗ ಪದ್ಧತಿಯಲ್ಲಿ ಮಾತ್ರವಲ್ಲದೇ ಇತರ ಯೋಗದ ರೀತಿಗಳಲ್ಲಿನ ವಿಭಿನ್ನ ಆಶ್ರಮಗಳಲ್ಲಿನ ವಿಭಿನ್ನ ಕಾರ್ಯಗಳಲ್ಲಿ ಉಪಯೋಗವಾಗುತ್ತದೆ. ಅದಕ್ಕೇ ಭಾರತ ದೇಶವು ಪ್ರಪಂಚದಲ್ಲಿನ ದೇಶಗಳಲ್ಲಿ ಅಗ್ರಗಣ್ಯವಾಗಿ ನಿಂತಿದೆ. ಅದಕ್ಕೇ ಜೂನ್ 21 ರಂದು ಪ್ರತಿವರ್ಷ "ಅಂತರ್ಜಾತೀಯ ಯೋಗ ದಿನ" ಎಂದು ಪಾಲಿಸುತ್ತಿದ್ದೇವೆ.

ತಿರುಮಲೆ ತಿರುಪತಿ ದೇವಸ್ಥಾನದವರು ಕೇವಲ ಭಕ್ತರಿಗೆ ಸ್ವಾಮಿಯ ದರ್ಶನದ ವಿಷಯದಲ್ಲೇ ಅಲ್ಲದೇ ಸಾಮಾಜಿಕ ಸೇವೆಗಳಿಗೂ ಪ್ರಾಮುಖ್ಯತೆಯನ್ನು ನೀಡುತ್ತಿದೆ. ಯೋಗಾ, ಆಯುರ್ವೇದ, ಅಲೋಪತಿ ವೈದ್ಯದೊಂದಿಗೆ ಕೂಡಿರುವಂತಹಾ ವ್ಯಾಧಿ ನಿವಾರಣೆ, ರೋಗನಿರೋಧಕ ಶಕ್ತಿಯಿರುವ ಚಿಕಿತ್ಸೆಗಳು ಮತ್ತು ಪ್ರೇಮಕ್ಕೆ ಆಧಾರವಾದ ಚಿಕ್ಕ ಮಕ್ಕಳ ವಿಷಯದಲ್ಲಿ ತಮ್ಮ ದೃಷ್ಟಿಯನ್ನು ಸಾರಿದೆ, ಹೇಗೆಂದರೆ-

ತಿರುಪತಿಯಲ್ಲಿರುವ ಯೋಗಾಧ್ಯಯನ ಕೇಂದ್ರದ ಮೂಲಕ ಶಾರೀರಕ, ಮಾನಸಿಕ ರುಗ್ಮತೆಗಳನ್ನು ಹೋಗಲಾಡಿಸುವುದು, ಆಯುರ್ವೇದ ಆಸ್ಪತ್ರೆಯ ಮೂಲಕ ಆಯುರ್ವೇದ ಪದ್ಧತಿಯೊಂದಿಗೆ ರೋಗಗಳನ್ನು ಗುಣಪಡಿಸುವುದು, ಆಧುನಿಕ ವೈದ್ಯದೊಂದಿಗೆ ಶ್ರೀವೇಂಕಟೇಶ್ವರ ವೈದ್ಯ ವಿಜ್ಞಾನ ಸಂಸ್ಥೆಯ (ಸ್ವಿಮ್ಸ್) ಮೂಲಕ ಆಲೋಪತಿ ವೈದ್ಯವನ್ನು,ಬರ್ಡ್ ಮೂಲಕ ಮೂಳೆಗಳ ಅಂಗ ವಿಕಲತೆಯನ್ನು ಸರಿಮಾಡುವುದು, ಶ್ರೀಪದ್ಮಾವತಿ ಹೃದಯಾಲಯಗಳ ಮೂಲಕ ಚಿಕ್ಕಮಕ್ಕಳಿಗೆ ಸಂಕ್ರಮಿಸಿರುವಂತಹಾ ಹೃದಯಕ್ಕೆ ಸಂಬಂಧಿಸಿದ ವ್ಯಾಧಿಗಳಿಗೆ ಚಿಕಿತ್ಸೆಯನ್ನು ಮಾಡಿಸುವುದು ಹಾಗೆಯೇ ತಿರುಮಲೆಯಲ್ಲಿ ಭಕ್ತರಿಗೆ ಅತ್ಯವಸರ ಚಿಕಿತ್ಸೆಯನ್ನು ನೀಡುವುದಕ್ಕಾಗಿ ಅಶ್ವನಿವೈದ್ಯಶಾಲೆಯನ್ನು ಏರ್ಪಾಟು ಮಾಡಿ ತಿರುಮಲೆ ತಿರುಪತಿ ದೇವಸ್ಥಾನ ಎಂಬ ಮಹತ್ವ ಪೂರ್ಣವಾದ ಧಾರ್ಮಿಕ ಸಂಸ್ಥೆಯು ಭಕ್ತರ ಸೇವೆಯಲ್ಲಿ ಮತ್ತು ಆರೋಗ್ಯ ಕಾರ್ಯಕ್ರಮದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಿದೆ. ಅದಕ್ಕೆ "ಮಾನವ ಸೇವೆಯೇ ಮಾಧವ ಸೇವೆ" ಎನ್ನುತ್ತಾ ತಿರುಮಲೆ ತಿರುಪತಿ ದೇವಸ್ಥಾನದವರು ಎಲ್ಲದರಲ್ಲೂ ಮುಂದಿದ್ದಾರೆ.

**!!ಓಂ ನಮೋ ವೇಂಕಟೇಶಾಯ !!**

# ಸಾರಸ್ವತ ಕುಲಚಂದ್ರಮ ಶ್ರೀ ಶ್ರೀ ಪಾದರಾಜರು



– ಎಸ್. ಕೆ. ಗೋಪಿನಾಥ್
9844201272

ಶ್ರೀರಂಗವಿಠಲನ ದಿವ್ಯ ಪಾದಾರವಿಂದಗಳನ್ನು ಕಂಡು ಪಾವನರಾದ ಪುಣ್ಯಶ್ಲೋಕರು ಶ್ರೀ ಶ್ರೀ ಪಾದರಾಜರು. ಹರಿದಾಸ ಪರಂಪರೆಯು ಭವ್ಯ ಮಂಗಳಕರ ತರಂಗಿಣಿಯಂತೆ ಹರಿಯಲು ಸ್ಫೂರ್ತಿಯ ಸೆಲೆ ನೀಡಿದ ಚೈತನ್ಯ ಪುರುಷರು ಶ್ರೀಪಾದರಾಜರು. ಸುಲಲಿತ ಸಾಹಿತ್ಯವನ್ನೂ ಸುಮಧುರ ಸಂಗೀತವನ್ನೂ, ಸರಿಯಾದ ಹದದಲ್ಲಿ ಸಹಸ್ಪಂದಿಸಿ ಕರ್ನಾಟಕದ ಸಹೃದಯರಿಗೆ,ಸಾತ್ವಿಕ ಚೇತನರಿಗೆ ಹೊಸದೊಂದು ದಿಗಂತವನ್ನೇ ತೆರೆದು ತೋರಿಸಿದ ಮಹಾನುಭಾವರು ಶ್ರೀಪಾದರಾಜರು. ಸಂಸ್ಕೃತ ಕಾವ್ಯಗಳನ್ನೂ, ಸಂಸ್ಕೃತದ ಮಹಾಮಂತ್ರಗಳನ್ನು ವೇದೋಪನಿಷತ್ತುಗಳನ್ನು ಸಾಮಾನ್ಯ ಮತಿಯವರಿಗೂ ಅರ್ಥವಾಗುವ ತಿಳಿಯಾದ ಸರಳ ಕನ್ನಡದಲ್ಲಿ ಸಾರಿ ಹೇಳಿದ ಸಾರಸ್ವತ ಕುಲಚಂದ್ರರು ಶ್ರೀಶ್ರೀಪಾದರಾಜರು. ಶ್ರೀಮನ್ ಮಧ್ವಾಚಾರ್ಯ ಪರಂಪರೆಯ ಸವ್ಯಸಾಚಿಯತೀಶ್ವರರಾಗಿದ್ದರೂ, ಹರಿದಾಸ ಹೃದಯದ ಹೊಸದೊಂದು ದಿಬ್ಬಣ ಹೊರಡಿಸಿ ಸಾಂಸ್ಕೃತಿಕ ಕ್ರಾಂತಿಯ ನವೋದಯಕ್ಕೆ ನಾಂದಿ ಹಾಡಿದ ನಾದ ಬ್ರಹ್ಮರ್ಷಿಗಳು ಶ್ರೀಶ್ರೀಪಾದರಾಜರು.

ಶ್ರೀ ಶ್ರೀಪಾದರಾಜರ ತಂದೆಯ ಹೆಸರು ಶೇಷಗಿರಿ ಆಚಾರ್ಯ, ತಾಯಿಯ ಹೆಸರು ಗಿರಿಯಮ್ಮ. ಮೈಸೂರು ಸೀಮೆಯ ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರು ಸಮೀಪದ ಹಳ್ಳಿಯಲ್ಲಿ ಶೇಷಗಿರಿ ದಂಪತಿಗಳು ಒಂದು ಸಣ್ಣ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದರು. ಇವರ ಪಾಲಿಗೆ ಇದ್ದದ್ದು ಒಂದು ಸಣ್ಣ ತೋಟ ಮಾತ್ರ. ಅದರಲ್ಲಿ ಒಂದೆರಡು ತೆಂಗು, ಬಾಳೆ ಬೆಳೆಸಿಕೊಂಡಿದ್ದರು. ಒಂದೆರಡು ಹಸುಗಳನ್ನು ಕಟ್ಟಿ ಗೋರಕ್ಷಣೆ ಮಾಡಿಕೊಂಡಿದ್ದರು. ಬಡತನದ ಜೀವನದಲ್ಲಿ ಭಗವಂತನನ್ನು ಆರಾಧಿಸುತ್ತ ತೃಪ್ತರಾಗಿದ್ದರು. ಈ ದಂಪತಿಗಳ ಉದರದಲ್ಲಿ ಜನಿಸಿದವರೇ ಕಥಾನಾಯಕರಾದ ಲೋಕ ವಿಖ್ಯಾತ ಶ್ರೀ ಶ್ರೀಪಾದರಾಜರು. ಪೂರ್ವದಲ್ಲಿ ಅವರಿಗೆ ಹೆಸರಿಸಿದ ಜನ್ಮನಾಮ ಶ್ರೀಲಕ್ಷ್ಮೀನಾರಾಯಣ. ಈ ಬಾಲಕನು ತಂದೆಯ ಬಳಿಯೇ ಅಷ್ಟಿಷ್ಟು ಅಕ್ಷರಾಭ್ಯಾಸ ಮಾಡುತ್ತ ಮನೆಯ ಕೆಲಸಕ್ಕೆ ನೆರವಾಗಿ ದನಗಳನ್ನು ಊರ ಗುಡ್ಡದ ಬಳಿ ಮೇಯಿಸಿಕೊಂಡು ಕಾಲ ಕಳೆಯುತ್ತಿದ್ದನು.

ಆ ಊರಿನ ಹತ್ತಿರದಲ್ಲಿ ಮಹಾತಪಸ್ವಿಗಳಾದ ಶ್ರೀಪುರುಷೋತ್ತಮ ತೀರ್ಥರು ನೆಲೆಸಿ ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡಿದ್ದರು. ಇವರು ಲಕ್ಷ್ಮೀ ನಾರಾಯಣ ದೊಡ್ಡಮ್ಮನ ಮಗನಿಗೆ ಸನ್ಯಾಸ ದೀಕ್ಷೆ ಕೊಟ್ಟಿದ್ದರು. ಅವರೇ "ಶ್ರೀ ಬ್ರಹ್ಮಣ್ಯ ತೀರ್ಥರು" ಎಂಬ ಹೆಸರಿನಿಂದ ಪ್ರಸಿದ್ಧರಾದವರು. ಕಣ್ವನದಿಯ ತೀರದ ಪ್ರಶಾಂತ ವಾತಾವರಣದಲ್ಲಿ ಅಬ್ಬೂರು ಮಠ ಎಂದು ಪ್ರಖ್ಯಾತಿ ಹೊಂದಿ ಅಲ್ಲಿಯೇ ವೃಂದಾವನಸ್ಥರಾಗಿರುವರು. ಒಮ್ಮೆ ಶ್ರೀಮನ್ಮಧ್ವಾಚಾರ್ಯ ಸಂಸ್ಥಾನದ ನೇರ ಶಿಷ್ಯರಾದ ಪದ್ಮನಾಭತೀರ್ಥರ ಮಠದ ಪೀಳಿಗೆಯಲ್ಲಿ ಏಳನೇಯವರಾದ ಶ್ರೀ ಸ್ವರ್ಣವರ್ಣ ತೀರ್ಥರು ಶ್ರೀರಂಗಪಟ್ಟಣಕ್ಕೆ ಕಾವೇರಿ ಸ್ನಾನಕ್ಕಾಗಿ ಬಂದಿದ್ದರು. ಅಲ್ಲಿಂದ ನೇರವಾಗಿ ಶ್ರೀಪುರುಷೋತ್ತಮ ತೀರ್ಥರ ಭೇಟಿಗಾಗಿ ಪುರುಷೋತ್ತಮ ತೀರ್ಥರ ಮಠಕ್ಕೆ ಆಗಮಿಸಿದರು. ಸತ್ಪುರುಷರೀರ್ವರ ಸಮಾಗಮವು ಗಂಗಾ - ಯಮುನಾ ಸಂಗಮದಂತಾಯಿತು.

ಶ್ರೀ ಸ್ವರ್ಣವರ್ಣ ತೀರ್ಥರು,ಶ್ರೀಬ್ರಹ್ಮಣ್ಯತೀರ್ಥ ನಾಮದಿಂದ ಶೋಭಿಸುತ್ತಿದ್ದ ಬಾಲಯತಿಗಳನ್ನು ಅಲ್ಲಿ ನೋಡಿ ಪರಮಾನಂದವಾಯಿತು. ತಮಗೂ ಅಂತಹ ಒಬ್ಬ ವರ್ಚಸ್ವಿ ಬಾಲಕ ಶಿಷ್ಯನಾಗ ಬೇಕೆಂದು ಬಯಸಿದರು. ಅವರ ಇಂಗಿತವನ್ನು ಶ್ರೀಪುರುಷೋತ್ತಮ ತೀರ್ಥರಲ್ಲಿ ಭಿನ್ನವಿಸಿದರು. ಆಗ ಹರಿ ಕೃಪೆಯಿದ್ದರೆ ಆ ಭಾಗ್ಯವು ಇಲ್ಲಿಯೇ ಒದಗಬಹುದು ಎಂದರು ಶ್ರೀ ಪುರುಷೋತ್ತಮ ತೀರ್ಥರು. ಮಾರನೆಯ ದಿನ ಶ್ರೀಪುರುಷೋತ್ತಮ ತೀರ್ಥರು ಹತ್ತಿರದಲ್ಲೆ ವಾಸಿಸುತ್ತಿರುವ ಶೇಷಗಿರಿ ಮತ್ತು ಗಿರಿಯಮ್ಮ ದಂಪತಿಗಳನ್ನು ಮಗನ ಸಮೇತ ಮಠಕ್ಕೆ ಬರಬೇಕೆಂದು ಹೇಳಿ ಕಳುಹಿಸಿದರು. ಗುರ್ವಾಜ್ಞೆ ಎಂದು ತಿಳಿದು ಮಗನನ್ನು ಕರೆದುಕೊಂಡು ಶೇಷಗಿರಿ ದಂಪತಿಗಳು ಮಠಕ್ಕೆ ಬಂದರು.

ಶ್ರೀ ಪುರುಷೋತ್ತಮತೀರ್ಥರು ಬಂದ ದಂಪತಿಗಳಿಗೆ ಆಶೀರ್ವದಿಸಿದರು. ನಂತರ ಮಗನಾದ ಲಕ್ಷ್ಮೀನಾರಾಯಣನನ್ನು ಶ್ರೀಸ್ವರ್ಣವರ್ಣ ತೀರ್ಥರಲ್ಲಿ ಶಿಷ್ಯನಾಗಿ ಬಿಡಲು ಸೂಚಿಸಿದರು. ಶೇಷಗಿರಿ ದಂಪತಿಗಳು ಒಂದು ಕ್ಷಣ ಚಿಂತೆಗೀಡಾದರು. ಆಗ ಶ್ರೀಸ್ವರ್ಣವರ್ಣ ತೀರ್ಥರು ಹೇಳಿದರು. ಲಕ್ಷ್ಮೀನಾರಾಯಣನ ಉಪನಯನವು ಮಠದ ವತಿಯಿಂದಲೇ ನಡೆಯುವುದಾಗಿಯೂ, ಮುಂದಿನ ವಿದ್ಯಾಭ್ಯಾಸವೂ ಇಲ್ಲಿಯೇ ನಡೆಯುವುದಾಗಿಯೂ, ನೀವು ದಂಪತಿಗಳು ಸಹ ಇನ್ನು ಮುಂದೆ ಇಲ್ಲೇ ಇರಬೇಕೆಂದು ಸೂಚಿಸಿದರು. ಆಗ ಶೇಷಗಿರಿ ದಂಪತಿಗಳು ಸಂತೋಷದಿಂದ ಶ್ರೀಪಾದಾನುಗ್ರಹವಾದ ಮೇಲೆ ಪ್ರತಿಯಾಡಲು ಶಕ್ತನಲ್ಲ, ಎಲ್ಲವೂ ಹರಿಚಿತ್ತ, ಎಲ್ಲವೂ ಗುರುಚಿತ್ತ ಎಂದು ಸಮ್ಮತಿಸಿದರು.

ಗುರ್ವನುಗ್ರಹದಿಂದ ಲಕ್ಷ್ಮೀನಾರಾಯಣನು ಕಾಲ ಕ್ರಮದಲ್ಲಿ ವಯಸ್ಕನಾದಂತೆ ಮಹಾ ಪಂಡಿತನಾದನು. ಶ್ರೀ ಸ್ವರ್ಣ ವರ್ಣ ತೀರ್ಥರು ಶ್ರೀರಂಗ ಕ್ಷೇತ್ರದಲ್ಲಿ ವಾಸ ಮಾಡಿದರು. ನಂತರ ತಮ್ಮ

ಪ್ರಚಾರ ಮಾಡುತ್ತಾ ಹೊರಟವರು ಮುಳುಬಾಗಿಲು ಕ್ಷೇತ್ರಕ್ಕೆ ಬಂದರು. ಮುಳುಬಾಗಿಲು ಶ್ರೀ ನೃಸಿಂಹತೀರ್ಥದ ಸನ್ನಿಧಿಯಲ್ಲಿ ಯೋಗಾನರಸಿಂಹನ ಕ್ಷೇತ್ರವೂ ಆಗಿದ್ದು ಅಲ್ಲಿಯ ಪ್ರಶಾಂತತೆಗೆ ಮಾರು ಹೋಗಿ ಅಲ್ಲಿಯೇ ತಮ್ಮ ಮಠವನ್ನು ಸ್ಥಾಪಿಸಿ ನೆಲೆಯಾಗಿ ನಿಂತರು.ಇವರಿಗಿದ್ದ ಅನೇಕ ಶಿಷ್ಯರ ಬಳಗದಲ್ಲಿ ಪ್ರಮುಖರಾದವರು ಶ್ರೀವ್ಯಾಸರಾಜರು. ಸಾರಸ್ವತ ಪ್ರಪಂಚದ ರತ್ನತ್ರಯಗಳೆಂದೇ ಖ್ಯಾತವಾದ ಚಂದ್ರಿಕಾ, ನ್ಯಾಯಾಮೃತ, ತರ್ಕತಾಂಡವ ಎಂಬ ಉದ್ಗ್ರಂಥಗಳನ್ನು ಮತ್ತು ಹಲವಾರು ಕನ್ನಡ ಪದ ಪದ್ಯಗಳನ್ನು ರಚಿಸಿ ಸಂಸ್ಕೃತ ಮತ್ತು ಕನ್ನಡ ಭಾಷಾ ನೃತ್ಯ ತಾಂಡವವನ್ನು ಲೀಲಾಜಾಲವಾಗಿ ಮಾಡುತ್ತಾ ಭಗವಂತನನ್ನು ಪರಿಪರಿಯಾಗಿ ಅಲಂಕಿಸಿದ ಮಹಾನುಭಾವರು ಶ್ರೀ ವ್ಯಾಸರಾಜರು. ಇಂತಹ ಅಮೂಲ್ಯ ರತ್ನವನ್ನು ಕೊಟ್ಟಕೀರ್ತಿ ಶ್ರೀಪಾದರಾಜರಿಗೆ ಸೇರುತ್ತದೆ.

### ಶ್ರೀಪಾದರಾಜರ ಕಾಲದಲ್ಲಾದ ಸುಧಾರಣೆಗಳು:

ಶ್ರೀ ಪಾದರಾಜರು ಮಠದ ಸರ್ವಾಧಿಪತ್ಯ ವಹಿಸಿದ ಕೂಡಲೆ, ಭಾಗವತಧರ್ಮ ಪ್ರಚಾರದಿಂದ ಸಮಾಜೋದ್ಧಾರವಾದೀತಲ್ಲದೆ, ಪಾಂಡಿತ್ಯ ಪ್ರದರ್ಶನದಿಂದ ಪಾಮರರ ಉದ್ಧಾರವಾಗಲಾರದೆಂಬುದನ್ನು ಅನುಭವದಿಂದ ತಿಳಿದರು. ಸಮಾಜದ ಎಲ್ಲ ವರ್ಗದ ಜನರಿಗೂ ಭಗವಂತನ ಮನೆ ಬಾಗಿಲು ತೆಗೆದಿದೆ ಎಂಬ ಆಧ್ಯಾತ್ಮಿಕ ರಹಸ್ಯವನ್ನು ಮುಟ್ಟಿಸಲು ಯೋಚಿಸಿದರು. ಜಗತ್ತಿನೊಂದಿಗೆ ಜಗನ್ನಾಥನ ಚಿಂತನೆಯೂ ಜೀವನದ ಅತ್ಯಂತ ಪ್ರಮುಖ ಅಂಗ ಎಂಬ ಶಾಸ್ತ್ರ ಚಿಂತನೆಯನ್ನು ಭೋದಿಸಲು ನಿಶ್ಚಯಿಸಿದರು. ಜನ ಸಾಮಾನ್ಯರನ್ನು ಜನಾರ್ದನನತ್ತ ಸೆಳೆಯುತ್ತಲೇ, ಜನಾರ್ದನನ ಭಕ್ತರನ್ನು ಜನತೆಯತ್ತ ಮುಖ ಮಾಡಿಸಿ, ಅಲ್ಲಿಯೂ ಜನಾರ್ದನನನ್ನು ಕಾಣುವ ಶಿಕ್ಷಣ ಪ್ರಚಾರ ಮಾಡಲು ಯೋಚಿಸಿದರು.ಆ ಕಾಲದ ಪಂಡಿತರಿಗೆ ಗೀರ್ವಾಣ, ವೈದಿಕ, ಸಂಸ್ಕೃತ ಭಾಷೆಯಲ್ಲದೆ ಬೇರೊಂದು ಭಾಷೆಯ ಹೆಸರೇ ಅಸಹನೀಯವಾಗಿದ್ದಿತು. ಸ್ನಾನಾನಂತರ ಪ್ರಾಕೃತ ಭಾಷೆಯಲ್ಲಿ ಮಾತನಾಡುವುದೂ ಶಿಷ್ಟಾಚಾರಕ್ಕೆ ವಿರೋಧವೆಂಬಷ್ಟು ಕಪಿಮುಷ್ಟಿ ಜನರಾಗಿದ್ದರು. ಮಾತೃಭಾಷೆಯಾದ ಕನ್ನಡದಲ್ಲಿ ಯಾವ ಧರ್ಮ ಪ್ರಭೋದಕ ಗ್ರಂಥಗಳು ಇರದ ಕಾಲವಾಗಿತ್ತು. ಪಂಡಿತರಿಗೆ ಮಾತ್ರವೇ ಭಗವತ್ತತ್ವ ತಿಳಿಯುತ್ತಿತ್ತೇ ಹೊರತು ಪಾಮರರಿಗಿಲ್ಲ. ಆ ಕಾಲದ ಸಾಮಾನ್ಯ ಜನರಿಗೆ ನಮ್ಮ ಪುರಾಣಗಳು ಏನು ಹೇಳುವುದು, ನಮ್ಮ ಶಾಸ್ತ್ರದ ಸಾರಾಂಶವೇನು, ನಮ್ಮ ದಿನಚರ್ಯದ ನಡಾವಳಿಕೆಗಳು ಹೇಗಿರಬೇಕು ಎಂಬ ಸಾಮಾನ್ಯ ವಿಷಯವನ್ನು ತಿಳಿಯಬೇಕಾದರೂ, ಪಂಡಿತರ ಮನೆಯ ಬಾಗಿಲು ತಟ್ಟಬೇಕಾಗಿದ್ದಿತು. ಆದರೆ ಪಂಡಿತರಿಗೆ ಪಾಮರರ ಮೇಲೆ ತಾತ್ಸಾರವಿದ್ದಿತು.

ಇಂತಹ ಸಮಯದಲ್ಲಿ ಶ್ರೀಪಾದರಾಜರು ಕನ್ನಡದಲ್ಲಿ ಧರ್ಮಗ್ರಂಥಗಳನ್ನು ಪರಿವರ್ತನೆ ಮಾಡಿ ಜ್ಞಾನೋಪದೇಶ ಮಾಡಬೇಕೆಂಬ ದೀಕ್ಷಾಬದ್ಧರಾದರು. ಅದಕ್ಕಾಗಿ ಭಾಗವತರ ತಂಡವೊಂದನ್ನು ನಿರ್ಮಿಸಿದರು. ಪೂಜಾ ಕಾಲದಲ್ಲಿ ವೈದಿಕ ಪಂಡಿತರಿಂದ ವೇದ ಪಾರಾಯಣ ಮಾಡಿಸುವಂತೆ ಭಾಗವತರ ಮುಖದಿಂದ ಕನ್ನಡದ ದೇವರ ನಾಮಗಳನ್ನು ಬರೆದು ಹಾಡಿಸಿದರು. ಅದುವರೆಗೆ ಯಾವ ಮಠದಲ್ಲೂ ಪ್ರಾಕೃತ ಪದ್ಯಗಳನ್ನು ಪೂಜಾ ಕಾಲದಲ್ಲಿ ಹಾಡಿಸುವ ಸಂಪ್ರದಾಯವಿರಲಿಲ್ಲ. ಶ್ರೀ ಪಾದರಾಜರು ಕನ್ನಡದ ದೇವರ ನಾಮಗಳನ್ನು ಮಾಡಿ ಪೂಜಾ ಕಾಲದಲ್ಲಿ ಭಾಗವತರ ಮುಖದಿಂದ ಹಾಡಿಸಿದ ಸಾಹಸವು ಸಾಮಾನ್ಯವಾದುದಲ್ಲ. ಪ್ರಾರಂಭದಲ್ಲಿ ಅವರ ರಚನೆಗಳಿಗೆ ಅಂಕಿತವನ್ನು ತಮ್ಮ ಸಂಸ್ಥಾನದ ಆರಾಧ್ಯದೈವವಾದ "ಗೋಪೀನಾಥ'' ನ ಅಂಕಿತದಲ್ಲಿ ಕೃತಿಗಳನ್ನು ರಚಿಸಿದರು. ನಂತರ ಒಮ್ಮೆ ಅವರು ಪಂಡರಾಪುರ ಯಾತ್ರೆಗೆ ತೆರಳಿದಾಗ ಅಲ್ಲಿ ಸಂಪುಟವೊಂದು ದೊರೆತು ಅದರಲ್ಲಿದ್ದ ರಂಗ ವಿಠಲನ ಮೂರ್ತಿ ದರ್ಶನವಾದ ಬಳಿಕ "ರಂಗವಿಠಲ'' ಎಂಬ ಅಂಕಿತದಲ್ಲೆ ದೇವರ ನಾಮವನ್ನು ಬರೆದರು. ಪೂಜಾ ಕಾಲದಲ್ಲಿ ಹಾಡಿಸುತ್ತಿದ್ದ ಹಾಡುಗಳೆಂದರೆ, ಅವರೇ ರಚಿಸಿದ ಭ್ರಮರಗೀತಾ, ವೇಣುಗೀತಾ, ಗೋಪೀ ಗೀತೆಗಳು. ಸೂಕ್ಷ್ಮಾತಿ ಸೂಕ್ಷ್ಮವಾದ ಭಾವನೆಗಳನ್ನು, ಸಂವೇದನೆಗಳನ್ನು ಅಭಿವ್ಯಕ್ತಿಸಲು ಸಂಗೀತವೇ ಸಮರ್ಥವಾದ ಮಾಧ್ಯಮವಾಗಬಲ್ಲದು ಎಂಬುದನ್ನು ಶ್ರೀಪಾದರಾಜರು ಸಮರ್ಥಿಸಿದರು. ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳ ಸಮ್ಮಿಳಿತ ಕೀರ್ತನೆಗಳನ್ನು ಮೊಟ್ಟಮೊದಲ ಬಾರಿಗೆ ಕನ್ನಡದಲ್ಲಿ ರಚಿಸಿ ಪ್ರಚಲಿತಗೊಳಿಸಿದವರು ಶ್ರೀ ಪಾದರಾಜರು. ಒಂದು ನಿರ್ದಿಷ್ಟವಾದ ಕಾಲದ ಅವಧಿಯಲ್ಲಿ ನಿರ್ದಿಷ್ಟವಾದನಾದ ವ್ಯವಸ್ಥೆಯನ್ನು ನಾದ ಮಾಧುರ್ಯವನ್ನು ಸಾಹಿತ್ಯ ಗಾಂಭೀರ್ಯವನ್ನು ಅರ್ಥವೈವಿಧ್ಯವನ್ನು ಶ್ರೀಹರಿಯ ಅನಂತ ಗುಣವರ್ಣನೆಯನ್ನು ಒಂದೇ ಚಿಕ್ಕ ಕೃತಿಯಲ್ಲಿ ಮಾಡುವ ಸಾಮರ್ಥ್ಯವನ್ನು ಕಲಾತ್ಮಕತೆಯನ್ನು ಅಲೌಕಿಕ ಶಕ್ತಿಯನ್ನು ಮೊದಲಿಗೆ ಅದ್ಭುತವಾಗಿ ಪ್ರತಿಪಾದಿಸಿದವರು ಶ್ರೀ ಶ್ರೀ ಪಾದರಾಜರು.

ಆತ್ಮಸಂಸ್ಕಾರದ ಶುದ್ಧತೆ, ದೈವೀ ಆನಂದದ ಅಲೌಕಿಕ ಸಿದ್ಧತೆ ಗಳ ಸಿದ್ಧ ಪುರುಷರಾಗಿದ್ದ ಶ್ರೀ ಪಾದರಾಜರು ಸಂಗೀತ ಕಲೆಯ ಪ್ರಾಣ ಸ್ವರೂಪವಾದ, ಸಂಗೀತದ ಹೃದಯವೆನಿಸಿರುವ, ಸಂಗೀತದ ನವ ದಿಗಂತಗಳನ್ನು ಬೆಳಗುವ ಸಪ್ತ ಜ್ಯೋತಿಗಳಾದ ಶೃತಿ ಶುದ್ಧತೆ, ರಸ ಪ್ರಾಧಾನ್ಯತೆ, ಲಯಶುದ್ಧತೆ, ಸಂಪ್ರದಾಯ,ಗಮಕಾಲಂಕಾರ ಶೋಭೆ, ಸಾಹಿತ್ಯ ಶುದ್ಧತೆ ಹಾಗೂ ಆನಂದ ಪೂರ್ಣತೆಗಳನ್ನು ಅನುಪಮವಾಗಿ ಅಮೋಘವಾಗಿ ತಮ್ಮ ಕೀರ್ತನೆಗಳಲ್ಲಿ ಅಭಿ



ಸ್ಥಾನದಲ್ಲಿ ಶ್ರೀಲಕ್ಷ್ಮೀನಾರಾಯಣನಿಗೆ ಆಶ್ರಮವನಿತ್ತು "ಶ್ರೀಲಕ್ಷ್ಮೀನಾರಾಯಣ ಯೋಗಿ'' ಎಂದು ನಾಮಕರಣ ಮಾಡಿದರು. ಪೀಠಾರೋಹಣ ಮಾಡಿದುದೇ ತಡ, ಶ್ರೀಲಕ್ಷ್ಮೀನಾರಾಯಣ ಯೋಗಿ ಗಳ ಪ್ರತಿಭೆಯು ಶತಾಧಿಕವೆನಿಸಿತು. ಶ್ರೀ ರಾಘವೇಂದ್ರ ಮಠದ ಪೂರ್ವ ಪೀಳಿಗೆಯ ಶ್ರೀವಿಬುಧೇಂದ್ರ ತೀರ್ಥರಲ್ಲಿ ಹೆಚ್ಚಿನ ವ್ಯಾಸಂಗ ಮಾಡುವ ಮತ್ತು ಅವ ರೊಡನೆ ಸಂಚರಿಸುವ ಮಹಾ ಭಾಗ್ಯ ದೊರೆಯಿತು. ವಿದ್ವತ್ಸಭೆಗಳಲ್ಲಿ ಪರಮತ ಖಂಡನೆ ಸ್ವಮತ ಸ್ಥಾಪನೆಯಿಂದಾಗಿ ಶ್ರೀಲಕ್ಷ್ಮೀನಾರಾಯಣ ಯೋಗಿಗಳ ಖ್ಯಾತಿಯು ಎಲ್ಲಾ ಕಡೆಗೆ ವ್ಯಾಪಿ ಸಿತು. ಇವರೇ ಮುಂದೆ "ಶ್ರೀಶ್ರೀಪಾದರಾಜರೆಂದು'' ಪ್ರಖ್ಯಾತಿ ಪಡೆದು ಶ್ರೀರಂಗಕ್ಕೆ ಬಂದು ತಮ್ಮ ಕಾರ್ಯಕ್ಷೇತ್ರವನ್ನು ಅಲ್ಲಿಯೇ ಸ್ಥಾಪಿಸಿದರು. ಶ್ರೀಸ್ವರ್ಣವರ್ಣ ತೀರ್ಥರು ವೃಂದಾವನಸ್ಥರಾದ ಬಳಿಕ ತಾವೇ ಪೂರ್ಣ ಪ್ರಮಾಣದಲ್ಲಿ ಆ ಸಂಸ್ಥಾನವನ್ನು ವಹಿಸಿಕೊಂಡರು.

ಆಚಾರ್ಯ ಮಧ್ವರು ಸಂಸ್ಥಾನಕ್ಕೆ ಕೊಟ್ಟಿದ್ದ ಶ್ರೀ ಗೋಪಿನಾಥ ಮೂರ್ತಿಯನ್ನು ಪೂಜಿಸುತ್ತ ದ್ವೈತಮತ ತತ್ವಗಳನ್ನು

ವ್ಯಕ್ತಿಸಿ ಸಂಗೀತ ಸಾಹಿತ್ಯ ದೆತ್ತರ ಬಿತ್ತರಗಳನ್ನು ವ್ಯಾಪವಾಗಿ ಹೆಚ್ಚಿಸಿದರು. ಪ್ರತಿಯೊಬ್ಬ ವ್ಯಕ್ತಿಯು ಶ್ರೀಹರಿಯ ದಾಸಾನುದಾಸನಾಗಿ ಬಾಳ ಬೇಕೆಂಬುದೇ ಶ್ರೀ ಪಾದರಾಜರ ಅಪೇಕ್ಷೆ, ಸಂಸಾರದಲ್ಲಿ 'ಸತಿಯ ಅನು ಕೂಲಬೇಕು, ಸುತನಲ್ಲಿ ಗುಣವಿರಬೇಕು, ಮತಿವಂತನಾಗ ಬೇಕು, ಮತ ಒಂದಾಗಿರಬೇಕು'' ಎಂದು ಸತ್ಸಂಗದ ಅಗತ್ಯವನ್ನು ವಿವೇಕ, ಕುಟುಂಬ ನೆಮ್ಮದಿಗಳ ಅಗತ್ಯವನ್ನು ಮನಮುಟ್ಟುವಂತೆ ತಮ್ಮ ಕೃತಿಗಳಲ್ಲಿ ನಿರೂಪಿಸಿದ್ದಾರೆ. ಉಂಟಾದ ಕಾಲಕ್ಕೆ ನೆಂಟರು ಇಷ್ಟರು ಬಂಟರಾಗಿ ಬಾಗಿಲ ಕಾಯ್ವರು, ಉಂಟಾದ ತನತಪ್ಪಿ ಬಡ ತನ ಬಂದರೆ ಒಂಟೆಯಂತೆ ಗೋಣ ಮೇಲೆತ್ತುವರು ಎಂದು ಹೇಳಿ ಅಜ್ಞಾನದ ಮಂಪರಿನಲ್ಲಿ ವೈಭವದ ಅಮಲಿನಲ್ಲಿ ಬೀಗುತ್ತಿರುವವರಿಗೆ ಎಚ್ಚರಿಕೆ ನೀಡಿದ್ದಾರೆ. ಮುಕ್ತಿಯನ್ನು ಬಯಸುವ ಸುಜನರಿಗೆ "ಶಕ್ತಿ ಬೇಕು, ಭಕ್ತಿಬೇಕು,ವಿರಕ್ತಿಬೇಕು, ಸರ್ವಶಕ್ತಿಬೇಕು, ಎಂದು ಹೇಳಿ ಸಂಯಮ, ಸಹನೆ, ಭಕ್ತಿ ವೈರಾಗ್ಯಗಳ ಹಿರಿಮೆ ಗರಿಮೆಗಳನ್ನು ಸಾರಿದ್ದಾರೆ. ಶ್ರೀಪಾದರಾಜರು ಹರಿಸರ್ವೋತ್ತಮತ್ವ ಪ್ರತಿಪಾದನೆಯ ಜೊತೆಯಲ್ಲಿ ವಾಯು ಜೀವೋತ್ತಮತ್ವ ಪ್ರತಿಪಾದನೆಯನ್ನು ಅನೇಕ ದೇವರನಾಮ, ಪದ,ಪದ್ಯ ಸುಳಾದಿಗಳಲ್ಲಿ ವೈಭವೋಪೇತವಾಗಿ ವರ್ಣಿಸಿದ್ದಾರೆ. ಅವರ "ಮಧ್ವನಾಮ'' ಕನ್ನಡದ ವಾಯುಸ್ತುತಿ. ಮಧ್ವ ಸಮಾಜಕ್ಕೆ ಕೊಟ್ಟ ಅದ್ಭುತ ಕಾಣಿಕೆ. ಸ್ತ್ರೀ, ಪುರುಷರು ನಿತ್ಯ ಪಾರಾಯಣ ಮಾಡಿ ಸಿದ್ಧಿಗೈದಿದ್ದಾರೆ. ಇದು ದ್ವೈತತತ್ವ ಪ್ರಣಾಳಿಕೆಯಾಗಿ ಉಳಿಯ ಬಲ್ಲ ತತ್ವ ಚಿಂತಾಮಣಿಯಾಗಿದೆ. "ಜಯ ಜಯ ಜಗತ್ರಾಣ ಜಗದೊಳಗೆ ಸುತ್ರಾಣ ಅಖಿಲ ಗುಣ ಸದ್ಧಾಮ ಮಧ್ವ ನಾಮ'' ಎನ್ನುವಲ್ಲಿ ಜಗತ್ರಾಣರು ಆದ ಶ್ರೀ ವಾಯುದೇವರ ವಿಶಿಷ್ಟ ಮಹಿಮೆಯ ಲೀಲಾವಿಲಾಸಗಳನ್ನು ಮುಖ್ಯ ಪ್ರಾಣದೇವರ ಶ್ರುತಿ - ಉಪನಿಷತ್ಪ್ರತಿ ಪಾದ್ಯವಾದ ಮಹಾಮಹಿಮೆಯನ್ನು ಅಸದೃಶವಾಗಿ ಅಭಿವ್ಯಕ್ತಿಗೊಳಿಸಿದ್ದಾರೆ. ಶ್ರೀಪಾದರಾಜರು ರಚಿಸಿರುವ ಸಂಸ್ಕೃತದ ಶಾಸ್ತ್ರಗ್ರಂಥ "ಶ್ರೀಮನ್ಯಾಯಸುಧೋಪನ್ಯಾಸ ವಾಗ್ವಜ್ರಃ''ಎಂಬುದು ಜಯತೀರ್ಥರ ಶ್ರೀಮನ್ಯಾಯಸುಧಾಕ್ಕೆ ಟಿಪ್ಪಣಿಯಾಗಿದೆ.

## ಶ್ರೀಪಾದರಾಜರು ತೋರಿಸಿದ ಅತಿಮಾನುಷ ಮಹಿಮೆಗಳು

ಶ್ರೀಪಾದರಾಜರ ಶಿಷ್ಯವರ್ಗ ಒಮ್ಮೆ "ಮಹಾಸ್ವಾಮಿ ತಾವು ಸರ್ವಜ್ಞರು, ಪುಣ್ಯಾತ್ಮರು ತಮಗೆ ಎಲ್ಲಾ ಯಾತ್ರೆಗಳಾದವು. ತಮ್ಮ ದರ್ಶನವೇ ನಮಗೆ ಭಾಗ್ಯ''. ಆದರೂ ಒಮ್ಮೆಯಾದರೂ ನಮಗೆ ಪ್ರತ್ಯಕ್ಷ ಗಂಗೆಯ ಸ್ನಾನ ಆಗಬೇಕೆಂಬ ಬಯಕ್ಕೆ ಮುಂದಿಟ್ಟರು. ದೀನ ದಯಾಳುಗಳಾದ ಸ್ವಾಮಿಗಳು ಶಿಷ್ಯರಲ್ಲಿ ಕನಿಕರಪಟ್ಟು ಕಾಶೀಯಾತ್ರೆ ಯಾಗಬೇಕೆನ್ನುವಿರಲ್ಲವೆ? ಆಗಲಿ. ದೇವಿಯು ಕೃಪೆ ಮಾಡುವಳು. ನಾಳೆ ಪ್ರಾತಃಕಾಲ "ನರಸಿಂಹ ತೀರ್ಥಕ್ಕೆ'' ಎಲ್ಲರೂ ಗಂಗಾ ಪೂಜೆಗೆ ಬನ್ನಿರಿ. ನಿಮ್ಮಿಷ್ಟಾರ್ಥವು ಫಲಿಸುವುದು ಎಂದರು. ಆಗಿನಿಂದಲೇ ನರಸಿಂಹತೀರ್ಥರು ಬಳಿ ಜನರು ಸೇರಲಾರಂಭಿಸಿದರು. ದೇವಿಗೆ ಮಡಿಲು ತುಂಬುಲು ಮಂಗಳ ದ್ರವ್ಯಗಳನ್ನೂ, ಫಲ ಪುಷ್ಪಗಳನ್ನೂ ಇಟ್ಟುಕೊಂಡು ಭಜನೆ ಮಾಡುತ್ತಾರೆ ರಾತ್ರಿ ಎಲ್ಲರೂ ಜಾಗರಣೆ ಮಾಡಿದರು. ಗಂಗೆಯ ನೀರು ಬೆಳ್ಳಗಿರುವುದಂತೆ, ನೃಸಿಂಹ ತೀರ್ಥದ ನೀರು ಕಪ್ಪಾಗಿದೆ. ನಾಳೆ ನಮ್ಮ ಸರೋವರದ ನೀರು ಗಂಗೆಯ ನೀರಿನಂತೆ ಬೆಳ್ಳಗಾದರೆ ಸರೋವರ ತುಂಬಿ ಹರಿದರೆ,ಗಂಗೆ ಬಂದದ್ದಕ್ಕೆ ಗುರುತೆಂದು ಕೊಂಡರು. ಸ್ವಾಮಿಗಳ ಮಹಿಮೆಯನ್ನು ಕೊಂಡಾಡುತ್ತ ಕಾಲ ಕಳೆದರು. ಗಂಗಾವತರಣ ಇತ್ಯಾದಿ ಕೃತಿಗಳನ್ನು ಕೆಲವರು ಪಾರಾಯಣ ಮಾಡಿದರು. ಮಾರನೆಯ ದಿನ ಅತ್ತ ಮಠದಲ್ಲಿ ಸ್ವಾಮಿಗಳು ಪರಮಾತ್ಮನಿಗೆ ವಿಶೇಷ ಪೂಜಾದಿಗಳನ್ನು ಮಾಡಿದರು. ಗಂಗಾ ಜನಕನನ್ನು ಪ್ರಾರ್ಥಿಸಿದರು. ನೃಸಿಂಹತೀರ್ಥಕ್ಕೆ ಬಂದರು. ನೃಸಿಂಹತೀರ್ಥ ಈಶಾನ್ಯ ಭಾಗದಲ್ಲಿ ಕುಳಿತು ಗಂಗೆಯನ್ನು ಸ್ತೋತ್ರ ಮಾಡಿದರು. ಆಗ ಅತ್ಯಾಶ್ಚರ್ಯಕರವಾದ ಘಟನೆ ನಡೆಯಿತು. ಇದ್ದಕ್ಕಿದ ಹಾಗೆ ಮೋಡ ಮುಸುಕಿತು. ಕತ್ತಲೆ ಕವಿಯಿತು. ಸರ್ವರೂ ಕಾಣುವಂತೆ ಶ್ವೇತವರ್ಣ ವಿಶಿಷ್ಟವಾದ ಸ್ವಚ್ಛೋದಕವು ಈಶಾನ್ಯ ಮೂಲೆಯಿಂದ ಬುಳು ಬುಳನೆ ಧಾರೆಯಾಗಿ ಹರಿದು ಬರಲಾರಂಭಿಸಿತು. ಸರೋವರವು ತುಂಬಿ ತುಳುಕಿತು. ಶ್ರೀಪಾದರಾಜರು ಕುಳಿತ ಬಳಿಯಿಂದ ಪದಚಲನೆ ಮಾಡದೆ ಸ್ತೋತ್ರ ಮಾಡುತ್ತಿದ್ದರು. ಕೂತ ಹಾಗೆ ಅವರಿಗೆ ಗಂಗಾ ಸ್ನಾನವಾಯಿತು. ದೇವಿಗೆ ಅರ್ಘ್ಯ ವನ್ನಿತ್ತು ವಾಯನಗಳನ್ನರ್ಪಿಸಿದರು. ಆ ವೈಭವವನ್ನು ನೋಡಿ ಜನರು ಜಯ ಘೋಷ ಮಾಡಿದರು. ಸ್ವಾಮಿಗಳ ಅನುಜ್ಞೆಯನ್ನು ಪಡೆದು ಗಂಗಸ್ನಾನ ಮಾಡಿ ಕೃತಾರ್ಥರಾದರು.

ಶ್ರೀ ಪಾದರಾಜರು ಬ್ರಹ್ಮಹತ್ಯಾ ಪಾತಕಿಯಾದ ಬ್ರಾಹ್ಮಣನ ಬ್ರಹ್ಮಹತ್ಯಾ ದೋಷವನ್ನು ಮಂತ್ರಪೂರಿತವಾದ ಶಂಖೋದಕ ಪ್ರೋಕ್ಷಣೆಯಿಂದ ಪರಿಹರಿಸಿದರು. ವ್ಯಾಸರಾಜರು ಒಮ್ಮೆ ಅಜಗರದ ಬಾಧೆಗೊಳಗಾದಾಗ ಶ್ರೀಪಾದರಾಜರು ಸರ್ಪ ಭಾಷೆಯಿಂದ ಅಜಗರದೊಡನೆ ಮಾತನಾಡಿ ಅವರ ಅಪತ್ ನಿವಾರಣೆ ಮಾಡಿದರು. ಫಂಡಾರಾಪುರದ ಭೀಮರಥೀ ತೀರದಲ್ಲಿ ಭೂಸ್ಥಾಪಿತವಾಗಿದ್ದ ಸ್ವರ್ಣ ಪೇಟಿಕೆಯನ್ನು ಸ್ವಪ್ನ ಸೂಚನೆಯಿಂದ ತೆಗೆಸಿ ಆ ಪೇಟಿಕೆಯಲ್ಲಿ ದೊರೆತ ರಂಗವಿಠಲ ದೇವರನ್ನು ತಮ್ಮ ಪೂಜೆಯಲ್ಲಿಟ್ಟುಕೊಂಡರು. ಶ್ರೀಪಾದರಾಜರು ಯಾವುದೇ ಊರಿನಲ್ಲಿದ್ದರೂ ಅರವತ್ತು ನಾಲ್ಕು ಬಗೆಯ ಪದಾರ್ಥಗಳನ್ನು ಮಾಡಿಸಿ ಪರಮಾತ್ಮನಿಗೆ ನೈವೇದ್ಯ ಮಾಡಿ ಭಿಕ್ಷಾ ಸ್ವೀಕಾರ ಮಾಡುತ್ತಿದ್ದರು. ಪರೀಕ್ಷಾರ್ಥವಾಗಿ ಒಬ್ಬ ರಾಜನು ಶ್ರೀಪಾದರಾಜರನ್ನು ಒಂದು ದಿನ ಅರಣ್ಯ ದಲ್ಲಿರುವಂತೆ ಮಾಡಿ ಏನೂ ಸಿಗದಂತೆ ನೋಡಿಕೊಂಡನು. ಆದರೆ ಮಧ್ಯಾಹ್ನ ಕಾಲಕ್ಕೆ ಸರಿಯಾಗಿ ಭಗವತ್ಪ್ರೇರಣೆಯಿಂದ ಯಾರೋ ಅವರಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ತಂದು ಕೊಟ್ಟರು. ಕಾಲಾತೀತವಾಗದಂತೆ ಶ್ರೀಪಾದರಾಜರು ಪೂಜಾ ಭಿಕ್ಷೆಗಳನ್ನೂ ಎಂದಿನಂತೆ ಕ್ರಮವಾಗಿ ನಡೆಸಿದರು. ರಾಜನು ಈ ಸಂಗತಿಯನ್ನು ತಿಳಿದು ಪಶ್ಚಾತ್ತಾಪ ಪಟ್ಟು ಶರಣಾಗತನಾದನು.ಹರಿದಾಸ ಸಾಹಿತ್ಯವೆಂಬ ಗಂಗಾಪ್ರವಾಹಕ್ಕೆ ಉಗಮಸ್ಥಾನೀಯರಾಗಿ ಮೆರೆದವರು ಶ್ರೀಪಾದರಾಜರು. ಇಂದಿಗೂ ಜನಸಾಮಾನ್ಯರ ಮನದಲ್ಲಿ ಮಧ್ವಮತದ ಪ್ರಮೇಯ ನಲಿದಾಡಲು ಹಾಗೂ ಹರಿದಾಸ ಸಾಹಿತ್ಯಕ್ಕೆ ಮೂಲವಾದ ವ್ಯಾಸ ಸಾಹಿತ್ಯದಲ್ಲಿ ಭಕ್ತಿ ಗೌರವಾದಿಗಳು ಮೂಡಲು ಕನ್ನಡ ಹರಿದಾಸ ಸಾಹಿತ್ಯದ ಪಾತ್ರ ಅತ್ಯಂತ ಹಿರಿದಾದದ್ದು. ಇದಕ್ಕೆ ಪ್ರಧಾನ ಕಾರಣರು ಶ್ರೀ ಶ್ರೀಪಾದರಾಜರು. ಕ್ರಿ.ಶ. 1504 ನೇ ಜೇಷ್ಠ ಶುದ್ಧ ಚತುರ್ದಶಿಯಂದು ಮುಳಬಾಗಿಲಿನಲ್ಲಿರುವ ಶ್ರೀನೃಸಿಂಹತೀರ್ಥದ ಬಳಿ ಶ್ರೀಪಾದರಾಜರು ವೃಂದಾವನ ಪ್ರವೇಶ ಮಾಡಿದರು. ವೃಂದಾವನದಲ್ಲಿದ್ದು ಅದ್ಯಾಪಿ ವಿಶೇಷ ಸನ್ನಿಧಾನದಿಂದ ವಿರಾಜಮಾನರಾಗಿದ್ದಾರೆ. ಸೇವಿಸುವ ಭಕ್ತರನ್ನು ಉದ್ಧರಿಸುತ್ತಿದ್ದಾರೆ.

ಕಾಲೇ ಫಲತಿ ಸುರುದ್ರುಮಃ ಚಿಂತಾಮಣಿರಪಿಯಾಚತೇ ದಾತಾ।
ವರ್ಷತಿ ಸಕಲಮಭಿಷ್ಟದರ್ಶನ ಮಾತ್ರಾತ್ ಶ್ರೀ ಪಾದರಾಜಮುನಿಃ।

॥ ಕೃಷ್ಣಾರ್ಪಣಮಸ್ತು॥



ಕರ್ನಾಟಕದ ವೈಷ್ಣವ ಕ್ಷೇತ್ರಗಳು



# ಭಾನುವಳ್ಳಿ ಶ್ರೀ ಲಕ್ಷ್ಮೀನಾರಾಯಣ ಹಾಗೂ ಕೊಮಾರನಹಳ್ಳಿಯ ದೇವಾಲಯಗಳು

44

-ಕೆಂಗೇರಿ ಚಕ್ರಪಾಣಿ
94483 86886

ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಭಾನುವಳ್ಳಿ ಎಂಬ ಗ್ರಾಮವು ಹರಿಹರದಿಂದ ಹದಿನಾಲ್ಕು ಕಿ.ಮೀ.ದೂರದಲ್ಲಿದೆ. ಭಾನುವಳ್ಳಿಯಲ್ಲಿ ಮಹೋನ್ನತ ಮೂರ್ತಿಯನ್ನು ಹೊಂದಿರುವ ಶ್ರೀಲಕ್ಷ್ಮೀನಾರಾಯಣ ದೇವಾಲಯವಿದೆ. ಭಾನುವಳ್ಳಿಯ ಪ್ರಾಚೀನ ನಾಮ ಲಕ್ಷ್ಮೀನಾರಾಯಣ ಪುರ. ಹರಿಹರದ ಹರಿ ಹರೇಶ್ವರ ದೇವಾಲಯವನ್ನು ನಿರ್ಮಿಸಿದ ಹೊಯ್ಸಳ ದೊರೆ ಎರಡನೆಯ ನರಸಿಂಹನ ದಂಡನಾಯಕ ಪೋಲಾಳ್ವನು ಕ್ರಿ.ಶ.1223ರಲ್ಲಿ ಭಾನುವಳ್ಳಿಯ ಶ್ರೀಲಕ್ಷ್ಮೀನಾರಾಯಣ ದೇವಾಲಯವನ್ನು ನಿರ್ಮಿಸಿರುವನು. ಭಾನುವಳ್ಳಿಯ ಶ್ರೀ ಲಕ್ಷ್ಮೀನಾರಾಯಣನು ತನ್ನ ಬೃಹದಾಕಾರದಿಂದಲೂ ಭವ್ಯತೆಯಿಂದಲೂ ಮನಸೂರೆಗೊಳ್ಳುವನು. ಸುಮಾರು ಹತ್ತು ಅಡಿಗಳಷ್ಟು ಎತ್ತರವಿರುವ ಶ್ರೀಲಕ್ಷ್ಮೀನಾರಾಯಣನ ಮೂರ್ತಿಯು ಬಹಳ ಸೊಗಸಾಗಿದೆ. ಶಂಖ, ಚಕ್ರ, ಪದ್ಮ, ಕಮಲ ಧಾರಿಯಾದ ಸ್ವಾಮಿಯು ತನ್ನ ಎಡ ತೊಡೆಯ ಮೇಲೆ ಸರ್ವಾಲಂಕಾರ ರಿತಳಾದ ಮಹಾಲಕ್ಷ್ಮೀಯಿರುವಳು. ದೇವನ ಮುಖಾರವಿಂದವು ಬಹಳ ದಿವ್ಯವಾಗಿದ್ದು ನೋಡುಗರಿಗೆ ಒಂದು ವಿಶೇಷ ಅನುಭೂತಿಯನ್ನು ನೀಡುತ್ತದೆ. ವಿಷ್ಣು ಪತ್ನಿಯು ದೇವನ ಕಡೆ ನೋಡುತ್ತಿರುವಂತೆ ಬಿಂಬಿಸಲಾಗಿದೆ. ಕಿರೀಟ ಮಕುಟ, ದೇಹದ ಮೇಲಿನ ಆಭರಣಗಳು, ಕೈಬೆರಳಿನ ಉಗುರುಗಳೂ ಸಹಾ ಕಲಾತ್ಮಕವಾಗಿವೆ. ದೇವನ ಪ್ರಭಾವಳಿಯಲ್ಲಿ ದಶಾವತಾರದ ಸುಂದರ ಮೂರ್ತಿಗಳಿವೆ. ಕನ್ನಡ ನಾಡಿನಲ್ಲಿ ಉಪಲಬ್ಧವಾಗಿರುವ ಶ್ರೀ ಲಕ್ಷ್ಮೀನಾರಾಯಣ ಮೂರ್ತಿಗಳಲ್ಲಿಯೇ ಸುಂದರ ಮೂರ್ತಿಯು ಭಾನುವಳ್ಳಿಯ ಮೂರ್ತಿಯಾಗಿದ್ದು, ಪ್ರಚಾರದ ಕೊರತೆಯಿಂದ ಈ ದೇವಾಲಯವು ಅಷ್ಟಾಗಿ ಬೆಳಕಿಗೆ ಬಂದಿರುವುದಿಲ್ಲ.

ಶಿಥಿಲವಾಗಿದ್ದ ಈ ದೇವಾಲಯವನ್ನು ಸ್ಥಳೀಯರು ಸಂಪೂರ್ಣ ಶಿಲಾಮಯವಾಗಿ ನೂತನ ದೇವಾಲಯವನ್ನು ನಿರ್ಮಿಸಿ ಮೂಲ ವಿಗ್ರಹವನ್ನು ಪ್ರತಿಷ್ಠಾಪಿಸಿರುವರು. ಭಾನುವಳ್ಳಿಯ ಗ್ರಾಮೀಣ ಜನತೆಯ ಸೇವಾ ಕೈಂಕರ್ಯ ಪ್ರಶಂಸನೀಯ. ಭಾನುವಳ್ಳಿಯ ಊರ ಹೊರವಲಯದಲ್ಲಿ ಕಲ್ಲೇಶ್ವರ ದೇವಾಲಯವಿದೆ. ದೇವಾಲಯವು ಸಹಾ ಹೊಯ್ಸಳರ ಕಾಲದ್ದೇ ಆಗಿದ್ದು, ಗರ್ಭಗುಡಿಯಲ್ಲಿ ಶಿವಲಿಂಗವಿದೆ. ನವರಂಗದಲ್ಲಿ ಇದೇ ಕಾಲ ಘಟ್ಟಕ್ಕೆ ಸೇರುವ ಸೂರ್ಯದೇವ, ಕಾಲಭೈರವ, ಗಣಪತಿಯ ಮೂರ್ತಿಗಳಿವೆ. ಈ ದೇವಾಲಯದ ಸಮೀಪದಲ್ಲಿಯೇ ಮಾರುತಿಯ ಗುಡಿಯಿದೆ.

### ಹೀಗೆ ಬನ್ನಿ

ಹರಿಹರ-ಶಿವಮೊಗ್ಗ ರಸ್ತೆಯಲ್ಲಿ ಹನ್ನೊಂದು ಕಿ.ಮೀ. ಸಾಗಿದರೆ ಎಕ್ಕಗುಂದಿ ಎಂಬ ಗ್ರಾಮ ಸಿಗುತ್ತದೆ. ಅಲ್ಲಿ ಸಿಗುವ ಭಾನುವಳ್ಳಿ ತಿರುವಿನಲ್ಲಿ







ಎರಡು ಕಿ.ಮೀ.ಸಾಗಿ ಭಾನುವಳ್ಳಿಯನ್ನು ಸೇರಬಹುದು.

### ಕೊಮಾರನ ಹಳ್ಳಿಯ ದೇವಾಲಯಗಳು

ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಮಲೆಬೆನ್ನೂರಿಗೆ ಸಮೀಪವಿರುವ ಕೊಮಾರನ ಹಳ್ಳಿಯಲ್ಲಿ ಶ್ರೀಲಕ್ಷ್ಮೀದೇವಾಲಯ, ಶ್ರೀರಂಗನಾಥ ದೇವಾಲಯ, ಹೆಳವನಕಟ್ಟೆ ಗಿರಿಯಮ್ಮನವರ ದೇವಾಲಯ ಹಾಗೂ ಅವಧೂತ ಗುರುಗಳಾದ ಶ್ರೀ ಶ್ರೀ ಶಂಕರಲಿಂಗ ಭಗವಾನ್‌ರ ಐಕ್ಯ ಸ್ಥಳಗಳಿವೆ.

ಶ್ರೀಲಕ್ಷ್ಮಿದೇವಾಲಯದಲ್ಲಿ ಪ್ರಾಚೀನ ಹೊಯ್ಸಳರ ಕಾಲದ ಕಂಬಗಳನ್ನು ಬಳಸಿ ಪುನರ್ ನಿರ್ಮಿಸಿರುತ್ತಾರೆ. ಗರ್ಭಗುಡಿಯಲ್ಲಿ ಲಕ್ಷ್ಮಿದೇವಿಯ ಮೂರ್ತಿಯಿದೆ. ದೇವಾಲಯದ ಸಮೀಪದಲ್ಲಿ ಹೆಳವನಕಟ್ಟೆ ಗಿರಿಯಮ್ಮನ ದೇವಾಲಯವನ್ನು ಇತ್ತೀಚೆಗೆ ನಿರ್ಮಿಸಿರುತ್ತಾರೆ.

### ಶ್ರೀಲಕ್ಷ್ಮೀರಂಗನಾಥ ದೇವಾಲಯ

ಹೆಳವನಕಟ್ಟೆ (ಕೊಮಾರನಹಳ್ಳಿ)ಯಲ್ಲಿರುವ ಲಕ್ಷ್ಮೀರಂಗನಾಥ ದೇವಾಲಯವು ಹದಿನೆಂಟನೆಯ ಶತಮಾನದ ಆಲಯವಾಗಿದ್ದು ಗರ್ಭಗುಡಿಯಲ್ಲಿರುವ ರಂಗನಾಥನು ಮೂರ್ತಿ ರೂಪದಲ್ಲಿರದೆ ನಿರಾಕಾರವಾಗಿ ಸಾಲಿಗ್ರಾಮ ರೂಪದಲ್ಲಿರುವನು. ಈ ದೇವಾಲಯದ ಬದಿಯಲ್ಲಿ ಮಾರುತಿಯ ಗುಡಿ ಮತ್ತು ಭೂತರಾಜನ ಗುಡಿಗಳಿವೆ. ಇಲ್ಲಿರುವ ರಂಗನಾಥನು ಸೂರ್ಯದೇವನ ಸಾರಥಿ ಅರುಣನಿಂದ ಪ್ರತಿಷ್ಠಿತವಾಯಿತೆಂಬ ಸ್ಥಳಪುರಾಣವಿದೆ. ಅರುಣನು ಹೆಳವನೇ ಆಗಿರುವುದರಿಂದ ಹೆಳವನ ಕಟ್ಟೆ ಎಂಬ ಹೆಸರು ಬಂದಿರಬಹುದೆಂಬ ಅಭಿಪ್ರಾಯ ಪಡಬಹುದು. ಪ್ರಸಿದ್ಧ ಕವಯಿತ್ರಿಯಾಗಿರುವ ಹೆಳವನಕಟ್ಟೆ ಗಿರಿಯಮ್ಮನ ಆರಾಧ್ಯದೈವ ರಂಗನಾಥನಾಗಿದ್ದು ತನ್ನ ಕಾವ್ಯವನ್ನು ಹೆಳವನಕಟ್ಟೆ ಹೆಳವೇಶನಿಗೆ ಅಂಕಿತಗೊಳಿಸಿರುವಳು. ಕ್ರಿ.ಶ. 1750ರಲ್ಲಿ ಜನಿಸಿದ ಕವಯಿತ್ರಿಯಾದ ಗಿರಿಯಮ್ಮನ ಜನ್ಮಸ್ಥಳ ಹರಿಹರದ ಸಮೀಪದ ರಾಣೆಬೆನ್ನೂರು . ಈಕೆಯ ತಂದೆ ಭೀಮಪ್ಪ. ಬಾಲ್ಯದಿಂದಲೂ ಹೆಳವನಕಟ್ಟೆಯ ರಂಗನಾಥನು ಈಕೆಗೆ ಆರಾಧ್ಯದೈವ. ಚಂದ್ರಹಾಸನ ಕಥೆ, ಉದ್ದಾಳಿಕನ ಕಥೆ, ಸೀತಾಕಲ್ಯಾಣ ಎಂಬ ಸಾಂಗತ್ಯ ಕೃತಿಗಳನ್ನು ಈಕೆ ರಚಿಸಿರುವಳು. ಹೆಳವನಕಟ್ಟೆ ಗಿರಿಯಮ್ಮನು ಪವಾಡಗಳನ್ನು ಮೆರೆದಿದ್ದು ಕನ್ನಡ ನಾಡಿನ ಮೈಲಾರ, ಕುಕನೂರು, ಗೋಕರ್ಣ, ದಾಗಿನಕಟ್ಟೆ ಮುಂತಾದ ಕಡೆಯಾತ್ರೆ ಕೈಗೊಂಡು ತನ್ನ ಅಂತ್ಯ ಕಾಲದಲ್ಲಿ ಕಮ್ಮಾರಕಟ್ಟೆಗೆ ಬಂದು ಮಾರುತಿಯ ಗುಡಿಯನ್ನು ಸ್ಥಾಪಿಸಿ ಅನಂತರ ತುಂಗಭದ್ರಾ ನದಿಯಲ್ಲಿ ಐಕ್ಯಳಾದಳು. ಈಕೆಯ ಪುಣ್ಯತಿಥಿಯು ಶ್ರಾವಣಮಾಸದ ಶುದ್ಧ ಪಂಚಮಿಯದಾಗಿದ್ದು, ಆ ದಿನ ಈಕೆ ಪ್ರತಿಷ್ಠಾಪಿಸಿದ ಹನು ಮಂತನಿಗೆ ರಥೋತ್ಸವವು ಬಹು ವೈಭವವಾಗಿ ಜರುಗುವುದು.



### ಶ್ರೀ ಶ್ರೀ ಶಂಕರಲಿಂಗ ಭಗವಾನ್‌ರವರ ಐಕ್ಯಸ್ಥಳ

ಕೊಮಾರನಹಳ್ಳಿಯ ರಂಗನಾಥ ದೇವಾಲಯಕ್ಕೆ ಹೊಂದಿಕೊಂಡಂತೆ ಪ್ರಸಿದ್ಧ ಶ್ರೀ ಶ್ರೀ ಶಂಕರಲಿಂಗ ಭಗವಾನ್‌ರವರ ಆಶ್ರಮವಿದೆ. ಶ್ರೀಗಳ ಪೂರ್ವಾಶ್ರಮದ ನಾಮಧೇಯವು ರಂಗನಾಥ ಆಗಿದ್ದು, ಕ್ರಿ.ಶ.1880 ರ ಆಗಸ್ಟ್ 21 ರಂದು ಕೃಷ್ಣಪ್ಪ ಮತ್ತು ಸುಬ್ಬಮ್ಮ ದಂಪತಿಗಳಿಗೆ ಜನಿಸಿದರು. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕು ಮಾಳೇನಹಳ್ಳಿಯ ರಂಗನಾಥನು ಇವರ ಆರಾಧ್ಯದೈವನಾಗಿದರುವನು. ಶ್ರೀಗಳಿಗೆ ಆಧ್ಯಾತ್ಮದ ಕಡೆ ಸೆಳೆತವಾಗಿ ಶ್ರೀ ಶೇಷಾಚಲ ಮಹಾರಾಜರ ಬಳಿ ಶಿಷ್ಯವೃತ್ತಿಯನ್ನು ಸ್ವೀಕರಿಸಿ ತಮ್ಮ ಸಾಧನೆಯ ತಪಃಶಕ್ತಿಯಿಂದ ಅವಧೂತರಾದರು. ಇವರು ಮುರುಗೋಡು, ಅಗಡಿ, ಹೊಸೂರು, ಲೋಕಿಗೆರೆ ಮುಂತಾದ ಊರುಗಳಲ್ಲಿ ಸಂಚರಿಸಿ ಕೊನೆಯಲ್ಲಿ ಕೊಮಾರನಹಳ್ಳಿಯಲ್ಲಿ ಐಕ್ಯರಾಗಿದ್ದಾರೆ. ಅಪಾರ ಸಂಖ್ಯೆಯ ಭಕ್ತ ವೃಂದವನ್ನು ಹೊಂದಿರುವ ಆಶ್ರಮದಲ್ಲಿ ಗುರುಗಳ ಸೇವ ಕೈಂಕರ್ಯವು ಬಹು ಪಾಂಗಿತವಾಗಿ ನೆರವೇರುವ ಮುಕ್ತ ವಾತಾವರಣವಿರುವುದನ್ನು ಗಮನಿಸಬಹುದು.

### ಹೀಗೆ ಬನ್ನಿ

ಕೊಮಾರನಹಳ್ಳಿಯು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಮಲೆಬೆನ್ನೂರಿನಿಂದ ಮೂರು ಕಿ.ಮೀ. ದೂರದಲ್ಲಿದೆ. ಕೊಮಾರನ ಹಳ್ಳಿಯ ದೇವಾಲಯಗಳನ್ನು ದರ್ಶಿಸಿ ನಂತರ ಸಮೀಪವಿರುವ ಭಾನುವಳ್ಳಿಯ ಲಕ್ಷ್ಮೀನಾರಾಯಣ ದೇವಾಲಯವನ್ನು ದರ್ಶಿಸಬಹುದು.

# ವೃಕ್ಷಾರಾಧನೆಯೇಕೆ? ಹೇಗೆ?

ವೃಕ್ಷ ಪೂಜೆ ದೇವತಾ ಪೂಜೆಯಷ್ಟೇ ಪ್ರಾಚೀನವಾದುದು. ಕಾಣದ ದೈವಕ್ಕಿಂತ ಪ್ರತ್ಯಕ್ಷ ದೈವಕ್ಕೇ ಮೊದಲ ಪೂಜೆಯಷ್ಟೆ ಮಾನವ ಮನೆ ಮರಗಳನ್ನು ಕಟ್ಟಿಕೊಳ್ಳಲು ಅರಿಯದೆ ಅರಣ್ಯವಾಸಿಯಾಗಿ ಗುಹೆ ಗಳಲ್ಲೂ ಮರದ ಪೊಟರೆಗಳಲ್ಲೂ ಜೀವಿಸುತ್ತಿದ್ದಾಗಲೇ ಅವನಿಗೆ ವೃಕ್ಷ ದೇವತೆಯ ಕಲ್ಪನೆ ಮೂಡಿದ್ದಿರಬೇಕು. ವಾಸಕ್ಕೆ ನೆರಳು, ಉಡಲು ಎಲೆ, ತಿನ್ನಲು ಕಾಯಿ ಹಣ್ಣುಗಳು, ಆಯುಧವಾಗಿ ಬಳಸಲು ಕೊಂಬೆ-ರೆಂಬೆ ಗಳು, ಬೆಂಕಿ ಕಾಸಿಕೊಳ್ಳಲು ಒಣಗಿದ ಕಟ್ಟಿಗೆ ಹಾಸಿಕೊಂಡು ಮಲಗಲು ಹಸಿರು ಎಲೆ-ಚಿಗುರು, ಅಲಂಕಾರಕ್ಕೆ ಹೂ ಹೀಗೆ ಹಲವು ರೀತಿಯಲ್ಲಿ ತನ್ನ ಜೀವನಕ್ಕೆ ಬೇಕಾದುದನ್ನು ಕೊಡುವ ಮರ ಆದಿ ಮಾನವರಿಗೆ ದೈವ ವಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ. ವೇದಗಳು ವೃಕ್ಷಗಳನ್ನು ದೇವತೆಗಳ ವಾಸ ಸ್ಥಾನಗಳೆಂದು ಬಣ್ಣಿಸಿವೆ.ವೃಕ್ಷಗಳು ತಮ್ಮ ಎಲೆ, ಹೂ, ಹಣ್ಣು, ಬೇರು, ನಾರು, ಚಕ್ಕೆ,ತೊಗಟೆ, ಗಂಧ, ಗೋಂದು,ಕಟ್ಟಿಗೆ,ಮೇಣ,ಬೂದಿ, ಅಂಕುರ ಮತ್ತು ನೆರಳು - ಹೀಗೆ ತಮ್ಮೆಲ್ಲವನ್ನು ಪರೋಪಕಾರಕ್ಕಾಗಿ ಉಪಯೋಗಿ ಸುತ್ತದೆ.

ಭಗವದ್ಗೀತೆಯಲ್ಲಿ ಹೇಳಿರುವಂತೆ ಸಂಸಾರ ವೃಕ್ಷವು ಮೇಲುಗಡೆ ಬೇರು ಉಳ್ಳದ್ದು, ಆದರೆ ಎಡ ಬಿಡದೆ ಅದರಲ್ಲಿ ಧರಿಸಲ್ಪಡುವ ಹುಟ್ಟು, ಶೋಕ,ಮುಪ್ಪು, ಸಾವು ಮುಂತಾದ ಅನೇಕ ರೂಪಗಳಿರುವುದರಿಂದಾಗಿ ಕಡಿಮೆ ಹಾಕಲ್ಪಡತಕ್ಕದ್ದು ಎಂದು ಹೇಳಿದೆ. ಚರಾಚರವಾದ ವಸ್ತುಗಳು ಈ ವೃಕ್ಷದ ಶಾಖೆಗಳಾಗಿದ್ದರೂ, ವೇದ (ಜ್ಞಾನ) ಎಂಬುದು ಅದರ ನೆರಳು ಕೊಡುವ ಪತ್ರಗಳಾಗಿದೆ. ಇದು ಅಶ್ವತ್ಥ, ಅರ್ಥಾತ್ ಅಶಾಶ್ವತ. ಇದರ ಕೆಳಗೆ ಭೋಗ ವಾಸನೆಯೆಂಬ ಬೇರುಗಳು ಊರ್ಜಿತವಾಗಿದ್ದು ಅವು ಮನುಷ್ಯ ಲೋಕದಲ್ಲಿ ಕರ್ಮ ಪ್ರವೃತ್ತಿಗೆ ಹೇತುಗಳಾಗಿವೆ. ಆದರೂ ಬೇರು ಭೂಮಿಯಲ್ಲಿ ಅತಿ ದೃಢವಾಗಿ ಬಹು ದೂರವ್ಯಾಪಿಸಿ ರುವುದು.

ಆದ ಕಾರಣ ಇಂತಹ ಅಶ್ವತ್ಥವನ್ನು ಅಭಿಮಾನ ತ್ಯಾಗವೆಂಬ ದೃಢವಾದ ಆಯುಧದಿಂದ ಭೇದಿಸಿ ಮೋಕ್ಷೋಪಾಯವನ್ನು ಕಂಡು ಹುಡುಕಬೇಕು ಎಂದು ಶ್ರೀಕೃಷ್ಣನು ಉಪದೇಶಿಸಿದ್ದಾನೆ.ಮರಗಳೆಲ್ಲ ಒಂದು ಸಂದರ್ಭದಲ್ಲಿ ಕಡಿಮೆ ಹಾಕಲಿಕ್ಕಾಗಿ ಇರುವಂತಹವೆಂಬ ಭಾವನೆ ಸಲ್ಲದು ಒಂದು ಮರ ವನ್ನು ಕಡಿದರೆ ಅದನ್ನು ಆಶ್ರಯಿಸಿರುವ ಜೀವಕೋಟಿ (ಕ್ರಿಮಿ, ಕೀಟ, ಹುಳು ಗಳು ಇತ್ಯಾದಿ) ಅದೆಷ್ಟು ನಷ್ಟವೆಂಬುದನ್ನು ಗಮನಿಸಿ, ಅವುಗಳು ತಾವಾಗಿ ಮೃತ್ಯುವನ್ನಪ್ಪವವರೆಗೆ ಅವುಗಳನ್ನು ಬಾಳಗೊಡುವುದು ಉತ್ತಮ. ಮರ ಗಳನ್ನು ಇನ್ನಷ್ಟು ಹುಟ್ಟಿಸಿ ಹಾಕುವ ಆ ಮರಗಿಡಗಳನ್ನು ಪ್ರೀತಿಸುವ ಮಕ್ಕಳಂತೆ ಪೋಷಿಸುವ ಮಂದಿಯೇ ಪುಣ್ಯಾತ್ಮರು.

ಮೂಲತಃ ನಮ್ಮ ಹಳ್ಳಿಯ ಜನರಿಗೆ ತೆಂಗು,ಅಡಿಕೆ,ಮಾವು, ಹಲಸುಗಳಂತಹ ಹಣ್ಣಿನ ಮರಗಳು ಆಲ, ಅಶ್ವತ್ಥದಂತಹ ನೆರಳು ಕೊಡುವ ಮರಗಳು ಇಷ್ಟು ಮರಗಳಿಗೆ ಬೇಕಾದ ನೀರು ಹೆಚ್ಚಾಗಿ ಭೂಮಿಯೊಳಗಿ ನಿಂದಲೇ ಸಿಗುವುದಕ್ಕೂ ಬೇಸಿಗೆಯಲ್ಲಿ ನೀರಿನ ಅಭಾವದಿಂದಾಗಿ ಅವುಗಳು ಒಣಗದಂತೆ ದೂರದ ಕೆರೆ, ಬಾವಿ, ತೊರೆಗಳಿಂದ ನೀರು ಹೊತ್ತು ತಂದು ಗಿಡ ಮರಗಳ ಬುಡಕ್ಕೆ ಎರೆದು ಅವನ್ನು ಸಾಕುವವರು ಪುಣ್ಯಾತ್ಮರು. ಕೆಲವು ತಂದೆ ತಾಯಿಯರು ಚೆನ್ನಾಗಿ ಕಣ್ಣು ತೆರೆದು ಜನತನದಿಂದ ಸಾಕಿದ ಮಕ್ಕಳು ಇವರಿಗೆ ಕೃತಘ್ನರಾಗುವುದುಂಟಾದರೂ ನಾವು ಸಾಕುವ ಮರಗಿಡಗಳು ಕೃತಘ್ನರಾಗಿರುವುದಿಲ್ಲ ತಮಗೆ ಉಪಕಾರ ಮಾಡುವವರನ್ನು ತಮ್ಮ ಸಿಹಿ ಯಾದ ಫಲಗಳಿಂದ ಉಪಚರಿಸುತ್ತವೆ. ಈ ಮರಗಳು ಇದಕ್ಕಾಗಿ ಬೇಲಿ ಹಾಕಿ ಹುಡುಗರಿಂದ ಕಾವಲು ಮಾಡಿಯಾದರೂ ಮರಗಳನ್ನು ಮಕ್ಕಳಂತೆ ಬೆಳೆಸುವುದು ಅಗತ್ಯ. ನಾವು ರಾಜ ಮಾರ್ಗದಲ್ಲಿ ಸಾಲುಮರಗಳನ್ನು ನೆಡು ವಂತೆ ನಮ್ಮ ಮನೆಗಳ ಸುತ್ತ ವೃಕ್ಷಗಳ ಆಶ್ರಮವನ್ನು ಕಣ್ವಾಶ್ರಮದ ರೀತಿ ಯಲ್ಲಿ ಬೆಳೆಸಬಹುದು.

ಮನುಷ್ಯನಲ್ಲಿ ಮೊದಲು ಮಾಡಿದ ಧಾರ್ಮಿಕ ಭಾವ



-ಡಾ॥ಗುರುರಾಜ ಪೋಶೆಟ್ಟಿಹಳ್ಳಿ
97393 69621

ನೆಯು ಮರಗಳ ಕುರಿತಾದದ್ದು. ಅತಿಮಾನವ ಶಕ್ತಿಯರನ್ನು ಮೊದಲು ಮರಗಳಲ್ಲೇ ಆತನು ಕಂಡು ಹಿಡಿದನು. ಬೆಂಕಿಗೆ ಮರದ ತುಂಡುಗಳನ್ನು ಆಹುತಿಗೊಡುವ ಸಂಪ್ರದಾಯದಿಂದ ತೊಡಗಿ ಋತುಮಾನಗಳಲ್ಲಿ ಮರಗಳಲ್ಲಾಗುವ ಬದಲಾವಣೆಯನ್ನು ಕಂಡು ತನ್ನ ಜೀವನವನ್ನು ಅದಕ್ಕೆ ಹೊಂದಿಸಿದನು. ನಮ್ಮ ವೇದಗಳಲ್ಲಿ ಬಿಲ್ವ ಸೂಕ್ತವಾಗಲಿ. ಅಶ್ವತ್ಥ ಮತ್ತು ಕಲ್ಪವೃಕ್ಷಗಳ ಆರಾಧನೆಯಾಗಲಿ, ಇನ್ನೆಷ್ಟೋ ವೃಕ್ಷಾರಾಧನೆಗಳೂ ನಮ್ಮ ಸಂಸ್ಕೃತಿ ಆಚಾರ ವಿಚಾರಗಳಿಗೆ ಪೋಷಣೆ ನೀಡಿರುವುವು.'ಕಾಡು ಬೆಳೆಸಿ ನಾಡು ಉಳಿಸಿ ಕಾಡಿದ್ದರೆ ನಾಡು' ಇಂಥ ಘೋಷಣೆ/ಹೇಳಿಕೆಗಳನ್ನು ಹೊತ್ತಿರುವ ಫಲಕಗಳನ್ನು ಈಗೀಗ ನಮ್ಮ ನಾಡಿನ ಉದ್ದಗಲಕ್ಕೂ ನೋಡಬಹುದು. ಕಾಡನ್ನು ಉಳಿಸಿ, ಬೆಳೆಸಬೇಕೆಂಬ ಎಚ್ಚರದ ಹಿಂದಿರುವುದು ಭವಿಷ್ಯದ ಬಗ್ಗೆ ನಮ್ಮಲ್ಲಿರುವ ಆತಂಕ. ಕಾಡುಗಳು ನಾಶವಾದರೆ ವಾತಾವರಣದಲ್ಲಿನ ಸಮತೋಲನ ವ್ಯತ್ಯಯಗೊಂಡು ಭೂಮಿಯ ಮೇಲಿನ ಬದುಕು ಅಸಹನೀಯವಾಗುತ್ತದೆ ಎಂಬ ಕಠೋರ ಸತ್ಯ ಮನುಷ್ಯನನ್ನು ಕಂಗೆಡಿಸುತ್ತಿರುವುದರಿಂದಲೇ ಅರಣ್ಯ ರಕ್ಷಣೆಯನ್ನು ಕುರಿತು ಇಂಥ ಘೋಷಣೆ/ಹೇಳಿಕೆಗಳು ಕಾಣಿಸಿಕೊಳ್ಳುತ್ತಿರುವುದು ಆದರೆ ನಮ್ಮ ಪ್ರಾಚೀನರು ಕಾಡುಗಳನ್ನು ಕಂಡ ರೀತಿಯೇ ಬೇರೆ.

ಅವರು ವ್ಯಾವಹಾರಿಕ ದೃಷ್ಟಿಯಲ್ಲಿ, ಕಾಡಿನ ಸಸ್ಯ ಸಂಕುಲ ಪ್ರಾಣಿ ಸಂಕುಲಗಳ ಬಗೆಗೆ ಅವರು ಆತ್ಮೀಯ ಭಾವ ಬೆಳೆಸಿಕೊಂಡಿದ್ದರು. ಅವೆಲ್ಲವೂ ಮನುಷ್ಯನ ಸಹಜೀವಿಗಳು, ಸಖರು ಹಿತೈಷಿಗಳು-ಎನ್ನುವ ಬೆಚ್ಚಗಿನ ಭಾವ ಅವರಲ್ಲಿತ್ತು ಬದುಕಿನ ಚಿರ ಸತ್ಯಗಳನ್ನು ಅನು ಸಂಧಾನ ಮಾಡುತ್ತಿದ್ದ ತಪಸ್ವಿಗಳ ಪಾಲಿಗಂತೂ ಜನ ವಿದೂರವಾದ ಅರಣ್ಯಗಳೇ ಸಹಜ ವಾಸಸ್ಥಾನಗಳಾಗಿದ್ದವು. ಕಾಳಿದಾಸ ಚಿತ್ರಿಸಿದ ಶಕುಂತಲೇ ಆಶ್ರಮದ ಸಸ್ಯಗಳಿಗೆ ನೀರುಣಿಸದೇ ತಾನು ನೀರು ಕುಡಿಯುತ್ತಿರಲಿಲ್ಲವಂತೆ ಪತಿಗೃಹಕ್ಕೆ ತೆರಳುವಾಗ ತನ್ನ ಪ್ರೀತಿಯ ಮಾಧವೀಲತೆಯನ್ನು ಬೀಳ್ಕೊಳ್ಳುವ ಸಂದರ್ಭದಲ್ಲಿ ಆಕೆ ಹೇಳುವ ವಿದಾಯದ ಮಾತುಗಳಂತೂ ಅತ್ಯಂತ ಸ್ನಿಗ್ಧವಾಗಿವೆ. ಎಷ್ಟೋ ವರ್ಷಗಳ ನಂತರ ಲೌಕಿಕ ಜೀವನದಿಂದ ನಿವೃತ್ತಳಾಗಿ ಕಣ್ವಾಶ್ರಮಕ್ಕೆ ಈ ಮಾಧವೀಲತೆಯನ್ನೂ ನೆನಪಿಸಿಕೊಳ್ಳುತ್ತಿರುವ ಮಾಸ್ತಿಯ ವರು ಕಥೆಯೊಂದರಲ್ಲಿ ಬರೆದಿದ್ದಾರೆ. ಇದು ಪ್ರಾಚೀನ ಕಾಲದಲ್ಲಿ ಮನುಷ್ಯರ ಮತ್ತು ಪ್ರಕೃತಿಗಳ ನಡುವಿದ್ದ ಭಾವಸಂಬಂಧ ಕಾಡಿನ ಕೆಲವು ಮರಗಳು ದೇವತೆಗಳ ವಾಸಸ್ಥಾನವಾಗಿದೆ ಎಂಬ ನಂಬಿಕೆಯೂ ಭಾರತವೂ ಸೇರಿದಂತೆ ಹಲವು ಪ್ರಾಚೀನ ಸಂಸ್ಕೃತಿಗಳಲ್ಲಿದ್ದುದನ್ನು ಇತಿಹಾಸ ಹೇಳುತ್ತದೆ. ಆದ್ದರಿಂದಲೇ ವೃಕ್ಷಾರಾಧನೆಯ ಪರಂಪರೆ ಬೆಳೆಯಲು ಕಾರಣವಾಯಿತು. ಭಾರತದಲ್ಲಿ ಅಶ್ವತ್ಥ, ಆಲ, ಅತ್ತಿ, ಬಿಲ್ವ, ಮತ್ತು ಮುಂತಾದ ವೃಕ್ಷಗಳನ್ನು ತುಳಸಿ, ಎಕ್ಕ ಮೊದಲಾದ ಗಿಡಗಳನ್ನು ದೇವತೆ ಗಳೆಂದು ಆರಾಧಿಸುವ ಪದ್ಧತಿ ಇಂದಿಗೂ ಇದೆ. ಅಶ್ವತ್ಥವನ್ನು ಸೂರ್ಯ ವೃಕ್ಷವೆಂದೂ ಆಲಯವನ್ನು ವರುಣ ವೃಕ್ಷವೆಂದೂ ತೆಂಗನ್ನು 'ಕಲ್ಪವೃಕ್ಷ ವೆಂದೂ ಲಕ್ಷ್ಮೀಯ ಅವಳಿಯೆಂದು ನಮ್ಮವರು ಗೌರವಿಸುತ್ತಿದ್ದರು. ಕಂಚಿಯ ಏಕಾಂಬರೇಶ್ವರ ದೇವಾಲಯದಲ್ಲಿರುವ ಮಾವಿನ ಮರವನ್ನು ಅಲ್ಲಿನ "ಸ್ಥಳವೃಕ್ಷ'' ವೆಂದೇ ಪರಿಗಣಿಸಿ ಪೂಜಿಸುತ್ತಾರಂತೆ ಸಿದ್ಧಾರ್ಥನಿಗೆ ಬೋಧಿ ಲಾಭವಾಗಲು ಅವಕಾಶ ಮಾಡಿ ಕೊಟ್ಟ ಅಶ್ವತ್ಥ ವೃಕ್ಷವನ್ನು "ಬೋಧಿ ವೃಕ್ಷ''ವೆಂದು ಪೂಜಿಸಲಾಗುತ್ತದೆ.

ಒಂದೊಂದು ಮರವೂ ವರ್ಷದಲ್ಲಿ ಅನೇಕ ಟನ್ನುಗಳಷ್ಟು ಪ್ರಾಣವಾಯು ಅಥವಾ ಆಮ್ಲಜನಕವನ್ನು ಉತ್ಪಾದಿಸುತ್ತದೆ. ಕೇವಲ ಮನುಷ್ಯರು ಅಥವಾ ಪ್ರಾಣಿಗಳು ಭೂಲೋಕ ದಲ್ಲಿದ್ದರೆ ಒಂದೇ ದಿನದಲ್ಲಿ ವಾತಾವರಣವೆಲ್ಲ ಕಾರ್ಬನ್‌ಡಯಾಕ್ಸೈಡ್ ಎಂಬ ವಿಷ ವಾಯುವಿನಿಂದ ತುಂಬಿ ಹೋಗುತ್ತಿತ್ತು. ಆಗ ಜಗತ್ತೆಲ್ಲ ನಿಶ್ಶೇಷವಾಗಿ ಬಿಡುತ್ತಿತ್ತು. ಮರಗಳು ದ್ಯುತಿ ಸಂಶ್ಲೇಷಣ ಕ್ರಿಯೆಯಿಂದ ಮತ್ತೆ ಆಮ್ಲಜನಕವನ್ನು ಸತತವಾಗಿ ಉತ್ಪಾದಿಸುತ್ತಿರುವುದರಿಂದಲೇ ನಾವೂ, ಪ್ರಾಣಿ ಸಂಕುಲವೂ ಬದುಕಿರುವುದು. ಈ ದೃಷ್ಟಿಯಿಂದ ಮರಗಳು ಮಾಡುತ್ತಿರುವ ಉಪಕಾರ ಮಹತ್ತರವಾದುದು.

ವೃಕ್ಷ ಎಂಬ ಪದವೇ ಬೃಹದ್ಗಾತ್ರಕ್ಕೆ ಸಮಾನಾರ್ಥಕವಾಗಿ ಧೀರ್ಘಾಯುಷ್ಯದ ದ್ಯೋತಕವಾಗಿ ಭವ್ಯತೆಯ ಸಾಕಾರವಾಗಿ ರಮ್ಯತೆಯ ಸಂಕೇತವಾಗಿ ಶ್ರೇಷ್ಠತೆಯೇ ಉಪಯುಕ್ತತೆಯ ಪ್ರತಿಮಾ ಸ್ವರೂಪವಾಗಿ ಪ್ರಸಿದ್ಧವಾಗಿದೆ. ಅಲ್ಲವೆ? ಅಷ್ಟೇ ಏಕೆ? ವೃಕ್ಷ ಎಂಬುದು ನಾನಾ ಜೀವಿಗಳ


ನಮ್ಮ ಉಪನಿಷತ್ತುಗಳಲ್ಲಿ ಹಾಗೂ ಭಗವದ್ಗೀತೆಯಲ್ಲಿ 'ವಿಶ್ವವೃಕ್ಷ' ಪರಿಕಲ್ಪನೆಯಿದೆ. ಒಂದು ಕೊಂಬೆ ಬಾಡಿದಾಗ ಇನ್ನೊಂದು ಕೊಂಬೆ ಚಿಗಿತುಕೊಂಡು, ಸದಾಕಾಲ ಹೊಸತನವನ್ನು ಕಾಪಾಡಿಕೊಳ್ಳುವ ಅಶ್ವತ್ಥದ ಮರವನ್ನೇ ಉಪನಿಷತ್ತಿನ ಋಷಿಗಳು 'ವಿಶ್ವವೃಕ್ಷ'ವೆಂದು ಪ್ರತೀಕಗೊಳಿಸಿದ್ದಾರೆ ಉಪನಿಷತ್ತುಗಳಿಂದಲೇ ಪ್ರಭಾವಿತವಾದ ಭಗವದ್ಗೀತೆ ಈ ವಿಶ್ವವೃಕ್ಷವನ್ನು ಹೀಗೆ ವರ್ಣಿಸುತ್ತದೆ.

ಊರ್ಧ್ವ ಮೂಲಂ ಅಧಃ ತಾಖಂ ಅಶ್ವತ್ಥ ಪ್ರಾತು ರವ್ಯಯಮ್,
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ವೇದಮ್॥

ಇದರ ಅರ್ಥ - ಎಂದಿಗೂ ನಾಶ ಹೊಂದದ ಮೇಲೆ ಬೇರು, ಕೆಳಗೆ ಕೊಂಬೆ ಗಳಿರುವ ಒಂದು ಅಶ್ವತ್ಥ ವೃಕ್ಷವಿದೆ. ಅದರ ಎಲೆಗಳೇ ವೇದಗಳು. ಅದನ್ನು ಬಲ್ಲವನ್ನು ವೇದವನ್ನು ತಿಳಿದವನು. ಇಲ್ಲಿ ವೇದವೆಂದರೆ ಜ್ಞಾನ ಈ ವಿಶ್ವಕ್ಷದ ಮೂಲ ಪರತತ್ತ್ವ ಆದ್ದ ರಿಂದಲೇ ಅದು ಬಾನಿನಲ್ಲಿದೆ. ಚಲನ ಶೀಲವೂ ನಿತ್ಯವೂ ಆಗಿರುವ ಈ ಜಗತ್ತು ಅದರ ಕೊಂಬೆ ರಂಬೆಗಳು, ಅವು ಕೆಳಮುಖವಾಗಿದೆ. ಈ ವಿಶ್ವವೃಕ್ಷದ ಎಲೆಗಳೇ ಜ್ಞಾನರಾಶಿ! ಇಂಥ ತಾತ್ವಿಕ ಚಿಂತನೆ , ಪೂಜ್ಯಭಾವ, ಪ್ರೀತಿ ಗೌರವ - ಇತ್ಯಾದಿಗಳು ಮರ, ಗಿಡ, ಬಳ್ಳಿಗಳ ಬಗೆಗೆ ನಮ್ಮಲ್ಲಿದ್ದಾಗ ಅವುಗಳ ರಕ್ಷಣೆ ನಮ್ಮ ಪಾಲಿಗೆ ಕೇವಲ ಲೌಕಿಕ ಅಥವಾ ವ್ಯಾವಹಾರಿಕ ಕರ್ತವ್ಯವಾಗುವುದಿಲ್ಲ ಗೌರವದ ಕಾಯಕವಾಗುತ್ತದೆ.



ಬಾಳಿನ ಸಾರ ಹೇರಳ ಜೀವಿಗಳ ಬದುಕಿನ ಆಧಾರ ಕೂಡ ಹೌದಲ್ಲ? ಹಾಗೆಲ್ಲ ಭೂಮಿಗೆ ಚೇತನದ ಉಡುಗೆ ತೊಡಿಸುವ ವೃಕ್ಷಗಳದು  ಈ ದಿಶೆಯಲ್ಲಿ 22 ಕೋಟಿ ವರ್ಷಗಳ ಇತಿಹಾಸ. ಮರಗಳಿಗೂ ಒಳಗಿನ ಅರಿವಿದೆ. ಅವುಗಳಿಗೂ ಸುಖ ದುಃಖಗಳಿವೆ ಎಂಬುದನ್ನು ನಾವು ಗಮನಿಸಬೇಕು. ಆಧುನಿಕ ವಿಜ್ಞಾನಿಗಳೇ ಈ ಮಾತನ್ನು ಹೊಸದಾಗಿ ಹೇಳಿದ್ದಲ್ಲ. ಪ್ರಾಚೀನ ಋಷಿಗಳು ಈ ಮಾತನ್ನು ಹೇಳಿದ್ದಾರೆ ಎಂಬುದನ್ನು ನಾವು ಗೌಣಗೊಳಿಸಿದ್ದೇವೆ.



ಭಾಗವತದ ಆರಂಭದಲ್ಲಿ ಬರುವ ಶುಕ ಮುನಿಯ ಬಗೆಗೆ ಇರುವ ಶ್ಲೋಕವನ್ನು ನೋಡೋಣ. ವೈರಾಗ್ಯದಿಂದ ಶುಕನು ಎಲ್ಲವನ್ನೂ ತ್ಯಜಿಸಿ ಹೊರಟಾಗ ಅವನ ವಿಯೋಗದಿಂದ ದಶಾತರನಾದ ವ್ಯಾಸವೇ 'ಹಿಂದುರಿಗೆ ಬಾ' ಎಂದು ಕೂಗಿದನಂತೆ ಪುತ್ರ, ಪುತ್ರ ಎಂದು ಮರಗಳೆಲ್ಲ ತನ್ಮಯತೆಯಿಂದ ಅವನ ಕೂಗನ್ನು ತಾವೂ ಪ್ರತಿಧ್ವನಿಸಿದಂತೆ ಈ ಭಾವನೆಯನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು. ಪ್ರಕೃತಿ ಸಜೀವ ಸಭಾವ ಎಂಬುದನ್ನು ಅರಿತು ಕೊಳ್ಳಬೇಕು. ಮರಗಳಿಂದ ನಾವು ಕಲಿಯಬೇಕಾದ ಪಾಠಗಳು ಹಲವು ಇವೆ.

ತಮ್ಮ ಚಿಕ್ಕವಯಸ್ಸಿನಲ್ಲಿ ಯಾರೋ ಸ್ವಲ್ಪ ನೀರನ್ನು ನೀಡಿದರು ಎಂದು ಸ್ಮರಿಸಿಕೊಂಡು ತೆಂಗಿನ ಮರಗಳು ತಮ್ಮ ತಲೆಯ ಮೇಲೆ ಕಾಯಿಗಳಲ್ಲಿ ಅಮೃತ ಸಮಾನವಾದ ನೀರನ್ನು ಹೊತ್ತು ಕೊಂಡು ನಿಂತು ಜನರಿಗೆ ನೀಡುತ್ತಿವೆ. ಸಜ್ಜನರು ತಮಗೆ ಇತರರು ಮಾಡಿದ ಉಪಕಾರವನ್ನು ಎಂದೂ ಮರೆಯುವುದಿಲ್ಲ.ಹಣ್ಣುಗಳಿಂದ ತುಂಬಿದಾಗ ಮರಗಳು ಬಗ್ಗುತ್ತದೆ.  ನೀರು ತುಂಬಿದಾಗ ಮೋಡಗಳು ಕೆಳಗೆ ಇಳಿಯುತ್ತವೆ. ಧನ ಸಮೃದ್ಧಿ ಬಂದಾಗ ಸಜ್ಜನರು ವರ್ಗರಹಿತರಾಗಿ ನಮ್ರತೆಯನ್ನು ಪಡೆಯುತ್ತಾರೆ. ಪರೋಪಕಾರಿಗಳ ಸ್ವಭಾವವೇ ಇದು. ಇಂಥ ವೃಕ್ಷಗಳಿಗೆ ಮಾನವರ ಪ್ರತಿಕ್ರಿಯೆ ಏನು? ಅನೇಕ ಪಾಂಥರು ನೆರಳನ್ನು ನೀಡುವ ಮರವೊಂದನ್ನು ಆಶ್ರಯಿಸುತ್ತಾನೆ.

ಅವರಲ್ಲೊಬ್ಬರು ಒಳ್ಳೆಯ ಮನಸ್ಸಿನಿಂದ ಆ ಮರಕ್ಕೆ ಶುಭವನ್ನು ಹಾರೈಸುತ್ತಾರೆ. ಇನ್ನೊಬ್ಬರು ಆ ಮರದ ಕೊಂಬೆಗಳನ್ನು ಕಡಿದು (ವಾಕಿಂಗ್‌ಸ್ಟಿಕ್) ಮಾಡ ಬಹುದೆಂದು ಯೋಚಿಸುತ್ತಾನೆ. ಮತ್ತೊಬ್ಬನಾದದರೋ ಆ ಮರದ ಕಾಂಡವನ್ನೇ ಕಡಿದು ತನ್ನ ಮನೆಗೆ ಬಾಗಿಲುಗಳನ್ನು ಮಾಡಿಸಲು ಹವಣಿಸುತ್ತಾನೆ. ಹೂಬಿಟ್ಟು ಹಣ್ಣನ್ನು ಕೊಡುವ ಮರ ವಾನಸ್ಪತ್ಯ ಮಾವಿನ ಮರ ಇದರ ಒಂದು ಉದಾಹರಣೆ.




ಯಾವ ಮರದ ಹೂವು ಕಾಣದೆ ಹಣ್ಣು ಸಿಗುವುದೋ ಅದು ವನಸ್ಪತಿ. ಹಲಸಿನ ಮರ ಇದಕ್ಕೆ ಸೂಕ್ತ ಉದಾಹರಣೆ. ಒಂದು ಸಲ ಹಣ್ಣು ಬಿಟ್ಟರೆ ಯಾವ ಸಸ್ಯದ ಆಯುಷ್ಯ ಮುಗಿವುದೋ ಅದು ಔಷಧಿ ಉದಾಹರಣೆಗೆ ಬಾಳೆಗಿಡ. ಪ್ರಕೃತಿಯೊಡನೆ ಸಹಬಾಳ್ವೆ ಮಾಡುತ್ತಿದ್ದವರು ವೃಕ್ಷ ಸಂಪತ್ತಿನ ವಿವರಗಳನ್ನು ತಿಳಿದುಕೊಂಡಿದ್ದರು ಈಗ ನಮಗೆ ಮರಗಳ ಹೆಸರುಗಳಲ್ಲಿ, ಗುಣಗಳಾಗಲಿ ತಿಳಿದಿಲ್ಲ ಪ್ರಕೃತಿಗೆ ದೂರವಾಗಿ ಕ್ರಾಂಕೀಟ್ ಕಾಡುಗಳಲ್ಲಿ ವಾಸ ಮಾಡುತ್ತಿರುವುದು ನಮ್ಮ ದುರ್ದೈವ.

(ವಿವಿಧ ಮೂಲಗಳಿಂದ)



# ಕೋಟಿ ಗೋವಿಂದನಾಮ ಲಿಖಿತಕ್ಕೆ ಪಾಲಿಸಬೇಕಾದ ಸಾಧಾರಣ ನಿಯಮಗಳು




1. ಕೋಟಿ ಗೋವಿಂದ ನಾಮವನ್ನು ಬರೆಯುವುದಕ್ಕೆ ಪ್ರತಿದಿನವೂ ಒಂದು ಪ್ರತ್ಯೇಕವಾದ ಸಮಯದಲ್ಲಿ ಪೂರ್ವದಿಕ್ಕಿಗೆ ಕುಳಿತು ಪ್ರಾರಂಭಿಸಬೇಕು.

2. ಪ್ರತಿದಿನವೂ ಕೋಟಿ ಗೋವಿಂದ ನಾಮವನ್ನು ಬರೆಯುವ ಮೊದಲು ಮನಸ್ಸಿನಲ್ಲೇ ಶ್ರೀವೆಂಕಟೇಶ್ವರನಿಗೆ ನಮಸ್ಕರಿಸಬೇಕು.

3. ಗೋವಿಂದನಾಮವನ್ನು ಬರೆಯಬೇಕೆಂದು ಕೊಂಡಾಗ ಶ್ರೀವೆಂಕಟೇಶ್ವರ ಸ್ವಾಮಿಯ ಪಟದ ಮುಂದೆ ಅಥವಾ ವಿಗ್ರಹದ ಮುಂದೆ ಮಾನಸಿಕವಾಗಿ ಸಂಕಲ್ಪವನ್ನು ಮಾಡಿಕೊಳ್ಳಬೇಕು.

4. ಒಳ್ಳೆಯ ದಿನವನ್ನು, ನೋಡಿಕೊಂಡು ಪುಸ್ತಕಕ್ಕೆ ಅರಿಶಿನ , ಕುಂಕುಮವನ್ನು ಇಟ್ಟು ದೇವರ ಸನ್ನಿಧಿಯಲ್ಲಿ ಇರಿಸಿ. ಹೂಗಳೊಂದಿಗೆ ಶ್ರೀವೇಂಕಟೇಶ್ವರ ಸ್ವಾಮಿಯ ಅಷ್ಟೋತ್ತರ ಶತನಾಮಾವಳಿಯೊಂದಿಗೆ ಪೂಜಿಸಬೇಕು.

5. ಗೋವಿಂದ ನಾಮವನ್ನು ಬರೆಯುವಾಗ ಇತರ ಕೆಲಸಗಳನ್ನು ಯೋಚನೆಗಳನ್ನು ಮಾಡಬಾರದು. ಮನಸ್ಸು ಅಚಲವಾಗಿರಿಸಿಕೊಂಡು ಗೋವಿಂದಾ! ಎಂದು ಸ್ಮರಿಸುತ್ತಾ ಮನಸ್ಸನ್ನು ದೇವರಲ್ಲೇ ಕೇಂದ್ರೀಕರಿಸಿಕೊಂಡು ಬರೆಯಬೇಕು.

6. ಆಕಸ್ಮಾತ್ತಾಗಿ ಯಾವುದಾದರೂ ಕೆಲಸದ ಮೇಲೆ ಹೊರಗೆ ಹೋಗಬೇಕಾದಲ್ಲಿ ಒಂದು ಸರಿಸಂಖ್ಯೆಯಲ್ಲಿ ಗೋವಿಂದನಾಮವನ್ನು ಬರೆಯುವುದನ್ನು ನಿಲ್ಲಿಸಿ ಪುಸ್ತಕವನ್ನು ಮುಚ್ಚಿ ನಮಸ್ಕರಿಸಿ ಹೋಗಬೇಕು. ಕೆಲಸವಾದ ನಂತರ ಕೈಕಾಲುಗಳನ್ನು ತೊಳೆದುಕೊಂಡು ಶುಚಿಯಾಗಿ ಮತ್ತೆ ಬರೆಯುವುದನ್ನು ಪ್ರಾರಂಭಿಸಬೇಕು.

7. ಕೋಟಿ ಗೋವಿಂದ ನಾಮವನ್ನು ಬರೆಯುವ ಪುಸ್ತಕವನ್ನು ಭದ್ರವಾಗಿರಿಸಿಕೊಳ್ಳಬೇಕು. ಅದರಲ್ಲಿ ಇತರ ಯಾವುದೇ ವಿಷಯಗಳನ್ನು ಬರೆಯಬಾರದು.ಇದಕ್ಕೆ ಉಪಯೋಗಿಸುವ ಲೇಖನಿಯನ್ನೂ ಪ್ರತ್ಯೇಕವಾಗಿರಿಸಿಕೊಳ್ಳಬೇಕು.

8. ಕೋಟಿ ಗೋವಿಂದ ನಾಮವನ್ನು ಬರೆಯುವುದಕ್ಕೆ ಪ್ರತ್ಯೇಕವಾದ ಸಮಯವೆನ್ನುವುದು ಇರುವುದಿಲ್ಲ. ಆದರೆ ಶುಚಿ, ಶುಭ್ರತೆ, ಪವಿತ್ರತೆಯನ್ನು,ಪ್ರಶಾಂತತೆಯನ್ನು ಪಾಲಿಸಬೇಕು. ಒಂದು ವೇಳೆ ನಿದ್ದೆ ಬರುತ್ತಿದ್ದರೆ, ನಿದ್ದೆಯನ್ನು ತಡೆದುಕೊಂಡು ಬರೆಯಬಾರದು.

9. ಪ್ರತಿ ಲಕ್ಷ ನಾಮಗಳಿಗೆ ಪ್ರತ್ಯೇಕವಾದ ಪೂಜೆ, ನೈವೇದ್ಯವನ್ನು ಮಾಡಿ ಪ್ರಸಾದವನ್ನು ಹಂಚಬೇಕು. ಕೋಟಿಗೋವಿಂದ ನಾಮವನ್ನು ಬರೆದ ನಂತರ ಶಕ್ತ್ಯಾನುಸಾರ ಪೂಜೆ, ನೈವೇದ್ಯವನ್ನು ಸಮರ್ಪಿಸಿ ಆರಾಧನೆಯನ್ನು ಮಾಡುವುದು ಒಳ್ಳೆಯದು .

10. ಕೋಟಿ ಗೋವಿಂದನಾಮವನ್ನು ಬರೆದು ಮುಗಿಸಿದ ನಂತರ ಆ ಪುಸ್ತಕವನ್ನು ಅರಿಸಿನದ ಬಟ್ಟೆಯಲ್ಲಿ ಸುತ್ತಿ ತಿರುಮಲೆಯ ಶ್ರೀವೆಂಕಟೇಶ್ವರನಿಗೆ ಸಮರ್ಪಿಸಬೇಕು.

11. ಈ ರೀತಿ ಗೋವಿಂದ ನಾಮಕೋಟಿಯನ್ನು ಭಕ್ತರು ನಿಷ್ಠೆಯಿಂದ ಬರೆದರೆ ಮನಸ್ಸಿನಲ್ಲಿ ಅಂದುಕೊಂಡ ಕೆಲಸಗಳನ್ನು ದಿಗ್ವಿಜಯವಾಗಿ ಪೂರ್ತಿಯಾಗುತ್ತವೆ.

12. ಯಾವುದಾದರೂ ಕೆಲಸವು ಪೂರ್ತಿಯಾಗಬೇಕೆಂದು ಸಂಕಲ್ಪಿಸಿಕೊಂಡು ಕೋಟಿ ಗೋವಿಂದನಾಮವನ್ನು ಬರೆಯಲು ಪ್ರಾರಂಭಿಸಿದರೆ ಅದು ಖಂಡಿತವಾಗಿಯೂ ನೆರವೇರುತ್ತದೆ.

13. ಅಶುಚಿಯಾಗಿದ್ದಾಗ, ಮೈಲಿಗೆಯ ಸಮಯದಲ್ಲಿ ಗೋವಿಂದ ನಾಮವನ್ನು ಬರೆಯಬಾರದು.

14. ಸ್ತ್ರೀ, ಪುರುಷರು, ವಯಸ್ಸು ತಾರತಮ್ಯಗಳಿಲ್ಲದಂತೆ ಕೋಟಿ ಗೋವಿಂದ ನಾಮವನ್ನು ಬರೆಯಬಹುದು.



# ಹರಿದಾಸರ ಒಡನಾಡಿ ಶ್ರೀ ವಿಜಯೀಂದ್ರ ತೀರ್ಥರು

– ಶ್ರೀಧರ ರಾಯಸಂ

ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳಿಗೆ ಪರಮಗುರುಗಳಾಗಿ ಕ್ರಿ.ಶ. 1505 ರಿಂದ ಕ್ರಿ.ಶ. 1595 ರ ವರೆಗೆ 90 ವರ್ಷಗಳಷ್ಟು ಭಾರತ ಪುಣ್ಯ ಭೂಮಿಯಲ್ಲಿ ಸುಧೀರ್ಘವಾದ ಭವ್ಯ ಅವತಾರ ಮಾಡಿದ ಗುರುಗಳು. ಶ್ರೀವಿಜಯೀಂದ್ರತೀರ್ಥರು. ಚಕ್ರವರ್ತಿಗಳ ರಾಜಗುರುಗಳಾಗಿದ್ದ ಶ್ರೀ ವ್ಯಾಸರಾಜರು, ಶ್ರೀವಾದಿರಾಜರು, ಶ್ರೀರಘೋತ್ತಮತೀರ್ಥರಿಗೆ ಸಮಕಾಲೀನರಾಗಿ ಪುರಂದರದಾಸರು, ಕನಕದಾಸರು ಮೊದಲಾದ ಹರಿದಾಸರ ಒಡನಾಡಿಯಾಗಿ ಸುಧೀಂದ್ರತೀರ್ಥರಿಗೆ ಗುರುಗಳಾಗಿ ಶ್ರೀ ವಿಜಯೀಂದ್ರ ತೀರ್ಥರು. 104 ಗ್ರಂಥಗಳನ್ನು ರಚಿಸಿದ ಗುರುವರೇಣ್ಯರು. ಅಪ್ಪಯ್ಯ ದೀಕ್ಷಿತರಂತಹ ಮಹಾ ಪಂಡಿತರನ್ನು ವಾದದಲ್ಲಿ ಸೋಲಿಸಿ, ಜಯಶೀಲರಾಗಿ ರಾಜಮಹಾರಾಜರಿಗೆ ಶ್ರೇಷ್ಠ ಮಾರ್ಗದರ್ಶಕರಾಗಿ ಅಪಾರ ಮಹಿಮೆಗಳನ್ನು ವಿಸ್ಮಯಗೊಳಿಸಿ ದ್ವೈತ ವೇದಾಂತ ಪ್ರಚಾರ ಮಾಡಿ ಪರಂಪರೆಯ ಗೌರವ ಉಳಿಸಿದವರು.

ತಪಸ್ಸು ವಿದ್ಯೆ,ವಿರಕ್ತಿಗಳ ತ್ರಿವೇಣಿ ಸಂಗಮವಾಗಿದ್ದ, ಶ್ರೀವಿಜಯೀಂದ್ರ ತೀರ್ಥರು, ಶ್ರೀಸುಧೀಂದ್ರತೀರ್ಥರು, ಶ್ರೀ ರಾಘವೇಂದ್ರ ಸ್ವಾಮಿಗಳ ಶಿಷ್ಯ , ಪ್ರಶಿಷ್ಯರನ್ನು ತಾತ್ವಿಕ ಲೋಕಕ್ಕೆ ನೀಡಿದ ಹಿರಿಮೆ ಇವರದು. ಗ್ರಂಥ ರಚನೆಯಲ್ಲಿ ಇವರು ದ್ವೈತ ವಾಙ್ಮಯದ ಇತಿಹಾಸ ಸೃಷ್ಟಿಸಿದ ಮಹನೀಯರು. (104 ಗ್ರಂಥಗಳು) ಶ್ರೀವಿಜಯೀಂದ್ರತೀರ್ಥರ ಅಪಾರ ಮಹಿಮೆ ಶ್ರೀಮಧ್ವಕವಿ ವಿರಚಿತ "ವಿಜಯೀಂದ್ರ ವಿಜಯಕಾವ್ಯ'' ಪ್ರಮುಖವಾದುದು.

ಬಹುಕಾಲದ ನಂತರ ವೃದ್ಧ ದಂಪತಿಗಳಿಗೆ ಸಂತಾನವಾಗಿ ಆ ಗಂಡು ಮಗುವನ್ನು ಶ್ರೀ ವ್ಯಾಸರಾಜರಿಗೆ ಒಪ್ಪಿಸಿ ಕೃತಾರ್ಥರಾದರು. ಆ ಮಗು ವಿಠಲನನ್ನು ಮಠದಲ್ಲಿಟ್ಟುಕೊಂಡು ಪೋಷಿಸಿದರು. ಉಪನಯನವನ್ನೂ ಮಾಡಿಸಿ, ಶ್ರೀವ್ಯಾಸರಾಜರು ವಿಠಲನಿಗೆ ಆತನ ಪಾಂಡಿತ್ಯ ಕಂಡು ಸಂತೋಷದಿಂದ ವಿಷ್ಣುತೀರ್ಥ ಎಂದು ನಾಮಾಂಕಿತ, ಮಾಡಿ ಅನುಗ್ರಹಿಸಿದರು. ವಿಷ್ಣುತೀರ್ಥರಿಗೆ ಸರ್ವಮೂಲ ಗ್ರಂಥಗಳನ್ನು ಆರು ಸಲ ಶ್ರೀ ಮನ್ಯಾಯಸುಧೆ ಒಂಭತ್ತು ಸಲ ಸಮಗ್ರ ಪಾಠ ಮಾಡಿ ದಾಖಲೆ ಮಾಡಿದರು. ಶ್ರೀ ವಿಷ್ಣುತೀರ್ಥರಿಗೆ ಪಾಠ ನಡೆದಿದ್ದ ಸಮಯದಲ್ಲಿ ಇತರ ಯತಿಗಳ ಪೈಕಿ ಶ್ರೀ ವಾದಿರಾಜರು ಪಾಠ ಪ್ರವಚನದಲ್ಲಿದ್ದುದು ವಿಶೇಷ! ಶ್ರೀ ವ್ಯಾಸರಾಜರು ಶ್ರೀಕೃಷ್ಣ ದೇವರಾಯನ ಮೂಲಕ ವಿಜಯನಗರಕ್ಕೆ ಸುರೇಂದ್ರ ತೀರ್ಥರನ್ನು ಆಹ್ವಾನಿಸಿ ವಿಶೇಷವಾಗಿ ಆದರಿಸಿದರು. ಶ್ರೀ ಸುರೇಂದ್ರ ತೀರ್ಥರ ಒಡನಾಟ ಶ್ರೀವ್ಯಾಸರಾಜರೊಂದಿಗೆ ಬಹುಕಾಲ ನಡೆದಿತ್ತು! ಸುರೇಂದ್ರ ತೀರ್ಥರಿಗೆ ವಿಷ್ಣು ತೀರ್ಥರು, ವಾದಿರಾಜರು ವಿಶೇಷವಾಗಿ ಆಕರ್ಷಿತರಾದರು ! ಸೋದೆ ಮಠಕ್ಕೆ ಶ್ರೀವಾದಿ ರಾಜರು ಉತ್ತರಾಧಿಕಾರಿಯಾಗಿ ನೇಮಕ ಸೂಚಿಸಿದ್ದರಿಂದ ಸಹಜವಾಗಿ ವಿಷ್ಣು ತೀರ್ಥರನ್ನು ತಮ್ಮ ಮಠಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಲು ಶ್ರೀವ್ಯಾಸರಾಜರನ್ನು ಕೇಳಿಕೊಂಡರು. ಶ್ರೀ ವ್ಯಾಸರಾಜರು, ದಕ್ಷಿಣ ಭಾರತದಲ್ಲಿ, ದ್ವೈತ ಸಿದ್ಧಾಂತಕ್ಕೆ ಮತ್ತು ತತ್ವ ಪ್ರಚಾರ ಮಾಡಲು ವಿಷ್ಣುತೀರ್ಥರು ಸಮರ್ಥರೆಂದು ತೀರ್ಮಾನಿಸಿ ತಮ್ಮ ಒಪ್ಪಿಗೆ ಸೂಚಿಸಿದರು. ಸುಮುಹೂರ್ತದಲ್ಲಿ ವಿಷ್ಣುತೀರ್ಥರನ್ನು ಸುರೇಂದ್ರ ತೀರ್ಥರಿಗೆ ಒಪ್ಪಿಸಿದರು. ಶ್ರೀಸುರೇಂದ್ರ ತೀರ್ಥರು, ವಿಷ್ಣು ತೀರ್ಥರನ್ನು ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡು ವಿಜಯೀಂದ್ರತೀರ್ಥ ಎಂದು ನಾಮಕರಣ ಮಾಡಿದರು. ನೂತನ ಗುರುಗಳಿಗೆ ಶ್ರೀ ವ್ಯಾಸರಾಜರೂ ಅನೇಕ ಅಮೂಲ್ಯ ಉಡುಗೊರೆ ಗ್ರಂಥಗಳನ್ನು ಅರ್ಪಿಸಿ ಆಶೀರ್ವಾದ ಮಾಡಿದರು. ಶ್ರೀ ಕೃಷ್ಣ ದೇವರಾಯ ಅಚ್ಯುತರಾಯ, ಅಳಿಯ ರಾಮರಾಯ, ಚನ್ನಪ್ಪನಾಯಕ, ವಿಶ್ವನಾಥನಾಯಕ, ವೈದಿಕ ಲೌಕಿಕ ವಿದ್ವಾಂಸರು ಧರ್ಮಾಭಿಮಾನಿ ಗಳು, ಅನೇಕ ಕಾಣಿಕೆಗಳನ್ನು ಸಮರ್ಪಿಸಿ ಧನ್ಯರಾದರು.

ಶ್ರೀವಿಜಯೀಂದ್ರತೀರ್ಥರು 64 ವಿದ್ಯೆಗಳನ್ನು ಕರತಲಾಮಲಕ ಮಾಡಿಕೊಂಡು 64 ದೇವರ ಪ್ರತಿಮೆಗಳನ್ನು ಪ್ರತಿ ನಿತ್ಯ ಭಕ್ತಿಯಿಂದ ಪೂಜಿಸುತ್ತಿದ್ದರು!!! ಕೃಷ್ಣ ಶರ್ಮ ಎಂಬ ಪ್ರಕಾಂಡ ಪಂಡಿತನನ್ನು ವಾದದಲ್ಲಿ ಸೋಲಿಸಿ ಪ್ರಚಂಡ ವಿಜಯಗಳಿಸಿದರು. ಶ್ರೀ ವಿಜಯೀಂದ್ರತೀರ್ಥರು ಹರಿ ಸರ್ವೋತ್ತಮತ್ವ ಮಧ್ವಸಿದ್ಧಾಂತದ ಹರಿದಾಸ ತತ್ವ ಆಸೇತು ಹಿಮಾಚಲ ಪ್ರಚಾರ ಮಾಡಿ ಅನುಗ್ರಹ ಮಾಡಿದ ಮಹನೀಯರುಗ್ರಂಥ ರಚನೆ ವಿದ್ಯೆಯ ವಿಕಸನ ಇವರ ಮುಖ್ಯ ಗುರಿಯಾಗಿತ್ತು. ಶ್ರೀ ವ್ಯಾಸರಾಜರ ಗ್ರಂಥಗಳಿಗೆ ಟಿಪ್ಪಣಿ ಬರೆದು, ಪ್ರಸಿದ್ಧರಾದರು.


ಕಂಚಿ ಕ್ಷೇತ್ರದಲ್ಲಿ ಅನೇಕ ಪಂಡಿತರನ್ನು ಸೋಲಿಸಿ ಮಧ್ವಸಿದ್ಧಾಂತದ ವಿಜಯದುಂಧುಭಿ ಮೊಳಗಿಸಿದರು. ಕೋಲಾರದಲ್ಲಿ, ತುಮಕೂರಿನಲ್ಲಿ ಪ್ರಾಣದೇವರ ಪ್ರತಿಷ್ಠೆ ಮಾಡಿ ಅಲ್ಲಿರುವ ಜನತೆಗೆ ವಿದ್ವತ್ಪೂರ್ಣ ಸಿದ್ಧಾಂತ ಪರಿಚಯ ಮಾಡಿದರು.

ಅಲ್ಲಿ ಕೆಲಕಾಲ ನೆಲೆಸಿ ಪಾಠ ಪ್ರವಚನಗಳನ್ನು ಮಾಡಿ ಗೌರವ ಸಂಪಾದಿಸಿದರು. ಕೆಲಕಾಲದ ನಂತರ ಶ್ರೀವ್ಯಾಸರಾಜರು ಕ್ರಿ.ಶ. 1539 ರಲ್ಲಿ ಆನೆಗೊಂದಿಯಲ್ಲಿ (ನವವೃಂದಾವನ ) ವೃಂದಾವನಸ್ಥರಾದರು. ಶ್ರೀಪುರಂದರದಾಸರು, ಶ್ರೀ ವ್ಯಾಸರಾಜರ ವೃಂದಾವನ ಪ್ರತಿಷ್ಠೆ ಸಮಯ ದಲ್ಲಿ ಬಳಿಯಿದ್ದುದು ವಿಶೇಷ!! ಹಲವು ತಿಂಗಳ ನಂತರ ಶ್ರೀಸುರೇಂದ್ರ ತೀರ್ಥರು ಮಧುರೈನಲ್ಲಿ ಪುಷ್ಯ ಶುದ್ಧ ದ್ವಾದಶಿ ವೃಂದಾವನಸ್ಥರಾದರು. ಶ್ರೀವಿಜಯೀಂದ್ರತೀರ್ಥರು, ತಮ್ಮಗುರುಗಳ ವೃಂದಾವನ ಪ್ರತಿಷ್ಠೆ ನಂತರ ತಂಜಾವೂರಿಗೆ ಪ್ರಯಾಣ ಮಾಡಿ ಅಲ್ಲಿನ ಅರಸರಿಂದ ವಿಶೇಷ ಸನ್ಮಾನಿತ ರಾದರು. ನಂತರ ಕುಂಭಕೋಣಕ್ಕೆ ದಿಗ್ವಿಜಯ ಮಾಡಿ ಪುನಃ ವಿಜಯ ನಗರಕ್ಕೆ ವಾಪಸ್ಸು ಬಂದಾಗ ಅಳಿಯ ರಾಮರಾಯ ಸಕಲ ಮರ್ಯಾದೆ ಯೊಂದಿಗೆ ಶ್ರೀ ವಿಜಯೀಂದ್ರತೀರ್ಥರಿಗೆ ರತ್ನಾಭಿಷೇಕ ಮಾಡಿ ಕೃತಾರ್ಥ ನಾದನು. ದಕ್ಷಿಣ ಭಾರತದಲ್ಲಿ ಶ್ರೀವಿಜಯೀಂದ್ರ ತೀರ್ಥರು ಸಂಚರಿಸಿ ತಮ್ಮಮಹಿಮೆಗಳನ್ನು ಪ್ರದರ್ಶಿಸಿ ವಿದ್ವತ್ ಪ್ರಚಾರ ಮಾಡಿದರು. ಅಲ್ಲಿನ ಮಾಂತ್ರಿಕನ ಪರಾಭವ,ಚೆನ್ನಪ್ಪನಾಯಕನಿಗೆ ಅನುಗ್ರಹ ಮಾಡಿ ಪುತ್ರೋತ್ಸವ ಮಾಡಿಸಿದ್ದು, ಶಿಲ್ಪಕಲೆಯ ಪ್ರಾವೀಣ್ಯತೆ ಪ್ರದರ್ಶಿಸಿದ್ದು ಸಂಗೀತ ಕಲೆ ನೈಪುಣ್ಯತೆ ಪ್ರದರ್ಶಿಸಿದ್ದು, ವ್ಯಾಕರಣ ಕಲೆ ನೈಪುಣ್ಯತೆ ಅಭಿವ್ಯಕ್ತಿ ಗೊಳಿಸಿ ಉಡುಪಿಗೆ ಬಂದರು. ಶ್ರೀವಾದಿರಾಜ ಗುರು ಸಾರ್ವಭೌಮರು, ಸಕಲ ಮರ್ಯಾದೆಯೊಂದಿಗೆ, ಶ್ರೀವಿಜಯೀಂದ್ರತೀರ್ಥರನ್ನು ಸ್ವಾಗತಿಸಿದ ಸಂದರ್ಭ, ಸಂಭ್ರಮ ಅವರ್ಣನೀಯ. ಶ್ರೀ ವಾದಿರಾಜರು ಶ್ರೀಕೃಷ್ಣ ಮಠದ ಹತ್ತಿರ ಒಂದು ಸ್ಥಳವನ್ನು ನೀಡಿದರು. ಅದು ಈಗ, ಶ್ರೀರಾಘವೇಂದ್ರ ಸ್ವಾಮಿ ಗಳ ಮಠ ಎಂದು ಪ್ರಸಿದ್ಧಿಯಾಗಿದೆ.

90 ವರ್ಷಗಳ ಸುಧೀರ್ಘ ಜೀವನ ನಡೆಸಿ ದ್ವೈತ ಸಿದ್ಧಾಂತ ಆಸೇತು ಹಿಮಾಚಲ ಪ್ರಚುರ ಪಡಿಸಿ , ಕುಂಭ ಕೋಣದಲ್ಲಿ, ವಿಜಯೇಂದ್ರ ರಾಮ ಅಂಕಿತದಿಂದ (ತಮಿಳುನಾಡು) ಶ್ರೀವಿಜಯೀಂದ್ರತೀರ್ಥರು ಶ್ರೀ ಸುಧೀಂದ್ರ ತೀರ್ಥರಿಗೆ ಮಠದ ಜವಾಬ್ದಾರಿ ವಹಿಸಿ, ಜೇಷ್ಠ ಬಹುಳ ತ್ರಯೋ ದಶೀ ವೃಂದಾವನಸ್ಥರಾದರು. 104 ಶ್ರೇಷ್ಠ ಗ್ರಂಥಗಳನ್ನು ರಚಿಸಿ ಮಧ್ವ ಸಿದ್ಧಾಂತ ಪ್ರಚಾರ ಮಾಡಿ ಶ್ರೀ ರಾಘವೇಂದ್ರ ಸ್ವಾಮಿಗಳ ಪರಮ ಗುರು ಗಳಾಗಿ ಶ್ರೀ ವಿಜಯೀಂದ್ರತೀರ್ಥರು, ಕುಂಭಕೋಣದಲ್ಲಿ ಭಕ್ತರಿಗೆ ಅನುಗ್ರಹಿಸುವ ಮಹಾನ್ ಯತಿವರ್ಯರು ಕಂಬಳೂರು ರಾಮಚಂದ್ರ ತೀರ್ಥರು ಇವರ ವಿದ್ಯಾಶಿಷ್ಯರಾಗಿದ್ದುದು ವಿಶೇಷ.

ಭಕ್ತಾನಾಂ ಮಾನಸಾಂಭೋಜ ಭಾನವೇ ಕಾಮಧೇನವೇ
ನಾಮತಾಂ ಕಲ್ಪತರವೇ ಜಯೀಂದ್ರ ಗುರುವೇ ನಮಃ

# ಯೋಗ



"ಯೋಗ" ಎಂದ ಕೂಡಲೆ ನಮ್ಮ ಕಣ್ಣೆದುರಿಗೆ ಬರುವುದು ಹಲವಾರು ಆಸನಗಳನ್ನು ಒಳಗೊಂಡ ಅಷ್ಟಾಂಗಯೋಗ", ಇದು ಇಂದು ನಮ್ಮ ಸುತ್ತಲೂ ಕಾಣಬರುತ್ತಿದೆ. ಈ ವಿಧದ ಯೋಗ ಒಂದೇ ನಮ್ಮ ಕಣ್ಣಿಗೆ ಕಾಣಿಸುತ್ತಿರುವುದು, ನಮ್ಮ ಅಲ್ಪಮತಿಗೆ ಗೋಚರ ಆಗಿರುವುದು, ಅಷ್ಟಾಂಗ ಯೋಗವಲ್ಲದೆ ಹಲವಾರು ರೀತಿಯ ಯೋಗವೂ ಇದೆ. ಗೀತಾಚಾರ್ಯನ ಭಗವದ್ಗೀತೆಯಲ್ಲಿ ಇದನ್ನು ಕಾಣಬಹುದು. ಸಾಂಖ್ಯಯೋಗ, ಕರ್ಮಯೋಗ, ಆತ್ಮ ಸಂಯಮ ಯೋಗ, ಅಕ್ಷರ ಬ್ರಹ್ಮಯೋಗ ಹೀಗೇ ಅಷ್ಟಾದಶಾಧ್ಯಾಯದಲ್ಲಿ ನಮ್ಮ ಇಹಪರದ ಸಾಧನೆ, ಮೋಕ್ಷ, ಭಗವಂತನಲ್ಲಿ ಅನುಸಂಧಾನದ ಪರಾಕಾಷ್ಟೆ ಅನುಭವಿಸಲು ಶ್ರೀಕೃಷ್ಣ ಪರಮಾತ್ಮ ಹಲವಾರು ರೀತಿಯಲ್ಲಿ ನಮ್ಮ ಜೀವನವನ್ನು, ಬರಿ ಜೀವನವಲ್ಲ ಅಮೂಲ್ಯವಾದ ಜೀವನವನ್ನು ರೂಪಿಸಿಕೊಳ್ಳಲು ಬೋಧಿಸಿದ್ದಾನೆ.

ಇತ್ತೀಚೆಗೆ ಪ್ರತಿವರ್ಷ ಜೂನ್ 21 ರಂದು "ಅಂತರಾಷ್ಟ್ರೀಯ ಯೋಗ ದಿನ " ಎಂದು ಘೋಷಿಸಿ ವಿಶ್ವಜನತೆ ಯೋಗವನ್ನು ಅರಿಯು ವಂತೆ ಮಾಡಿ, ಅದನ್ನು ಅರಿತು ಯೋಗಾಭ್ಯಾಸ ಮಾಡುವಂತಾಗಿದೆ. ವಿದೇಶಿಯರೂ ಯೋಗಕ್ಕೆ ಮನಸೋತು, ಅದರ ಆರೋಗ್ಯ ಲಾಭ ವನ್ನು ಅರಿತು ಯೋಗಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಅದಕ್ಕೆ ಕಾರಣ ನಮ್ಮ ಯೋಗ ಭೂಮಿ ಭಾರತ ಅಷ್ಟಾಂಗ ಯೋಗದ ಬಗ್ಗೆ ಅಧ್ಯಯನ ಮಾಡುತ್ತಿದ್ದಾಗ ದೊರೆತದ್ದೇ "ಮುದ್ರಾಯೋಗ" ದ ಅಮೂಲ್ಯವಾದ ಮಾಹಿತಿ.



# ಪಂಚ ಪ್ರಯಾಗಗಳು

– ಹನುಮಂತ. ಮ. ದೇಶಕುಲಕರ್ಣಿ
97317 41397

ಪ್ರಯಾಗ ಎಂದರೆ ಎರಡು ನದಿಗಳು ಸೇರುವ ಪವಿತ್ರ ಸ್ಥಳವೆನ್ನುತ್ತಾರೆ. ಸಂಗಮವೆಂತಲೂ ಕರೆಯಬಹುದು.

**ನಂದ್ ಪ್ರಯಾಗ್:** 1,358 ಮೀಟರ್ ಎತ್ತರದಲ್ಲಿರುವ ನಂದ್ ಪ್ರಯಾಗ್ ಅಲಕನಂದಾ ಮತ್ತು ಮಂದಾಕಿನಿ ನದಿಗಳ ಸಂಗಮವೇ ನಂದ್ ಪ್ರಯಾಗ್. ಈ ನದಿಗಳು ನಂದಾದೇವಿ ಹಿಮಶಿಖರದಿಂದ ಹರಿಯುತ್ತವೆ. ರಾಜ ನಂದನ ಹೆಸರನ್ನು ಹೊತ್ತಿರುವ ನಂದ್ ಪ್ರಯಾಗ್ ಕರ್ಣ ಪ್ರಯಾಗದಿಂದ 20 ಕಿ.ಮೀ. ದೂರದಲ್ಲಿದೆ. ಪ್ರಸಿದ್ಧ ಐದು ಪ್ರಯಾಗಗಳಲ್ಲಿ ಒಂದು ಈ ನಂದ್ ಪ್ರಯಾಗ್. ಹಿಂದೂ ಸಂಸ್ಕೃತಿಯ ಪ್ರಕಾರ, ಪ್ರಾರ್ಥನೆಯಾ ಸಮಯದ ಪುಣ್ಯ ಸ್ನಾನವನ್ನು ಮಾಡುವ ಮತ್ತು ಅಗಲಿದ ಪ್ರಯಾಗ್ ಎಂದು ಕರೆಯುತ್ತಾರೆ.

ಪುರಾಣಗಳ ಪ್ರಕಾರ ರಾಜನಂದ ವಿಷ್ಣುವು ಅವನ ಮಗನಾಗಿ ಹುಟ್ಟುವನೆಂದು ವರವನ್ನು ಪಡೆದಿದ್ದನಂತೆ. ಅದೇ ರೀತಿಯ ವರವನ್ನು ದೇವಕಿಯೂ ಪಡೆದಿದ್ದಳಂತೆ. ಮಥುರೆಯ ರಾಜನಾದ ಕ್ರೂರಿ ಕಂಸನ ಸಹೋದರಿ ದೇವಕಿ. ಆಕೆಗೆ ಹುಟ್ಟುವ ಮಗನಿಂದ ಅವನ ವಧೆಯಾಗುತ್ತದೆ ಎಂಬ ಭವಿಷ್ಯವಾಣಿಯ ಕಾರಣ, ಕ್ರೂರನಾದ ಕಂಸ ಅವಳನ್ನು ಅವಳ ಗಂಡನ ಸಹಿತ ಸೆರೆಮನೆಯಲ್ಲಿಟ್ಟಿದ್ದನಂತೆ. ಈ ಸಮಸ್ಯೆಯ ಪರಿಹಾರವೆಂಬಂತೆ ದೇವತೆಗಳು ಶ್ರೀ ಮಹಾವಿಷ್ಣುವು ದೇವಕಿಯ ಗರ್ಭದಲ್ಲಿ ಜನಿಸಿದ ಕೃಷ್ಣ. ನಂದ ಮತ್ತು ಯಶೋದೆಯರ ಸಾಕುಮಗನಾಗಿ ಬೆಳೆಯುವಂತಹ ಯೋಜನೆಯನ್ನು ಮಾಡಿದರು.

ದೇವ್ ಪ್ರಯಾಗ್‌ದಲ್ಲಿ ಕೃಷ್ಣನ ಮೂರ್ತಿಯ ಗೋಪಾಲ ದೇವಾಲಯವಿದೆ. ಪುರಾಣಗಳ ಪ್ರಕಾರ ಕಣ್ವ ಮಹರ್ಷಿಯು ಈ ಸ್ಥಳದಲ್ಲಿ ತಪಸ್ಸನ್ನು ಮಾಡಿದನಂತೆ ಮತ್ತು ಇಲ್ಲಿಯೇ ರಾಜ ದುಷ್ಯಂತ ಮತ್ತು ಶಕುಂತಲೆಯರ ವಿವಾಹವೂ ನಂದ್ ಪ್ರಯಾಗ್‌ದಲ್ಲಿ ನಡೆಯಿತಂತೆ. ನಂದ್ ಪ್ರಯಾಗ್ ಯದುವಂಶದ ರಾಜರ ರಾಜಧಾನಿಯಾಗಿತ್ತು ಎಂದು ನಂಬಿಕೆಯಿದೆ, ಮತ್ತೊಂದು ದಂತಕತೆಯ ಪ್ರಕಾರ ರಾಜಾನಂದನು ಇಲ್ಲಿ ಒಂದು ಬಂಡೆಯ ಮೇಲೆ ಒಂದು ಮಹಾಯಜ್ಞವನ್ನು ಮಾಡಿದನಂತೆ. ಆ ಬಂಡೆಯೇ ಇಲ್ಲಿನ ನಂದಪ್ರಯಾಗ್ ದೇವಾಲಯಕ್ಕೆ ಅಡಿಪಾಯವಾಯಿತಂತೆ. ಈ ನಂದ್ ಪ್ರಯಾಗ್‌ನ ನದೀ ಸಂಗಮದಲ್ಲಿ ಮುಳುಗಿ ಸ್ನಾನಮಾಡಿದರೆ ಸರ್ವ ಪಾಪಗಳೂ ನಾಶವಾಗುತ್ತದೆಂದು ಭಕ್ತರು ನಂಬಿಕೆಯಿಟ್ಟಿದ್ದಾರೆ.

**ಕರ್ಣ ಪ್ರಯಾಗ್ :** ಅಲಕನಂದಾ ಮತ್ತು ಪಿಂಡರ್ ನದಿಯ ಸಂಗಮದ ಸ್ಥಳದಲ್ಲಿ ಇರುವುದೇ ಕರ್ಣ ಪ್ರಯಾಗ್. ಇದು 'ಪಂಚ ಪ್ರಯಾಗ' ನಲ್ಲಿ ಮೂರನೆಯ ಪ್ರಯಾಗ. 4760 ಅಡಿ ಎತ್ತರದಲ್ಲಿ ಇರುವ ಕರ್ಣ ಪ್ರಯಾಗ್‌ವು ನಂದಾದೇವಿ, ದ್ರೋಣಗಿರಿ, ನಾರದ್ ಗುಂಟಿ, ಮೈಕೋಟಲಿ, ತ್ರಿಶೂಲ್ ಮತ್ತು ಮೃಗತುನಿ ಶೃಂಗಗಳಿಂದ ಸುತ್ತುವರಿಯಲ್ಪಟ್ಟಿದೆ. ಭಾರತದ ಅತಿದೊಡ್ಡ ಮತ್ತು ಪವಿತ್ರ ನದಿಯಾದ ಗಂಗಾ ನದಿಯು ಪ್ರಸ್ಥಭೂಮಿ ಯೆಡೆಗೆ ತನ್ನ ಪ್ರಯಾಣವನ್ನು "ಕರ್ಣ ಪ್ರಯಾಗ್" ದಿಂದಲೇ ಆರಂಭಿಸುತ್ತದೆ. ಎರಡು ನದಿಗಳ ಸಂಗಮದ ಸ್ಥಳದಲ್ಲಿ ದೇವಿ 'ಉಮಾದೇವಿ ಅಥವಾ ಪಾರ್ವತಿ' ಒಂದು ದೇವಾಲಯವಿದೆ.

ಸ್ವಾಮಿ ವಿವೇಕಾನಂದ, ತುರಿಯಾನಂದ ಮತ್ತು ಆಖಿರಾನಂದ ರೊಡಗೂಡಿ ಈ ಸ್ಥಳದಲ್ಲಿ ಹದಿನೆಂಟು ದಿನಗಳ ಕಾಲ ಈ ಸ್ಥಳದಲ್ಲಿ ಧ್ಯಾನಕ್ಕೆ ಕುಳಿತಿದ್ದರಂತೆ. ಮಹಾಭಾರತದ ಮಹಾನ್‌ವೀರ ತನ್ನ ತಪಸ್ಸಿನಿಂದ ಸೂರ್ಯನಿಂದ ವರಗಳನ್ನು ಪಡೆದ 'ಕರ್ಣ' ನಿಂದ ಈ ಸ್ಥಳಕ್ಕೆ 'ಕರ್ಣ ಪ್ರಯಾಗ್' ಎಂದು ಹೆಸರು ಬಂದಿದೆ. ಸೂರ್ಯದೇವನು ಕರ್ಣನಿಗೆ. ಅವನನ್ನು ರಣರಂಗದಲ್ಲಿ ಅಪ್ರತಿಮ ಶೂರನಾಗಿಸಿದ ಮತ್ತು ಅಭೇದ್ಯವಾದ ಕವಚ ಕುಂಡಲಗಳನ್ನು ದಯಪಾಲಿಸಿದನಂತೆ.

ಮತ್ತೊಂದು ದಂತಕತೆಯ ಪ್ರಕಾರ ಶ್ರೀಕೃಷ್ಣನು ಮಹಾಭಾರತದ ಯುದ್ಧದಲ್ಲಿ ಮರಣಹೊಂದಿದ ಕರ್ಣನ ಅಂತ್ಯ ಸಂಸ್ಕಾರವನ್ನು, ಈ "ಕರ್ಣ ಪ್ರಯಾಗ್"ದಲ್ಲಿ ಮಾಡಿದನಂತೆ. ಮಹಾಭಾರತದ ಯುದ್ಧದಲ್ಲಿ ತನ್ನ ರಥ ಭೂಮಿಯಲ್ಲಿ ಕುಸಿದು ಹೋಗಿ ನಿಶಸ್ತ್ರನಾದ ಕರ್ಣನ ಮೇಲೆ ಅಂಜಲಿಕಾ ಅಸ್ತ್ರವನ್ನು ಪ್ರಯೋಗ ಮಾಡಿದರೂ ಕರ್ಣ ಗಾಯಗೊಂಡನೆ ಹೊರತು

ಮರಣ ಹೊಂದಲಿಲ್ಲ. ಅವನು ಜೀವಮಾನದುದ್ದಕ್ಕೂ ಮಾಡಿದ ಅಸಂಖ್ಯಾತ ದಾನ - ಧರ್ಮದ ಕೆಲಸಗಳ ಕಾರಣ ಅವನು ಆರ್ಜಿಸಿದ ಪುಣ್ಯದ ಕಾರಣ ಧರ್ಮವನ್ನು ಕಾಯುವ ದೇವತೆಯಾದ ಧರ್ಮ ದೇವತೆಯು ಅವನನ್ನು ಕಾಯುತ್ತಿದ್ದಾಳೆ, ಎಂದು ಶ್ರೀ ಕೃಷ್ಣ ಮನಗಂಡ. ಧರ್ಮವೆಲ್ಲಿದ್ದರೆ ಅಲ್ಲಿ ಜಯವಿರುತ್ತದೆ ಮತ್ತು ಇಲ್ಲಿ ಧರ್ಮವು ಕರ್ಣನ ಪಕ್ಷದಲ್ಲಿತ್ತು. ಹಾಗಾಗಿ ಕೃಷ್ಣ, ಬ್ರಾಹ್ಮಣನ ವೇಷದಲ್ಲಿ ಕರ್ಣನ ಬಳಿ ಬಂದು ಅವನು ಆರ್ಜಿಸಿದ ಪುಣ್ಯವನ್ನು ದಾನವಾಗಿ ಬೇಡು ತ್ತಾನೆ. ಕರ್ಣ ತಾನು ಆರ್ಜಿಸಿದ ಪುಣ್ಯವನ್ನು ರಕ್ತದ ರೂಪದಲ್ಲಿ ಬ್ರಾಹ್ಮಣನ ವೇಷದ ಶ್ರೀ ಕೃಷ್ಣನಿಗೆ ದಾನ ಮಾಡುತ್ತಾನೆ. ಕರ್ಣ ತನ್ನ ಪುಣ್ಯವನ್ನು ದಾನ ಮಾಡಿದ ತಕ್ಷಣವೇ ಕೃಷ್ಣ ಅವನಿಗೆ ವಿಶ್ವ ರೂಪವನ್ನು ತೋರುತ್ತಾನೆ. ಆಗ ಧರ್ಮದೇವತೆ ಅವನ ಪಕ್ಷವನ್ನು ತೊರೆದು ಹೋಗುತ್ತಾಳೆ. ಧರ್ಮವಿಹೀನವಾದ ಕರ್ಣನು ಶ್ರೀಕೃಷ್ಣನನ್ನು ತನ್ನನ್ನು ಯಾರೂ ಮೆಟ್ಟದ ಭೂಮಿಯಲ್ಲಿ ಅಂತ್ಯಸಂಸ್ಕಾರ ಮಾಡು ಎಂದು ಬೇಡುತ್ತಾನೆ. ನಂತರ ಅರ್ಜುನನಿಂದ ಹತನಾದ ಕರ್ಣನನ್ನು ಶ್ರೀ ಕೃಷ್ಣ "ಕರ್ಣಪ್ರಯಾಗ್" ದಲ್ಲಿ ಅಂತ್ಯ ಸಂಸ್ಕಾರ ಮಾಡುತ್ತಾನೆ.

**ರುದ್ರಪ್ರಯಾಗ:** ಅಲಕನಂದಾ ನದಿಯಲ್ಲಿ ಆಗುವ ಪಂಚ ಪ್ರಯಾಗ್ ಎಂದರೆ ಸಂಗಮದಲ್ಲಿ ಅಲಕನಂದಾ ಮತ್ತು ಮಂದಾಕಿನಿ ನದಿಗಳು ಸಂಗಮವಾಗುತ್ತವೆ. ಕೇದಾರನಾಥ ಮತ್ತು ಬದರೀನಾಥಕ್ಕೆ ಬರುವ ಯಾತ್ರಿಗಳು ತಪ್ಪದೆ ಈ ರುದ್ರ ಪ್ರಯಾಗದ ಸಂಗಮದಲ್ಲಿ ಸ್ನಾನ ಮಾಡಬೇಕೆಂಬ ನಂಬಿಕೆಯಿದೆ. ಈ ರೀತಿಯ ಸ್ನಾನ ಭಕ್ತರ ಜೀವನದ ಎಲ್ಲ ತೊಡಕು ಮತ್ತು ತೊಂದರೆಗಳನ್ನು ನಿವಾರಿಸುವು ದೆಂಬ ದೃಢ ನಂಬಿಕೆಯುಂಟು. ರುದ್ರನ (ಶಿವನ) ಹೆಸರನ್ನೇ ಪಡೆ ದಿರುವ ಈ ರುದ್ರ ಪ್ರಯಾಗ್‌ದಲ್ಲಿ ಒಂದು ಶಿವಾಲಯವಿದೆ. ದೇವರ್ಷಿಯಾದ ನಾರದರಿಗೆ ಸಂಗೀತ ಕಲೆಯನ್ನು ವರವಾಗಿ ನೀಡಲು ಪರಮಶಿವನು ಇಲ್ಲಿ ರುದ್ರ ರೂಪದಲ್ಲಿ ಕಾಣಿಸಿಕೊಂಡನು ಎನ್ನುವ ಪ್ರತೀತಿಯಿದೆ. ನಾರದರಿಗೆ ಇಲ್ಲಿ ಸಂಗೀತದ ಮೇಲೆ ಸಂಪೂರ್ಣ ಸಾರ್ವಭೌಮತ್ವವನ್ನು ಶಿವ ನೀಡಿದ. ಇಲ್ಲಿರುವ ನಾರದ ಶಿಲಾ ಎನ್ನುವ ಕಲ್ಲು ಬಂಡೆಯ ಮೇಲೆ ದೇವರ್ಷಿನಾರದರು ತಪವನ್ನು ಮಾಡಿದರೆಂದು ನಂಬಿಕೆಯಿದೆ.

ಈ ಒಂದು ದೇವಾಲಯದ ಹೊರತು ಇಲ್ಲಿ ಅನ್ಯ ದೇವಾಲ ಯಗಳೂ ಇವೆ. ಶಿವನ ಪತ್ನಿಯ ಹೆಸರಿನಲ್ಲಿ ಚಾಮುಂಡೀ ದೇವಿಯ ದೇವಾಲಯ, ಗವಿಯಲ್ಲಿರುವ ಶಿವನಿಗೆ ಸಮರ್ಪಿತವಾದ ಕೋಟೇ ಶ್ವರ್ ಕೋಟಿ ದೇವಾಲಯ, ಮತ್ತು ತುಂಗೇಶ್ವರ ಮಹಾ ದೇವಜೀ ದೇವಾಲಯವು ಹಲವಾರು ದೇವಾಲಯಗಳಲ್ಲಿ ಕೆಲವು. ಪಾಂಡ ವರು ಈ ತುಂಗೇಶ್ವರ ದೇವಾಲಯದಲ್ಲಿ ತಪಸ್ಸು ಮಾಡಿದರೆಂದು ದಂತ ಕತೆಯಿದೆ. ಈ ದೇವಾಲಯದ ಗೋಡೆಗಳಿಗೆ ಟೆರ್ರಾ ಕೋಟಾ ಹೆಂಚುಗಳಿದ್ದು ಶಿವ ಮತ್ತು ಪಾರ್ವತಿಯರ ಕೆತ್ತನೆಗಳಿವೆ.

ಚಂದ್ರ ಶಿಲಾಶಿಖರದಲ್ಲಿರುವ ರುದ್ರಪ್ರಯಾಗ ಜಿಲ್ಲೆಯಲ್ಲಿ ಇರುವ ಪಂಚಕೇದಾರ್‌ಗಳಲ್ಲಿ ಪ್ರಸಿದ್ಧ ತುಂಗನಾಥ್ ದೇವಾಲಯವೂ ಒಂದು. ಶಿವನ ದೇಹವು ಭಿನ್ನ ಭಿನ್ನ ಕಡೆಗಳಲ್ಲಿ ಕಂಡಾಗ, ಶಿವನ ಕೈಗಳು ಇಲ್ಲಿ ಕಂಡವೆಂದು ದಂತಕತೆಯಿದೆ. ಈ ದೇವಾಲಯಕ್ಕೆ ಹದಿನಾರು ಬಾಗಿಲುಗಳಿದ್ದು ಇಲ್ಲಿ ಆದಿಶಂಕರರ 2.5 ಎತ್ತರದ ಒಂದು ವಿಗ್ರಹವು ಮತ್ತು ಗರ್ಭಗುಡಿಯಲ್ಲಿ ಶಿವಲಿಂಗವಿದೆ.

**ವಿಷ್ಣುಪ್ರಯಾಗ:** ಉತ್ತರಾಖಂಡ ರಾಜ್ಯದ ಹಿಮಾಲಯದ ಗರವಾಲ್ ಪ್ರದೇಶದಲ್ಲಿ ಐದು ನದಿಗಳ ಸಂಗಮದ ಸ್ಥಲವನ್ನು ಪಂಚಪ್ರಯಾಗ್ ಎಂದು ಕರೆಯುತ್ತಾರೆ. ಅಲಕನಂದಾ ಮತ್ತು ಧೌಲಿ ಗಂಗಾ ನದಿಗಳ ಸಂಗಮ ಸ್ಥಳವಾದ ವಿಷ್ಣು ಪ್ರಯಾಗ್ ಅವುಗಳಲ್ಲಿ ಮೊದಲನೆಯದು. ಕಡಿದಾದ ಮತ್ತು ಅಂಕುಡೊಂ ಕಾದ ದಾರಿಗಳಲ್ಲಿ ನಡೆದು ವಿಷ್ಣು ಪ್ರಯಾಗವನ್ನು ತಲುಪಬಹುದು, ಆದರೆ, ಅತಿ ರಭಸದ ಹರಿವಿನ ನದಿಯ ತೀರಗಳಲ್ಲಿ ಸ್ನಾನಮಾಡುವುದು ಬಹಳ ಕಠಿಣವಾದ ಕೆಲಸ. ಇಲ್ಲಿ ವಿಷ್ಣುವಿನ ಪುರಾತನ ಮಂದಿರವೊಂದಿದೆ. ಅಷ್ಟಭುಜಾಕಾರದ ಈ ಮಂದಿರವನ್ನು 1889 ರಲ್ಲಿ ಇಂದೋರಿನ ರಾಣಿ ಅಹಲ್ಯಾಭಾಯಿಯವರು ನಿರ್ಮಿ ಸಿದರು. ಮೊದಲಿಗೆ ಈ ದೇವಾಲಯವನ್ನು ಒಂದು ಶಿವಲಿಂಗವನ್ನು ಪ್ರತಿಷ್ಠಾಪಿ ಸಲು ಯೋಜಿಸಲಾಗಿದ್ದರೂ ಈಗ ಆ ದೇವಾಲಯವು ಜಗದ್ರಕ್ಷಕನಾದ ವಿಷ್ಣು ವಿನ ದೇವಾಲಯವಾಗಿದೆ. ದೇವಾಲಯದ ಮೆಟ್ಟಿಲುಗಳನ್ನು ಹತ್ತಿ ಮೇಲೇರಿದರೆ ವಿಷ್ಣು ಕುಂಡವನ್ನು ತಲುಪಬಹುದು.

ಪುರಾಣಗಳ ಪ್ರಕಾರ ಸಗರ ಚಕ್ರವರ್ತಿಯ 60,000 ಮಕ್ಕಳ ಮೃತ್ತಿಕೆ ಗಳನ್ನು ಪವಿತ್ರಗೊಳಿಸುವ ಸಲುವಾಗಿ, ದೇವಲೋಕದಿಂದ ಗಂಗೆಯನ್ನು ಭೂಮಿಗೆ ತರಲು ಅವರ ವಂಶಕ್ಕೆ ಸೇರಿದ ರಾಜಾ ಭಗೀರಥನು ತೀವ್ರತಮ ತಪಸ್ಸನ್ನು ಮಾಡಿದ. ಗಂಗೆಯು ಭೂಮಿಗೆ ಬರಲು ಒಪ್ಪಿದಳಾದರೂ ಆಕೆಯ ಹರಿವಿನ ರಭಸದಿಂದ ಭೂಮಿಗೆ ಉಂಟಾಗುವ ನಷ್ಟದ ಬಗ್ಗೆ ಚಿಂತೆಯಿತ್ತು. ಭಗೀರಥ ಶಿವನನ್ನು ಕುರಿತು ತಪಸ್ಸನ್ನು ಮಾಡಿ ಪ್ರಾರ್ಥಿಸಿದಾಗ, ಶಿವನು ತನ್ನ ಜಟೆಯಿಂದ ಗಂಗೆಯನ್ನು ಹರಿಬಿಟ್ಟು ಆಕೆಯ ಹರಿವಿನ ರಭಸವನ್ನು ಕಡಿಮೆಗೊಳಿಸಿದ. ನಂತರ ಗಂಗೆಯು ಏಳು ಹೊಳೆಗಳಾಗಿ ವಿಭಾಗಗೊಂಡು,ಹ್ಲಾದಿನಿ, ನಳಿನಿ, ಪಾವನಿ ಎಂಬ ಹೆಸರಿನಿಂದ ಪೂರ್ವ ದಿಕ್ಕಿಗೂ, ಸುಭಿಕ್ಷು,ಸೀತಾ, ಸಿಂಧು ಎಂಬ ಹೆಸರಿನಿಂದ ಪಶ್ಚಿಮ ದಿಕ್ಕಿಗೂ ಹರಿದಳು. ಗಂಗೆಯ ಏಳನೆಯ ಹೊಳೆಯು ಭಗೀರಥನ ರಥ ವನ್ನು ಹಿಂಬಾಲಿಸುತ್ತಾ ಅವನ ಪೂರ್ವಜರ ಮೃತ್ತಿಕೆಗಳಿದ್ದ ಸ್ಥಳವನ್ನು ಸೇರಿ ಅವರ ಸ್ವರ್ಗಾ ರೋಹಣಕ್ಕೆ ಅನುವು ಮಾಡಿಕೊಟ್ಟಿತು. ಮಕರ ಸಂಕ್ರಾಂತಿ, ಉತ್ತರಾ ಯಣ, ಬಸಂತ್‌ಪಂಚಮಿ ಮತ್ತು ರಾಮನವಮಿ ಹಬ್ಬಗಳ ಸಮಯದಲ್ಲಿ ಈ ನದೀ ಸಂಗಮಗಳಲ್ಲಿ ಮಿಂದು ಪುನೀತರಾಗಲು, ಸಾವಿರಾರು ಭಕ್ತರು ಮತ್ತು ಯಾತ್ರಿಗಳು ಇಲ್ಲಿಗೆ ಭೇಟಿ ನೀಡುತ್ತಾರೆ.

**ದೇವಪ್ರಯಾಗ:** ಗೋಮುಖದಿಂದ ಹರಿಯುವ ಭಾಗೀರಥಿ ನದಿ ಮತ್ತು ಬದರೀನಾಥಕ್ಕೆ ಉತ್ತರಕ್ಕಿರುವ ಹಿಮಾಚ್ಛಾದಿತ ಅಲಕಾಪುರಿಯಿಂದ ಹರಿಯುವ ಅಲಕನಂದಾ ನದಿಯೊಡನೆ ಸಂಗಮಗೊಂಡು ಗಂಗಾ ನದಿಯಾಗುವ ಪುಣ್ಯ ಕ್ಷೇತ್ರ ವನ್ನೇ ದೇವಪ್ರಯೋಗ ಎಂದು ಕರೆಯುತ್ತಾರೆ. ಗರ್‌ವಾಲ್ ಪ್ರದೇಶವು ಪಂಚ ಪ್ರಯಾಗಕ್ಕೆ ಪ್ರಸಿದ್ಧವಾಗಿದ್ದು, ಅಂತಹ ಸಂಗಮಗಳಲ್ಲಿ ಮೊದಲನೆಯದು ಮತ್ತು ಬಹು ಮುಖ್ಯವಾದದ್ದು ದೇವಪ್ರಯಾಗ.

ದೇವಪ್ರಯಾಗವು ಮೂರು ಕೋಡುಗಳಿಂದ ಸುತ್ತುವರಿಯಲ್ಪಟ್ಟಿದೆ. ಅವು ಗಳೆಂದರೆ ಗಿದ್ದಾಂಚಲ್ ಪರ್ವತ್, ದಶ್ರತಾಂಚಲ್ ಪರ್ವತ್ ಮತ್ತು ನರ

ಸಿಂಹಾಂಚಲ್‌ಪರ್ವತ್. ಇವುಗಳಲ್ಲಿ ಗಿದಾಂಚಲ್ ಪರ್ವತ್, ಶ್ರೀರಘುನಾಥ್ ದೇವಾಲಯಕ್ಕಿಂತ ಎತ್ತರದಲ್ಲಿದೆ. ನರಸಿಂಹಾಂಚಲ್ ಪರ್ವತ್, ಗಿದ್ದಾಂಚಲ್ ಪರ್ವತ್ ಎದುರಿನಲ್ಲಿದೆ ಮತ್ತು ದಶ್ರತಾಂಚಲ್ ಪರ್ವತ ನದೀ ಸಂಗಮಕ್ಕಿಂತ ಮೇಲಿದೆ.ಇಲ್ಲಿ ನಾವು ಭಾಗೀರಥಿ ಮತ್ತು ಅಲಕನಂದಾ ನದಿಗಳು ಸಂಗಮಗೊಳ್ಳುವುದನ್ನು ಮತ್ತು ಅದು ಗಂಗಾ ನದಿಯಾಗಿ ಪರ್ವತ ಶ್ರೇಣಿಗಳಲ್ಲಿನ ಬೆಟ್ಟಗುಡ್ಡಗಳಲ್ಲಿನ ಕೊರಕಲ್ಲುಗಳಲ್ಲಿ ಹರಿಯುವುದನ್ನು ನೋಡಬಹುದು. ಸಂಸ್ಕೃತದಲ್ಲಿ ದೇವಪ್ರಯಾಗ ಎಂದರೆ ದೈವೀ ಸಂಗಮ ಎಂದು ಅರ್ಥ. ಕಪಿಲ ಮಹರ್ಷಿಯ ಆಶ್ರಮದಲ್ಲಿ ಮರಣ ಹೊಂದಿದ ಸಗರ ಚಕ್ರವರ್ತಿಯ 60,000 ಮಕ್ಕಳ ಮೃತ್ತಿಕೆಗಳ ಮೇಲೆ ಹರಿದು ಅವರನ್ನು ಮತ್ತೆ ಜೀವಂತಗೊಳಿಸಲು ದಿವಿಯಿಂದ ಭುವಿಗೆ ಗಂಗೆಯನ್ನು ತರಲು ಭಗೀರಥ ಮುನಿಯು ತಪಸ್ಸನ್ನು ಮಾಡಿದನೆಂದು ಪುರಾಣಗಳು ಹೇಳುತ್ತವೆ. ಪುರಾಣಗಳ ಪ್ರಕಾರ ಸರಸ್ವತಿನದಿಯು ಬದರೀನಾಥದ ಬಳಿಯ ಮನಾ ಎಂಬ ಗ್ರಾಮದ ಬಳಿ ಉದ್ಭವಿಸಿ ದೇವಪ್ರಯಾಗದ ಶ್ರೀರಘುನಾಥ್ ಜೀ ದೇವಾಲಯದಲ್ಲಿ ಸ್ವಾಮಿಯ ಪಾದದಿಂದ ಹೊರ ಬಂದು ಹರಿಯುತ್ತದೆ.

ಶ್ರೀರಾಮನ ಪಾದಗಳ ಗುರುತುಗಳು ರಾಮಕುಂಡದಲ್ಲಿವೆಯೆಂದೂ ಸಹ ನಂಬಿಕೆಯಿದೆ. ಮಹರ್ಷಿ ದೇವಶರ್ಮನು ಈ ಸ್ಥಳದಲ್ಲಿ ತನ್ನ ತಪೋಜೀವನವನ್ನು ನಡೆಸಿದನಾದ್ದರಿಂದ ಈ ಸ್ಥಳಕ್ಕೆ ದೇವಪ್ರಯಾಗ ಎಂಬ ಹೆಸರು ಬಂದಿತೆಂಬ ನಂಬಿಕೆಯೂ ಇದೆ. ಈ ದೇವಪ್ರಯಾಗದಲ್ಲಿ ಶಿವನ ಪೂಜೆಯಾಗುತ್ತದೆ. ಇಲ್ಲಿ ಶಿವನನ್ನು ತಾಂಡವೇಶ್ವರ ಮತ್ತು ಧನೇಶ್ವರ ಮಹದೇವ್ ಎಂದೂ ಕರೆಯಲಾಗುತ್ತದೆ. ಭಾಗೀರಥಿ, ಅಲಕನಂದಾ ನದಿಗಳು ಸಂಗಮವಾಗುವ ಈ ಸ್ಥಳದಲ್ಲಿ ತಾಂಡವೇಶ್ವರ ಮಹಾದೇವನ ದೇವಾಲಯವು ಇದೆ. ಭಕ್ತರು ಇಲ್ಲಿನ ಗಂಗಾಜಲವನ್ನು ಶಿವಲಿಂಗಕ್ಕೆ ಅರ್ಪಿಸುತ್ತಾರೆ. ಧಾನೇಶ್ವರ ಮಹಾದೇವವು ದೇವಪ್ರಯಾಗದಲ್ಲಿ ಬದರೀನಾಥ್‌ಗೆ ಹೋಗುವ ಹಾದಿಯಲ್ಲಿರುವ ಬಾಹ್ ಬಜಾರ್ ಎನ್ನುವ ಮಾರುಕಟ್ಟೆಯಲ್ಲಿ ಇದೆ.

ಶ್ರೀ ರಘುನಾಥ್ ಜೀ ದೇವಾಲಯವು ಎತ್ತರದ ಗುಡ್ಡದ ಮೇಲಿದೆ. ಅದು ಕಲ್ಲಿನಿಂದ ನಿರ್ಮಿತವಾಗಿದ್ದು ಕೋನಾಕಾರದಲ್ಲಿದೆ. ದೇವಪ್ರಯಾಗದ ಇತರೆ ದೇವಾಲಯಗಳೆಂದರೆ ಹತ್ತಿರದಲ್ಲೇ ಇರುವ ಪುಂಡಲ್ ಗ್ರಾಮದ ಬಳಿ ಇರುವ ಮಾತಾ ಭುವನೇಶ್ವರೀ ದೇವಾಲಯ, ದಂಡ ನಾಗರಾಜ ದೇವಾಲಯ ಮತ್ತು ಚಂದ್ರಬಂಡಿ ದೇವಾಲಯಗಳು. ಇಲ್ಲಿನ ಮನೆಗಳನ್ನೆಲ್ಲವನ್ನೂ ಬೆಟ್ಟ, ಗುಡ್ಡ, ಕೋಣಾಕಾರದ ಭೂಮಿ ಮುಂತಾದವುಗಳ ಮೇಲೆ ಕಲ್ಲು ಬಂಡೆಗಳಿಂದ ನಿರ್ಮಿಸಲಾಗಿದೆ.




ಜೂನ್ 21 ರ ವಿಶ್ವ ಸಂಗೀತ ದಿನದಂದು "ನಾದಮಯ ಈ ಲೋಕವೆಲ್ಲಾ" ಎಂಬ ಕವಿ ವಾಣಿಯಂತೆ ಎಲ್ಲೆಲ್ಲೂ ಸಂಗೀತವೇ.

"ಸಂಗೀತವೆಂದರೆ ಬರಿ ರಾಗ, ತಾಳ, ಮೇಳಗಳ ಸಂಗಮವಷ್ಟೇ ಅಲ್ಲ. ಅದೊಂದು ಜೀವನದ ರಾಗ. ಸಾರ್ಥಕ ಬದುಕಿನ ಭಾಗ. ಸಾಕು ಬೇಕುಗಳ ಪ್ರೇರಕ. ನಾನು ತಾನೆಂಬುದಕ್ಕೆ ಧ್ಯೋತಕ. ಸಂಗೀತ ವಿಲ್ಲದ ಪ್ರಪಂಚ ಕಲ್ಪನೆಗೂ ನಿಲುಕದ ಬಾದಕ. ಜೀವನವೆಂಬ ರಾಗಕ್ಕೆ ಸುಖ ಶಾಂತಿಯೆಂಬ ತಾಳಮೇಳಗಳನ್ನು ಸರಿದೂಗಿಸಿ ಸುಶ್ರಾವ್ಯವಾದ ಸಂಗೀತದ ರಸದೌತಣ ನೀಡುವ ಸಾಧಕ."

ಜೀವನದ ಪ್ರತಿ ಹೆಜ್ಜೆಯಲ್ಲೂ ಉತ್ಸಾಹ, ಹುಮ್ಮಸ್ಸನ್ನು ತುಂಬಿ, ಸಮಯವನ್ನು ಶೃಂಗಾರಮಯವಾಗಿಸಬಲ್ಲ ಶಕ್ತಿಯೇ ಸಂಗೀತ. ಬುದ್ಧಿವಂತ ಪ್ರಾಣಿ ಮನುಷ್ಯನು ಮಾತ್ರವಲ್ಲದೆ, ಪ್ರಾಣಿಪಕ್ಷಿಗಳು, ಗಿಡಮರಗಳು ಸಂಗೀತದ ಶಕ್ತಿಯನ್ನು ಬಳಸಿಕೊಳ್ಳುತ್ತವೆ ಎಂಬುದಕ್ಕೆ ಅನೇಕ ಉದಾಹರಣೆಗಳು ನಮ್ಮೊಂದಿಗಿವೆ. ಪ್ರಕೃತಿಯ ಕೂಸಾದ ಮನುಷ್ಯ ಮೊದಲಿಗೆ ಪ್ರಕೃತಿಯಲ್ಲಿನ ಬಗೆಬಗೆಯ ಸಂಗೀತದ ರಸ ದೌತಣವನ್ನು ಉಂಡು ಅದರ ಆಧಾರದಲ್ಲಿ ತನ್ನದೇ ರೀತಿಯ ಸಂಗೀತ ದೆಳೆಯನ್ನು ಹೆಣೆದುಕೊಂಡಿದ್ದಾನೆ.

1982 ರಲ್ಲಿ ಮೊದಲಿಗೆ "ಫೆಟ್ ಡೆ ಲಾ ಮ್ಯೂಸಿಕ್" ಎಂಬ ಸಂಗೀತದ ಹಬ್ಬವನ್ನು ಫ್ರಾನ್ಸ್‌ನಲ್ಲಿ ಪ್ರಾರಂಭಿಸಲಾಯಿತು. ಇದರ ಅರ್ಥ ಸಂಗೀತ ಹಬ್ಬ. ಕಲೆ ಹಾಗೂ ಸಂಸ್ಕೃತಿಯ ಮಾಜಿ ಸಚಿವನಾಗಿದ್ದ ಜಾಕ್‌ಲಾಂಗ್‌ರಿಂದ ಪ್ರಾರಂಭವಾಯಿತು.ಸಂಗೀತಗಾರರನ್ನು ಹುರಿದುಂಬಿಸುವ ಹಾಗೂ ಅಭಿನಂದಿಸುವ ಕಾರಣದಿಂದ ಪ್ರಾರಂಭವಾದ ಈ ಉತ್ಸವ ವಿವಿಧ ಉದ್ಯಾನವನಗಳು, ಸಂಗೀತ ಕಲಿಕಾ ಕೇಂದ್ರಗಳು, ಪ್ರಮುಖ ನಗರಗಳು ಸಂಗೀತ ಮಂದಿರಗಳಲ್ಲಿ ಈ ದಿನ ವಿಶೇಷ ಸಂಭ್ರಮದೊಂದಿಗೆ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ಹೀಗೆ ಪ್ರಾರಂಭವಾದ ಸಂಗೀತ ದಿನಾಚರಣೆ ಪ್ರಪಂಚದ ಅನೇಕ ದೇಶಗಳಿಗೂ ಹರಡಿತು.



# ತಿರುಪತಿಯ ಶಾಸನಗಳಲ್ಲಿ ವಿಜಯನಗರ ಕಾಲದ ಜಲತಂತ್ರಜ್ಞಾನ ಒಂದು ಸಮೀಕ್ಷೆ

– ಡಾ।। ಹರಿಹರ ಶ್ರೀನಿವಾಸರಾವ್
9110489871

ಬೇಸಾಯವೇ ಭಾರತದ ಬೆನ್ನೆಲುಬು ಎನ್ನುವುದನ್ನು ಅರಿತಿದ್ದ ವಿಜಯ ನಗರದ ಅರಸರು ಕೃಷಿಯ ವಿಕಾಸಕ್ಕೆ ಆದ್ಯತೆ ನೀಡಿದರು. ಈ ನಿಟ್ಟಿನಲ್ಲಿ ಅವರು ಕೈಗೊಂಡ ಎರಡು ಪ್ರಮುಖ ಕಾರ್ಯಗಳೆಂದರೆ ಮೊದಲನೆಯದಾಗಿ ಬಾವಿ, ಪುಷ್ಕರಣಿ, ಕೆರೆ, ಸರೋವರ, ಅಣೆಕಟ್ಟುಗಳನ್ನು ನಿರ್ಮಿಸಿ, ಸಾರ್ವಕಾಲಿಕ, ಸುಸ್ಥಿರ ನೀರಾವರಿ ಆಧಾರಿತ ಕೃಷಿಯನ್ನು ಪ್ರೋತ್ಸಾಹ ನೀಡಿದ್ದು. 2ನೆಯದಾಗಿ ಕಾಡುಗಳನ್ನು ಕಡಿದು, ಆ ಭೂಮಿಯನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಂಡಿದ್ದು. ಈ ದಿಸೆಯಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡಿ ಕರಗಳಲ್ಲಿಕಡಿತ ಸಮಾಜದ ತಳಮಟ್ಟದ ವ್ಯಕ್ತಿಗಳನ್ನು ಒಳಗೊಂಡಂತೆ ವಿಶೇಷ ಅಧಿಕಾರವನ್ನು ಚಲಾಯಿಸಲು ಸಾಧ್ಯವಾಗುವಂತೆ ಗ್ರಾಮ ಮಟ್ಟದಲ್ಲಿ ''ಗ್ರಾಮ ಸಂಸ್ಥೆ''ಗಳನ್ನು ವ್ಯವಸ್ಥೆಗೊಳಿಸಿದ್ದು. ಮಹಿಳೆಯರೂ ಒಳಗೊಂಡಂತೆ ಸಮಾಜದ ಎಲ್ಲ ವರ್ಗದವರನ್ನು ನೀರಾವರಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಗೌರವಸ್ಥಾನ ದೊರಕುವಂತೆ ಮಾಡಿ ಅವರ ನಿಸ್ವಾರ್ಥಸೇವೆಯನ್ನು ಗುರುತಿಸಿದುದು ಶ್ಲಾಘನೀಯವೆನಿಸುತ್ತದೆ.

'ತಿರ್ಯಗ್ಜಾತಿ'' ಅಂದರೆ ಮಾನವ, ಪ್ರಾಣಿ, ಪಕ್ಷಿ, ಜಂತುಗಳ ಬಾಯಾರಿಕೆ ನಿವಾರಿಸಲೆಂದು ತಮ್ಮ ಪೂರ್ವಿಕರ ಮುಕ್ತಿಗೋಸ್ಕರ, ರಾಜನ ಶ್ರೇಯಸ್ಸಿಗೋಸ್ಕರ ಕೆರೆ, ಕೊಳ ಇತ್ಯಾದಿ ಜಲಾಕರಗಳನ್ನು ನಿರ್ಮಿಸುವುದು ದೇವರಿಗೂ ಪ್ರೀತಿ ಎನ್ನುವ ಧಾರ್ಮಿಕ ನಂಬಿಕೆ ಹೆಚ್ಚು ಹೆಚ್ಚಾಗಿ ಜನರಲ್ಲಿ ಬೇರೂರುವಂತೆ ಮಾಡಿತು. ಹೀಗೆ ಸಮಾಜೋ-ಧಾರ್ಮಿಕ, ಸಾತ್ವಿಕ, ಸುಸ್ಥಿರ ಆರ್ಥಿಕ ಪ್ರಗತಿಯನ್ನು ಮೂಲಾಧಾರವಾಗಿಟ್ಟುಕೊಂಡು, ತಿರುಪತಿಯಂತಹ ಪುರಾತನ ಧಾರ್ಮಿಕ ಪರಂಪರೆಯ ಕ್ಷೇತ್ರದಲ್ಲಿ ವಿಶೇಷ ನೀತಿ, ರಿವಾಜುಗಳನ್ನು ಒಳಗೊಂಡಿರುವ ಜಲತಂತ್ರ ಜ್ಞಾನದ ರೀತಿಯನ್ನು ತಿರುಪತಿ ಶಾಸನಗಳು ಹೇಗೆ ದಾಖಲಿಸಿವೆ? ಎನ್ನುವ ಅಂಶಗಳನ್ನು ಒಳಗೊಂಡಿದೆ ಈ ಲೇಖನ.

## ಗ್ರಂಥ ಪರಂಪರೆಯಲ್ಲಿ ಜಲತಂತ್ರಜ್ಞಾನ

ನಮ್ಮದೇಶದ ಪುರಾತನ ಗ್ರಂಥಗಳಾದ ಋಗ್, ಯಜುರ್ವೇದ, ಅಥರ್ವವೇದಗಳಲ್ಲಿ ಜಲಾಕರಗಳನ್ನು ಹೆಸರಿಸುವ ಆವತ, ಕೂಪ, ಕುಲ್ಯ ಖನಿತ್ರಿಮ, ಎಂದರೆ ಭೂಮಿಯನ್ನು ಅಗೆದು ನೀರನ್ನು ಪಡೆಯುವ, 'ಸಾಸಾಸಿ (ಅಣೆಕಟ್ಟು ಅಥವಾ ಸರೋವರ), ಕೃತ್ರಿಮ ನದಿಯಾ ಎಂದರೆ ಮಾನವ ನಿರ್ಮಿತ ನದಿಗಳು ಇತ್ಯಾದಿ ಶಬ್ದಗಳು ಕಂಡು ಬರುತ್ತವೆ. ಕಶ್ಯಪ ಕೃಷಿ ಸೂಕ್ತವು ಭಾರತದಲ್ಲಿ ಕೃಷಿಗೆ ಸಂಬಂಧಿಸಿದ ಒಂದು ಅಪೂರ್ವ ಗ್ರಂಥವಾಗಿದೆ. ಮಹಾಭಾರತದಲ್ಲಿ ನಾರದನು ಯುಧಿಷ್ಠಿರನಿಗೆ ನೀಡಿದ ಉಪದೇಶದಲ್ಲಿ ರಾಜನಾದವನು ಕೃಷಿಗೆ ಕೇವಲ ಮಳೆಯ ನೀರನ್ನೇ ನಂಬಿಕೊಳ್ಳದೇ, ಸುಸ್ಥಿರ ಜಲೋಪಯೋಗಕ್ಕಾಗಿ ಕೆರೆ, ಕುಂಟೆ, ಸರೋವರಗಳನ್ನು ನಿರ್ಮಿಸಿ ಮಳೆಗಾಲದಲ್ಲಿ ಸಿಗುವ ನೀರನ್ನು ವರ್ಷದ ಇತರ ಸಮಯದಲ್ಲಿ ಬಳಸಬೇಕೆಂದು ತಿಳಿಸುತ್ತಾನೆ. ವಿಷ್ಣು ಧರ್ಮೋತ್ತರ, ದೇವಿ ಪುರಾಣಗಳಲಿ ನದಿವಾಹಾಸ್ ಎಂದರೆ ನೀರಾವರಿ ಕಾಲುವೆಗಳ ಬಗೆಗೆ ಉಲ್ಲೇಖವಿದೆ. ಪದ್ಮ ಪುರಾಣದಲ್ಲಿ, ಕೆರೆ, ತಟಾಕ ಗಳಿಗೆಂದೇ ಒಂದು ವಿಶೇಷ ಅಧ್ಯಾಯವಿದೆ. ಹೋಹಿನಿ ನದಿಗೆ ಅಡ್ಡಲಾಗಿ ಕಟ್ಟಿದ್ದ ಅಣೆಕಟ್ಟಿನ ನೀರಿಗಾಗಿ ಸಾಖಿಯಾ ಮತ್ತು ಕೊಲಿಯಾ ಜನಾಂಗಗಳಲ್ಲಿ ಉಂಟಾದ ಕಲಹವನ್ನು ಬುದ್ಧನ ಜಾತಕ ಕತೆಗಳಲ್ಲಿ ಒಂದಾದ ಕುನಾಲ ಜಾತಕ ಕಥೆಯಲ್ಲಿ ಬಣ್ಣಿಸಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ನಮ್ಮ ದೇಶದ ವಿವಿಧ ಭಾಗಗಳಲ್ಲಿ ಬೀಳುವ ಮಳೆ, ಅದನ್ನು ತರುವ ಮಳೆಯ ಮೋಡಗಳು ಎಷ್ಟು ರೀತಿಯವೂ ಹಾಗೂ ವಿವಿಧ ಜಾತಿಯ ಮೋಡಗಳಿಂದ ದೊರೆಯುವ ನೀರಿನ ಪ್ರಮಾಣವನ್ನೂ ದಾಖಲಿಸುತ್ತದೆ. ನೀರಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ಇಲಾಖೆ, ಮಳೆ ಅಳತೆಯನ್ನು ಅಧಿಕಾರಿಯೇ ಖುದ್ದಾಗಿ ನೋಡಿ ದಾಖಲಿಸಬೇಕೆಂಬ ನಿಯಮವನ್ನು ವಿಧಿಸುತ್ತದೆ. ನೀರಿನ ಬಗೆಗೆ ಸ್ವಯಂ ಸೇವಾಸಂಘಗಳು ತಮ್ಮದೇ ಆದ ವಿಧಾನದಲ್ಲಿ ನೀರನ್ನು ಪೂರೈಸುತ್ತಿದ್ದ ಉದಾಹರಣೆಗಳಿವೆ. ಇಂತಹ ಅನೇಕ ಅಮೂಲ್ಯ ಗ್ರಂಥಗಳ ಸಂಗ್ರಹ ಮೂಲ



ಸಂಸ್ಕೃತ ತೆಲುಗು, ತಮಿಳು, ಇಂಗ್ಲೀಷ್ ಇತ್ಯಾದಿ ಭಾಷೆಗಳಲ್ಲಿ ತಿರುಪತಿಯ ದೇವಸ್ಥಾನದ ಗ್ರಂಥಾಲಯದಲ್ಲಿ ಲಭ್ಯವಿದೆ.

### ಏರಿವಾರಿಯಮ್

ಹಳ್ಳಿಯ ಆಡಳಿತ ನಿರ್ವಹಣೆಗೆಂದು ಪ್ರಮುಖ ಗ್ರಾಮ ಸಭೆ ಮತ್ತು ಅದರ ಉಪಸಮಿತಿಗಳಿರುತ್ತಿದ್ದವು. ಇಂತಹ ಸಮಿತಿಗಳಲ್ಲಿ ನೀರಾವರಿಗೆಂದೇ ಇರುತ್ತಿದ್ದ ಸಮಿತಿಯ ಹೆಸರು "ಏರಿ ವಾರಿಯಮ್" ಆರು ಜನ ಪ್ರಮುಖ ಸದಸ್ಯರನ್ನು ಒಳಗೊಂಡ ಸಮಿತಿಯಾಗಿದ್ದು, ಅವರನ್ನು ಅದೃಷ್ಟದ ಆಯ್ಕೆ (ಲಾಟರಿ) ಯ ಮೂಲಕ ಆರಿಸಲಾಗುತ್ತಿತ್ತು. ಈ ಸಮಿತಿಯ ಕಾಲವಧಿ 360 ದಿನಗಳು ಮಾತ್ರ. ಅದರ ನಂತರ ಹೊಸ ಸಮಿತಿಯನ್ನು ಆರಿಸಲಾಗುತ್ತಿತ್ತು. ಸದಸ್ಯರಿಂದ ಯಾವುದೇ ರೀತಿಯ ಅಪರಾಧವಾದರೂ ಅವರನ್ನು ಕೂಡಲೇ ವಜಾ ಮಾಡಲಾಗುತ್ತಿದ್ದಷ್ಟೇ ಅಲ್ಲದೇ ಅವರು ಮುಂದೆ ಸಮಿತಿಯ ಸದಸ್ಯರಾಗುವ ಅರ್ಹತೆಯನ್ನು ಕಳೆದುಕೊಳ್ಳುತ್ತಿದ್ದರು. ದೇವಸ್ಥಾನ ಸಮಿತಿಗೆ ಸೇರಿದ ಕರೆ, ಬಾವಿ, ಊಟೆ ನೀರಾವರಿ ಆಕರಗಳ ಅಭಿವೃದ್ಧಿ ಭೂಮಿಯ ಸಾಗುವಳಿಯಿಂದ ಬರುವ ಆದಾಯವನ್ನು ಸಮಯಕ್ಕನುಸಾರವಾಗಿ ಹೊಳೆತ್ತುವ, ಏರಿಗಳನ್ನು ಬಲಪಡಿಸುವ ಇತ್ಯಾದಿ ಅನೇಕ ಕಾರ್ಯಗಳನ್ನು ಜವಾಬ್ದಾರಿಯನ್ನು ಸಮಿತಿಯು ಹೊಂದಿತ್ತು. ಈ ವಿವರಗಳು ಶಾಸನಗಳಲ್ಲಿ ಹೇಗೆ ಬಿಂಬಿತವಾಗಿದೆ. ಎನ್ನುವುದನ್ನು ಉದಾಹರಣೆ ಸಹಿತವಾಗಿ ಗಮನಿಸಬಹುದಾಗಿದೆ. ಕ್ರಿ.ಶ. 1408 ರಲ್ಲಿ ತಿರುಮಲೆ ದೇವಸ್ಥಾನದ ಧರ್ಮದರ್ಶಿಗಳಾದ ಸ್ಥಾನತ್ತಾರುಗಳು, ಶ್ರೀಮಾಧವದಾಸರು, ಮುದಾರಿ ನದಿಯಿಂದ ಅವಿಲಾಲ ಕೆರೆಗೆ ಸಂಬಂಧಿಸಿದ ಎರಡು ಕಾಲುವೆಗಳ ಜೀರ್ಣೋದ್ಧಾರ ಮಾಡಿದ ಬಗೆಗೆ ಶಿಲಾಶಾಸನವನ್ನು ನಡಿಸಿದ್ದಾರೆ. ಈ ನೀರಾವರಿ ಕಾರ್ಯದಿಂದ 5000 ಕುಲಿ ಜಮೀನನ್ನು ಸಾಗುವಳಿ ಮಾಡಲಾಗುತ್ತಿತ್ತು. ಹೀಗೆ ದಾನದ ಹಣದಿಂದ ಬಂದ ಬಡ್ಡಿಯಲ್ಲಿ ದೇವಸ್ಥಾನ ಸ್ಥಾನತ್ತಾರರು "ತಿರುಪ್ಪೊ ನಕ್ಕಮ್" ಎಂಬ ಪ್ರಸಾದವನ್ನು ದೇವರಿಗೆ ದಾನಿಗಳ ಹೆಸರಿನಲ್ಲಿ ನೈವೇದ್ಯ ಮಾಡಿ ಹಂಚುವ ಒಪ್ಪಂದವನ್ನು ಮಾಡಿಕೊಂಡಿದ್ದರು. T.T.D. I.Vol.I.No.194 ಇಲ್ಲಿ 'ಕುಲಿ' ಎಂದರೆ ಕುಣಿಗಳನ್ನು ಅಗೆಸಿ ನಿರ್ದಿಷ್ಟ ರಿಪೇರಿ ಕಾರ್ಯ ಕೈಗೆತ್ತಿಕೊಳ್ಳುವುದು ಎಂದು ಅರ್ಥ. ವಿವಿಧ ದಿಕ್ಕುಗಳಿಂದ ಬರುವ ನೀರನ್ನು ಶೇಖರಿಸಿಕೊಳ್ಳುವ ಸಾಮರ್ಥ್ಯ ಕೆರೆಗೆ ಇಲ್ಲದಿದ್ದಾಗ ವಿವಿಧ ನಿರ್ದಿಷ್ಟ ಗಾತ್ರ ಕುಳಿಗಳನ್ನು ನಿರ್ದಿಷ್ಟ ದೂರದಲ್ಲಿ ಅಗೆಸಿ ಆ ನೀರನ್ನು ಕೆರೆಗೆ ಬಸಿಯುವಂತೆ ಮಾಡುವ ಒಂದು ವಿಧದ ದುರಸ್ತಿ (ರಿಪೇರಿ) ಕಾರ್ಯ ಕುಲಿ ಎನ್ನಬಹುದು. ರೈತ ಸಮೂಹದ ಅವಶ್ಯಕತೆ ಗಳನ್ನು ಪೂರೈಸುವಲ್ಲಿ ದೇವಾಲಯಗಳ ಪಾತ್ರ ಮಹತ್ವದ್ದಾಗಿತ್ತು. ತಿರುಪತಿಯ ದೇವಸ್ಥಾನದ ಶ್ರೀಭಂಡಾರ ಎಂದರೆ ಖಜಾನೆಯ ಒಂದು ಸಂಸ್ಥೆಯಂತೆ, ನೀರಾವರಿ ಕಾರ್ಯಗಳ ವಿಕಾಸಕ್ಕೆ ಹಾಗೂ ಕಾಲುವೆಗಳನ್ನು ಆಗೆಸುವಲ್ಲಿ ನೆರವು ನೀಡಿ, ಬಂದ ಅಧಿಕ ಉತ್ಪಾದನೆಯಿಂದ ದೇವತಾರ್ಚನೆ ಕಾರ್ಯ ಮತ್ತು ಪ್ರಸಾದ ವಿತರಣೆ ಕಾರ್ಯಗಳನ್ನು ಜರುಗಿಸುತಿತ್ತು. ದೇವಸ್ಥಾನದ ಪೂಜಾ ಕಾರ್ಯಗಳಿಗೆ ಅಧಿಕ ಹಣ ಖರ್ಚಾಗುತ್ತಿತ್ತು. ದಿನ ಪೂಜೆ ಹಾಗೂ ವಾರ್ಷಿಕ, ಮಾಸಿಕ ಪೂಜೆಗಳ ಖರ್ಚನ್ನು ಪೂರೈಸಲು ಶ್ರೀ ಭಂಡಾರ ಅನೇಕ ಕ್ರಮಗಳನ್ನು ಕೈಗೆತ್ತಿಕೊಳ್ಳುವುದು ಅನಿವಾರ್ಯವಾಗಿತ್ತು. ಆದುದರಿಂದ ರಾಜ, ರಾಣಿ, ಸಾಮಂತರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಶ್ರೀ ಭಂಡಾರಕ್ಕೆ ವಿಶೇಷ ಕೇವಣಿ ಕಾಣಿಕೆ ನೀಡಿ ಪೂಜಾ ಕಾರ್ಯಗಳಲ್ಲಿ ಪಾಲುಗೊಳ್ಳುತ್ತಿದ್ದರು. ಸ್ವಾಮಿಗಳೂ ಇದಕ್ಕೆ ಹೊರತಾಗಿರಲಿಲ್ಲ. ಕ್ರಿ.ಶ.1456 ರಲ್ಲಿ ದೇವಸ್ಥಾನದ ಸ್ಥಾನತ್ತಾರರು ಕೋಯಿಲ್ ಕೆಲವಿಎಂ ಪೆರುಮಾಳ್-ಜಿಯಾರರಿಂದ 5000 ನರಪನಮ್ ಬಂಗಾರದ ನಾಣ್ಯ) ಪಡೆದು, ಅವಿಲಾಲಿದಲ್ಲಿ ಒಂದು ಕೆರೆಯನ್ನು ಅಗೆಸಲಾಯಿತು. ಇಂತಹ ಅನೇಕ ಉದಾಹರಣೆಗಳು ನಮಗೆ ದೊರೆಯುತ್ತವೆ.

ಕ್ರಿ.ಶ. 1467 ರಲ್ಲಿ ಸಾಳುವ ನರಸಿಂಹನ ಅರಸಿ ರಂಗಾಂಬ ದೇವಿಯಮ್ಮ ದೇವಸ್ಥಾನದ ಒಂದು ಹಳ್ಳಿಯಲ್ಲಿ ನೀರಾವರಿ ಕಾಲುವೆಯನ್ನು ಅಗೆಯಲು ದಾನ ನೀಡಿದ್ದನ್ನು ತಿಳಿಸುತ್ತದೆ. ಅದೇ ವರುಷದಲ್ಲಿ ಅವಳ ಗಂಡನಾದ ಅರಸು ಸಾಳುವ ಮಹಾಮಂಡಳೇಶ್ವರ ನರಸಿಂಗಯ್ಯ ದೇವ ಮಹಾ ಅರಸನೂ ತಿರುಪತಿಯಲ್ಲಿ ಪ್ರತ್ಯೇಕವಾಗಿ ಕೆರೆಯನ್ನು ನಿರ್ಮಿಸಿದ ತಿರುಪತಿಯ ದೇವಾಲಯದಲ್ಲಿ ಹೀಗೆ ಸ್ವಧರ್ಮಾತ್ಮಕವಾದ ನೀರಾವರಿ ಕಾರ್ಯಗಳು ನಿರಂತರವಾಗಿ ನಡೆಯುತ್ತಲೇ ಇರುವ ಕಾಲದಲ್ಲಿ ಕ್ರಿ.ಶ. 1473 ರ ಇನ್ನೊಂದು ಶಾಸನದಂತೆ, ಇದೇ ಸಾಳುವ ನರಸಿಂಗರಾಜ ಒಡೆಯರ್ ತಿರುಪತಿಯಲ್ಲಿ ಮತ್ತೊಂದು ಕೆರೆಯನ್ನು ನಿರ್ಮಿಸಿ ಅದಕ್ಕೆ "ನರಸಿಂಗ ರಾಯ ಕೋನೇರಿ" ಎಂದು ತನ್ನ ಹೆಸರಿನಿಂದಲೇ ಕರೆದನು. ಕೆರೆಗೆ ಬೇಕಾಗಿದ್ದ ಭೂಮಿಯನ್ನು ದಾನಿಗಳಿಂದ ಖರೀದಿಸಿ ದಾನ ನೀಡಿದಂತಹ ವಿಶೇಷ ಸಂದರ್ಭಗಳೂ ಉಂಟು. ಕ್ರಿ.ಶ. 1492 ರ ತಿರುಪತಿಯ ಒಂದು ಶಾಸನವು ಇದನ್ನು ಉಲ್ಲೇಖಿಸುತ್ತದೆ. ಮಹಾ ಮಂಡಳೇಶ್ವರ ಬೈಚಿರಾಜ ತಿಮ್ಮರಾಜ ಎನ್ನುವ ಅಧಿಕಾರಿಯೊಬ್ಬ. ಮಹಾ ಜನರ ಸಭೆಗೆ ಹಣನೀಡಿ ಕೆರೆಗೆ ಬೇಕಾದ ಭೂಮಿಯನ್ನು ಕೊಂಡುಕೊಂಡ. ಹೀಗೆ ಕೊಂಡ ಭೂಮಿಯು ಮೇರೆಗಳ ಗಡಿಕಲ್ಲುಗಳಲ್ಲಿ ವಿಷ್ಣು ಚಕ್ರದ ಚಿತ್ರಗಳನ್ನು ಕೆತ್ತಿಸಿದ. ಹೀಗೆ ಗುರುತಿಸಲಾದ ಪ್ರದೇಶದಲ್ಲಿ ಹೂದೋಟ ಒಂದನ್ನು ರಚಿಸಲಾಯಿತು. ಆ ಕೆರೆಯ ಮಧ್ಯದಲ್ಲಿ ಒಂದು ಮಂಟಪವನ್ನೂ ನಿರ್ಮಿಸಲಾಯಿತು. ಹೀಗೆ ನಿರ್ಮಾಣ ಗೊಂಡ ಕೆರೆ, ಉದ್ಯಾನ ಮತ್ತು ಮಂಟಪವನ್ನು ಗೋವಿಂದ ನಾಚ್ಚಿಉಡೈಯಾರ್ ಮುಂತಾದ ದೇವರುಗಳಿಗೆ ಅರ್ಪಿಸಲಾಯಿತು. ಮೂಲತಃ ಈ ಸರೋವರವು ಧಾರ್ಮಿ ಉದ್ದೇಶಗಳಿಂಗೆಂದೇ ನಿರ್ಮಿಸಿದ ಪುಷ್ಕರಣಿಯಾಗಿತ್ತು".

- ಮುಂದುವರೆಯುತ್ತದೆ



ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ತಿರುಮಲೆಯ ಆಲಯ ವಿವರ

### ಸಾವಿರ ಕಾಲಿನ ಮಂಟಪ

ಇದು ಆಯತಾಕಾರದಲ್ಲಿದ್ದು ಪಶ್ಚಿಮಕ್ಕೆ ಆಲಯದ ಪೂರ್ವ ರಥ ಬೀದಿಯೂ, ಉತ್ತರದಲ್ಲಿ ಸನ್ನಿಧಿಬೀದಿಯೂ,ಪೂರ್ವದಲ್ಲಿ ಈಗಿನ ಹೊಸ ವೈಕುಂಠ ತೋರಣದ ಬೀದಿಯೂ,ದಕ್ಷಿಣಕ್ಕೆ ಹತಿ ರಾಮಜೀ ಮಠವೂ ಇದೆ. ಕ್ರಿ.ಶ.1472 ರಲ್ಲಿ ವಿಜಯನಗರದ ಸಾಮ್ರಾಟನಾದ ಸಾಳುವ ನರಸಿಂಹನು ಆಲಯಕ್ಕೆ ಅನುಬಂಧವಾಗಿ ಮಂಟಪ, ಪ್ರಾಕಾರ,ಗೋಪುರಗಳನ್ನು ನಿರ್ಮಿಸಲು ದುರ್ಗ ಸಮುದ್ರವೆಂಬ ಗ್ರಾಮವನ್ನು ನೀಡಿದ್ದರಿಂದ ಬಂದ ಆದಾಯದಲ್ಲಿ ಈ ಮಂಟಪವನ್ನು ನಿರ್ಮಿಸಲಾಯಿತು. ಈ ಮಂಟಪವನ್ನು ಮೊದಲಿಗೆ ಸದಸ್ ಹಾಲ್ ಆಗಿಯೂ, ಕಲ್ಯಾಣ ಕಟ್ಟೆಯಾಗಿಯೂ, ಬಳಸಲಾಗುತ್ತಿತ್ತು,ಈಗ ಬೆಟ್ಟದ ಮೇಲಣ ಆಲಯ ಪುರಾವಸ್ತು ಪ್ರದರ್ಶನ ಶಾಲೆಯೂ,(ಈಗ ಈ ಸಾವಿರ ಕಾಲಿನ ಮಂಟಪ ಇಲ್ಲ 2015) ಆಗಿದೆ.

### ಹತಿರಾಮಜೀ ಮಠ

ತಿರುಮಲೆಯ ಆಲಯ ಪ್ರಾಂತ್ಯದಲ್ಲಿ ಈ ಮಠವು ಈಗಲೂ ಒಂದು ಪ್ರಮುಖ ಗುರುತು ಆಗಿದೆ. ಈ ಮಠದ ಹಲವಾರು ಅಧಿಪತಿಗಳ ಸಮಾಧಿಗಳೂ,ದಶಾವತಾರವೇ ಮೊದಲಾದ ಹಲವಾರು ಅಪೂರ್ವ ಶಿಲ್ಪಗಳು ಇಲ್ಲಿವೆ. ಶ್ರೀ ವೆಂಕಟೇಶ್ವರ ಸ್ವಾಮಿಯು ಈ ಮಠದ ಒಬ್ಬಾನೊಬ್ಬ ಪ್ರಾಚೀನ ಮಠಾಧಿಪತಿಯೊಡನೆ ಲೆತ್ತವನಾಡುತ್ತಿರುವ ಅಪೂರ್ವವಾದ ವರ್ಣ ಚಿತ್ರವೂ ಇದೆ.

### ಪ್ರಾಕಾರಗಳು – ಪ್ರದಕ್ಷಿಣಾ ಪಥಗಳು

ಆಲಯವು ಮೂರು ಆವರಣ ಗೋಡೆಗಳಿಂದ ಸುತ್ತುವರೆದಿದೆ. ಇವುಗಳಲ್ಲಿ ಅತಿ ಕಿರಿಯದು ಎಂದರೆ ಗರ್ಭಗುಡಿ ಹಾಗೂ ಮೊದಲ ಪ್ರದಕ್ಷಿಣಾ ಪಥದ ನಡುವೆಯಿದೆ. ಈ ಪ್ರದಕ್ಷಿಣಾ ಪಥಗಳು ಎಂದರೆ,

1)ಮುಕ್ಕೋಟಿ ಪ್ರದಕ್ಷಿಣ- ಗರ್ಭಗುಡಿಯ ಅತಿ ಸಮೀಪದ್ದು. ಇದನ್ನು ವೈಕುಂಠ ಏಕಾದಶಿಯಂದು ಮಾತ್ರವೇ ಭಕ್ತರಿಗಾಗಿ ತೆರೆಯಲಾಗುತ್ತದೆ.

2)ವಿಮಾನ ಪ್ರದಕ್ಷಿಣ-ಇದು ಈಗ ಪ್ರಮುಖವಾದ ಪ್ರದಕ್ಷಿಣಾಪಥವಾಗಿದ್ದು ಇದರ ಉತ್ತರದ ಕಡೆಯಿಂದ ಗರ್ಭಗುಡಿಯ ಮೇಲಿನ ಆನಂದನಿಲಯ ವಿಮಾನವನ್ನೂ ವಿಮಾನವೇಂಕಟೇಶ್ವರನನ್ನೂ ನೋಡಲಾಗುತ್ತದೆ.

3) ಸಂಪಂಗಿ ಪ್ರದಕ್ಷಿಣ- ದೇವಾಲಯದ ಒಳಗಡೆಯ ಅತಿ ದೊಡ್ಡ ಪ್ರದಕ್ಷಿಣಾಪಥವಾಗಿದ್ದು, ಯಾತ್ರಿಕರು ಇದನ್ನು ಬಳಸಲಾಗದು.(ಇಲ್ಲಿನ ಒಂದು ಭಾಗದಲ್ಲಿ ಉತ್ತರ ಪಥದಲ್ಲಿ ಆಲಯದ ಲಾಡು ಪ್ರಸಾದಗಳನ್ನು ಮಾಡುವ ಅಡಿಗೆಯ ಮಂಟಪಗಳೂ,ದಕ್ಷಿಣದಲ್ಲಿ ಸ್ವಾಮಿಯ ಕಲ್ಯಾಣೋತ್ಸವವನ್ನು ನಡೆಸುವ ಕಲ್ಯಾಣ ಮಂಟಪವೂ, ಪಶ್ಚಿಮದಲ್ಲಿ ಉಗ್ರಾಣಗಳೂ ಇವೆ.)

### ಹೊರಗೋಪುರ

ಹೊರದ್ವಾರ ಗೋಪುರವು ಚೌಕೋನ ತಳಹದಿಯಲ್ಲಿ ಪೂರ್ವಪಶ್ಚಿಮ-32 ಅಡಿಗಳು ಹಾಗೂ ಉತ್ತರದಕ್ಷಿಣ-38 ಅಡಿಗಳ ಅಳತೆಯಲ್ಲಿ ನಿರ್ಮಾಣವಾಗಿದೆ. ಇದರ ನಡುವೆಯಿರುವ ತಿರುವಾಸಲ್ ಅಥವಾ ಮಹಾದ್ವಾರವು 11 ಅಡಿ ಅಗಲವಾಗಿದೆ. ಎರಡೂ ಕಡೆಗಳಲ್ಲಿಯೂ ಕಲ್ಲಿನಲ್ಲಿ ಕೆತ್ತಿದ ಸಮಾನಾಂತರ ದ್ವಾರಬಂಧಗಳಿವೆ.

ಹೊಸ್ತಿಲು, ನಾಗವಾಸವೆಲ್ಲವೂ ಕಲ್ಲಿನ ಕೆತ್ತನೆಯೇ. ಮುಖದ್ವಾರವು ಮುಚ್ಚಿಕೊಳ್ಳುವ, ಕೆತ್ತನೆಯ ಕೆಲಸದ ಮರದ ಹಲಗೆಗಳಿಂದಾಗಿದ್ದು ಈ ಹಲಗೆಗಳನ್ನು ಕಲಾತ್ಮಕವಾದ ಕಬ್ಬಿಣದ ಮೊಳೆಗಳಿಂದ ಬಲವಾಗಿ ಕೂಡಿಸಲಾಗಿದೆ. ದ್ವಾರದ ಎಡಗಡೆಯಲ್ಲಿ ಒಂದು ಕಿರು ಬಾಗಿಲೂ ಇದೆ. ಹೊರಗೋಪುರದಿಂದುಂಟಾಗುವ ಆಲಯ ಪ್ರಾಕಾರದ ಗೋಡೆ ಪೂರ್ವ ಪಶ್ಚಿಮ 414 ಅಡಿಗಳೂ, ಉತ್ತರ ದಕ್ಷಿಣ 263 ಅಡಿಗಳೂ ಆಗಿವೆ.

ಗೋಪುರದ ತಳಗಟ್ಟಿನಲ್ಲೂ,ಗೋಡೆಗಂಬಗಳಲ್ಲಿಯೂ ಉತ್ತಮವಾದ ಕೆತ್ತನೆಕೆಲಸವಿದೆ.ಗೋಪುರದ ತಳಭಾಗವೂ, ಗೋಡೆಗಂಬಗಳ ಕೆತ್ತನೆಯೂ ಅರ್ವಾಚೀನ ಚೋಳರ ಕಾಲದ ಶಿಲ್ಪ ಕಲೆಯನ್ನು ಪ್ರತಿನಿಧಿಸುತ್ತದೆ. ಪ್ರದಕ್ಷಿಣಾಪಥದ ಮುಂಭಾಗದಲ್ಲಿ ಬಾಗಿಲ ದಾಲಮಂದ್ರದ ಬಲಭಾಗದಲ್ಲಿ ತ್ರಿಭುವನ ಚಕ್ರವರ್ತಿ ಶ್ರೀ ಯಾದವರಾಯ ನರಸಿಂಗದೇವನ ಆಳ್ವಿಕೆಯ 12 ನೇ ವರ್ಷದಲ್ಲಿ ಆತನ ಪತ್ನಿ ಯಾದವರಾಯನಾಚ್ಚಿಯಾರ್, ಆಲಯದ ನಂದಾದೀಪವನ್ನು ಶಾಶ್ವತವಾಗಿ ಬೆಳಗಿಸಲು ಬೇಕಾಗುವ ತುಪ್ಪದ ಉತ್ಪಾದನೆಗಾಗಿ 62 ಹಾಲು ಕರೆಯುವ ಹಸುಗಳನ್ನೂ ಎರಡು ಗೂಳಿಗಳನ್ನು ನೀಡಿದ ವಿವರ ತಿಳಿಸುವ ಶಾಸನವಿದೆ. ಇದರ ಕಾಲ ಕ್ರಿ.ಶ.1217 ಗೋಪುರದ ತಳಗಟ್ಟಿನಲ್ಲಿ ಹದಿಮೂರನೇ ಶತಮಾನದ ಇನ್ನೂ ಹಲವಾರು ಶಾಸನಗಳು ಇವೆ.

ಗೋಪುರದ ಅಧಿಷ್ಠಾನವು ಎರಡು ಅಂತಸ್ತಿನದಾಗಿದ್ದು ದೇವಕೋಷ್ಠ ಅಥವಾ ಇನ್ನಿತರ ಶಿಲ್ಪಗಳಿಲ್ಲದ ಗೋಡೆಗಂಬಗಳ ಆಧಾರದಲ್ಲಿದೆ. ಕ್ರಿ.ಶ.12,13ನೇ ಶತಮಾನದಲ್ಲಿ ಪ್ರಚಲಿತವಿದ್ದ ಗಂಟೆಯಾಕಾರದ ಬೋದಿಗೆಗಳಿವೆ. ಗೋಪುರವು ನೆಲದಿಂದ ಐವತ್ತು ಅಡಿ ಎತ್ತರಕ್ಕೇರಿದ್ದು ಇಟ್ಟಿಗೆ ಗಾರೆಗಳಿಂದಾಗಿದೆ. ದ್ವಾರ ಪಾಲಕರನ್ನು ಹೊಂದಿದ ಐದು ಕಿರುಬಾಗಿಲುಗಳನ್ನು ಹೊಂದಿದ ಐದು ಅಂತಸ್ತುಗಳಾಗಿವೆ. ಗೋಪುರದ ಪ್ರತಿ ಪಾರ್ಶ್ವವೂ ಸಣ್ಣ ಸಣ್ಣ ಶಾಲೆಗಳು ಪಂಜರಗಳನ್ನೂ ಹೊಂದಿದೆ. ಗೋಪುರ ಶಿಖರವು ಕೀರ್ತಿ ಮುಖವಾಗಿದೆ.

ಗೋಪುರದಲ್ಲಿ ಹಲವಾರು ವೈಷ್ಣವ ದೇವತೆಗಳ ವಿಗ್ರಹಗಳು- ಹನುಮಂತ,ಕೇವಲ ನರಸಿಂಹ, ಲಕ್ಷ್ಮೀನರಸಿಂಹ - ಮೊದಲಾದ ವಿಗ್ರಹಗಳನ್ನೊಳಗೊಂಡಿದ್ದು ಈ ಗೋಪುರ ಕಾಲದಿಂದ ಕಾಲಕ್ಕೆ ಜೀರ್ಣೋದ್ಧಾರವಾಗಿ,ಆಧುನಿಕ ವಿಕಾರವಾದ ಬಣ್ಣಗಳನ್ನು ಹೊಂದಿದೆ

## ಸಂಪಂಗಿ ಪ್ರದಕ್ಷಿಣ

ಮಹಾದ್ವಾರ ಗೋಪುರವನ್ನು ದಾಟಿದ ಒಳಬಂದರೆ ಆಲಯದ ಒಳಪ್ರಾಕಾರವನ್ನು ಸೇರಬಹುದು. ತಕ್ಷಣ ಸಿಗುವುದೆಂದರೆ ಗೋಪುರಕ್ಕೆ ಹೊಂದಿಕೊಂಡಂತಿರುವ ಎರಡೂ ರೆಕ್ಕೆಗಳಿರುವ ಕಿರಿದಾದ ಮಂಟಪ ಹಾಗೂ ಮಧ್ಯದ ಪಥ. ಇದು ಆಲಯದ ಅತಿ ದೊಡ್ಡ ಪ್ರಾಕಾರವಾಗಿದ್ದು ಆಲಯದ ಹಲವಾರು ಕಾರ್ಯಕ್ರಮಗಳು ನಡೆಯುವಂತಹ ಹಲವು ನಿರ್ಮಾಣಗಳನ್ನು ಒಳಗೊಂಡಿದೆ.

## ಪ್ರತಿಮಾ ಮಂಟಪ ಅಥವಾ ಕೃಷ್ಣರಾಯ ಮಂಟಪ

ದ್ವಾರಗೋಪುರಕ್ಕೆ ಹೊಂದಿಕೊಂಡಂತಿರುವ ಕಿರು ಮಂಟಪ ಎರಡು ಪಾರ್ಶ್ವಪಕ್ಷಗಳಿಂದ ಕೂಡಿದ್ದು, ಪ್ರತಿಪಕ್ಷವೂ ನಾಲ್ಕು ಕಂಬಗಳ ಎರಡು ಸಾಲನ್ನು ಹೊಂದಿದೆ. ಹೊರಗಡೆಯ ಸಾಲಿನ ಕಂಬಗಳು ಸಾಧಾರಣವಾಗಿದ್ದು ತಳದಲ್ಲಿ ಸಾಲಕೋಷ್ಠ ಹೊಂದಿವೆ. ಒಳಗಡೆಯ ಸಾಲಿನ ಕಂಬಗಳು ಪ್ರಾಣಿಗಳ ಚಿತ್ರಗಳನ್ನು ಹೊಂದಿದ್ದು ಮಕರದ ಮೇಲೆ ಹಿಂಗಾಲನ್ನಿಟ್ಟು ಸವಾರನನ್ನು ಹೊತ್ತ ಸಿಂಹವನ್ನು ಹೊಂದಿವೆ.

ಇದನ್ನು ಪ್ರತಿಮಾಮಂಟಪವೆಂದು ಕರೆಯಲು ಕಾರಣ- ಇಲ್ಲಿ ವಿಜಯನಗರದ ರಾಜ ಶ್ರೀ ಕೃಷ್ಣದೇವರಾಯ ಹಾಗೂ ಇವನ ಪತ್ನಿಯರು ತಿರುಮಲದೇವಿ,ಚಿನ್ನಾದೇವಿಯರ ಮತ್ತು ವೆಂಕಟಪತಿಯ,ಇತರರ ಕಂಚಿನ ಪ್ರತಿಮೆಗಳನ್ನು (ಅಚ್ಯುತರಾಯವರದಾಜಿ ಅಮ್ಮನವರ ಮೂರ್ತಿಗಳು ಶಿಲಾಮೂರ್ತಿಗಳು) ಇಡಲಾಗಿರುವುದು.

ಕಂಬಗಳ ಕೆತ್ತನೆಯ ಶೈಲಿಯಿಂದಾಗಿ ಈ ಮಂಟಪವನ್ನು ವಿಜಯನಗರದ ಅರ್ವಾಚೀನ ಕಾಲದಲ್ಲಿ ಎಂದರೆ 16ನೇ ಶತಮಾನದಲ್ಲಿ ನಿರ್ಮಿಸಲಾಗಿದೆಯೆಂದು ಹೇಳಬಹುದು. ಈ ಮಂಟಪವು ಸುಂದರವಾಗಿದ್ದು, ರಾಮಪಟ್ಟಾಭಿಷೇಕ, ಅಶೋಕವನದಲ್ಲಿ ಸೀತೆಯನ್ನು ಸಂದರ್ಶಿಸಿದ ಆಂಜನೇಯ,ಕೃಷ್ಣಲೀಲೆಯ ಸಂದರ್ಭಗಳು-ಮೊದಲಾದ ಶಿಲ್ಪಗಳನ್ನು ಹೊಂದಿದೆ. ಎರಡು ಕಂಬಗಳ ಮೇಲೆ ವೈಷ್ಣವ ಚಿಹ್ನೆಗಳಾದ ಊರ್ಧ್ವಪುಂಡ್ರಗಳು,ಶಂಖ, ಚಕ್ರಗಳನ್ನು ಕೆತ್ತಲಾಗಿದೆ. ಈ ಮಂಟಪದಲ್ಲಿರುವ ಎತ್ತರವಾದ ಕಂಬಗಳು ಆಸಕ್ತಿದಾಯಕವಾದ ಬೋದಿಗೆಗಳನ್ನು ಹೊಂದಿದ್ದು, ಹಲವು ವ್ಯಾಳಿಗಳನ್ನು ಇನ್ನು ಕೆಲವು ಸಿಂಹಗಳನ್ನು, ಪ್ರೇಕ್ಷಕರನ್ನು ನೇರವಾಗಿ ದಿಟ್ಟಿಸುವ ಗಣಗಳನ್ನು ಇತರೆಯವು-ಹೊಂದಿವೆ.

## ರಂಗಮಂಟಪ

ಒಳಪ್ರಕಾರದ ಆಗ್ನೇಯಭಾಗದ ಮೂಲೆಯಲ್ಲಿ ರಂಗಮಂಟಪವೆಂದು ಪ್ರಸಿದ್ಧವಾಗಿರುವ ಹಿರಿಯ ಮಂಟಪವಿದೆ. ಇದು ಎತ್ತರದ ತಳಹದಿಯ ಮೇಲಿದ್ದು ಪೂರ್ವಪಶ್ಚಿಮಕ್ಕೆ 60 ಅಡಿಯೂ ಉತ್ತರ ದಕ್ಷಿಣಕ್ಕೆ 109 ಅಡಿಯೂ ಇದೆ. ಇದರ ದಕ್ಷಿಣದಲ್ಲಿ 12 ಅಡಿ ಚೌಕಾಕಾರದ ಕಿರುಗುಡಿ ಒಂದಿದ್ದು ಇದನ್ನು ಶಾಶ್ವತವಾಗಿ ಬೀಗ ಹಾಕಲಾಗಿದೆ.

ಮಲ್ಲಿಕಾಫರನ ಮುಂದಾಳುತ್ವದಲ್ಲಿ ಮುಸಲ್ಮಾನ ಸೈನ್ಯವು ಶ್ರೀ ರಂಗವನ್ನು ಆಕ್ರಮಿಸಿದಾಗ ಅಲ್ಲಿನ ಶ್ರೀರಂಗನಾಥನ ಉತ್ಸವ ಮೂರ್ತಿಯನ್ನು ತಂದು ಇಲ್ಲಿರಿಸಿದ್ದರೆಂಬ ಕಾರಣದಿಂದಾಗಿ ಇದನ್ನು ರಂಗನಾಯಕ ಮಂಟಪವೆಂದೂ ಕರೆಯುತ್ತಾರೆ.

**- ಮುಂದುವರೆಯುತ್ತದೆ.**

తిరుమలే తిరుపతి దేవస్థానగళు

# ಶ್ರೀ ವೆಂಕಟೇಶ್ವರ ಅನ್ನಪ್ರಸಾದ ಟ್ರಸ್ಟ್

## (ಒಂದು ದಿನದ ದೇಣಿಗೆ ಕೊಡುವ ಯೋಜನೆ)





ಅನ್ನವೇ ಪರಬ್ರಹ್ಮ ಸ್ವರೂಪ, ಹಸಿದವನಿಗೆ ಅನ್ನ ನೀಡುವುದಕ್ಕಿಂತ ಉತ್ತಮವಾದ ಪುಣ್ಯ ಮತ್ತೊಂದಿಲ್ಲ. ತಿರುಮಲೆ ತಿರುಪತಿ ದೇವಸ್ಥಾನವು ತಿರುಮಲೆ ಮತ್ತು ತಿರುಚಾನೂರಿನಲ್ಲಿ ನಿತ್ಯವೂ ಅನ್ನಪ್ರಸಾದ ವಿತರಣೆಯನ್ನು ನಡೆಸುತ್ತಿದೆ. ಈ ಕಾರ್ಯಕ್ಕೆ ಅನೇಕ ದಾನಿಗಳು ಉದಾರವಾಗಿ ದೇಣಿಗೆ ನೀಡುತ್ತಾರೆ, ಎಂಬುದು ತಿಳಿದಿರುವ ವಿಷಯ! ಪ್ರತಿಯೊಬ್ಬರಿಗೂ ಭೂಮಿಯನ್ನು ದಾನ ಮಾಡಲು ಸಾಧ್ಯವಿಲ್ಲ. ಇದನ್ನು ಗಮನಿಸಿದ ತಿ.ತಿ.ದೇ., ಒಂದು ದಿನದ ಅನ್ನಪ್ರಸಾದದ ವೆಚ್ಚವನ್ನು ಭಕ್ತರಿಂದ ಕಾಣಿಕೆಯಾಗಿ ಸ್ವೀಕರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಕ್ತರು ಸ್ಪಂದಿಸಿ ! ಮತ್ತೊಬ್ಬರ ಹಸಿವನ್ನು ತೀರಿಸಿ! ಮಾಧವನ ಕೃಪೆಗೆ ಪಾತ್ರರಾಗಿ !!!

ದೇಣಿಗೆಯನ್ನು ವ್ಯಕ್ತಿಗಳು ಮಾತ್ರವಲ್ಲದೆ ಕಂಪನಿಗಳು, ಸಂಸ್ಥೆಗಳು ಮತ್ತು ಟ್ರಸ್ಟ್‌ಗಳು ಸಂಯುಕ್ತವಾಗಿಯೂ ಸಹ ವಿರಾಳವನ್ನು ನೀಡಬಹುದು.

ದಾನಿಗಳು ದೈನಂದಿನ ಮೊತ್ತವನ್ನು (ರೂ. 38 ಲಕ್ಷಗಳು ) ಅಲ್ಪಾಹಾರ - (ರೂ. 8 ಲಕ್ಷಗಳು) ಮಧ್ಯಾಹ್ನ ಭೋಜನ (ರೂ. 15 ಲಕ್ಷಗಳು ) ಅಥವಾ ರಾತ್ರಿ ಭೋಜನ (ರೂ. 15 ಲಕ್ಷಗಳು) ವಿತರಿಸಲು ಆಯ್ಕೆ ಮಾಡಬಹುದು. ದಾತರಿಗೆ ತಿ.ತಿ.ದೇ., ದೇವಸ್ಥಾನದವರು ಕಲ್ಪಿಸುವ ಸೌಕರ್ಯಗಳು ಒಂದೇ ಮಾದರಿಯಲ್ಲಿ ಇರುತ್ತದೆ. ಈ ಒಂದು ದಿನದ ವಿರಾಳ ಪಥಕವು ಸೆಪ್ಟೆಂಬರ್, 2024 ರ ವರೆಗೆ ಅನ್ವಯಿಸುತ್ತದೆ.

**ಹೆಚ್ಚಿನ ವಿವರಗಳಿಗಾಗಿ :**

ಉಪಕಾರ್ಯನಿರ್ವಹಣಾಧಿಕಾರಿ (ಡೋನಾರ್‌ಸೆಲ್) ಎಫ್.ಎ.ಸಿ.,

ತಿ.ತಿ.ದೇ., ತಿರುಮಲೆ. ಫೋನ್: -

0877 - 2263001, 2263472.

ಈ ಮೇಲ್ ಐ.ಡಿ. :-

**cdmc.ttd@tirumala.org**

ಇದರಲ್ಲಿ ಪಾಲ್ಗೊಂಡ ಭಕ್ತದಾತರು ಭಕ್ತರಿಗೆ ತಾವೇ ಸೇವೆ ಸಲ್ಲಿಸುವ ಅವಕಾಶವಿರುತ್ತದೆ. ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ವಿತರಣಾ ಕೇಂದ್ರದಲ್ಲಿ ಅವರ ಹೆಸರನ್ನು ಪ್ರದರ್ಶಿಸಲಾಗುತ್ತದೆ.


### ದೈನಂದಿನ ವೆಚ್ಚಗಳು

| | |
|---|---|
| 1. ಅಲ್ಪಹಾರ (ಟಿಫಿನ್ ) | - 08 ಲಕ್ಷಗಳು |
| 2.ಮಧ್ಯಾಹ್ನ ಭೋಜನ | - 15 ಲಕ್ಷಗಳು |
| 3. ರಾತ್ರಿ ಭೋಜನ | - 15 ಲಕ್ಷಗಳು |
| ಒಟ್ಟು ಮೊತ್ತ | - 38 ಲಕ್ಷಗಳು |

**ಈ ಮೊತ್ತವನ್ನು ದಾನಿಗಳು ತಿ.ತಿ.ದೇ., ಅನ್ನಪ್ರಸಾದ ಟ್ರಸ್ಟ್‌ನಲ್ಲಿ ನೀಡಬಹುದು.**

## ಪುಸ್ತಕ ವಿಮರ್ಶೆ

# ಹರಿದಾಸ ಸಾಹಿತ್ಯದಲ್ಲಿ ಬಿಂಬ-ಪ್ರತಿಬಿಂಬ ತತ್ವ




**ಪ್ರಕಾಶಕರು :** ಅನಂತ ಪ್ರಕಾಶನ
ನಂ.103/ಎ, 3ನೇ ಮುಖ್ಯ ರಸ್ತೆ
2 ನೇ ಷಾಪ್ ಲೈನ್,
ಟಾಟಾ ಸಿಲ್ಕ್‌ಫಾರಂ, ಬಸವನಗುಡಿ,
ಬೆಂಗಳೂರು - 560 004
ಮೊಬೈಲ್ : 99721 29376

**ಲೇಖಕರ ವಿಳಾಸ :**
ಡಾ॥ ಶಾಂತಾ ರಘೂತ್ತಮಾಚಾರ್
ನಂ. 43, 3 ನೇ ಮುಖ್ಯ ರಸ್ತೆ,
ಸಾರ್ವಭೌಮ ನಗರ, ಚಿಕ್ಕಕಲ್ಲ ಸಂದ್ರ,
ಬೆಂಗಳೂರು - 560061
ಮೊಬೈಲ್ : 99027 39803

ಪ್ರಥಮ ಮುದ್ರಣ : 2019
ಅಳತೆ : 1/8 ಡೆಮ್ಮಿ
ಪುಟಗಳು = 280
ಬೆಲೆ : ರೂ. 300-00

ಕಲಿಯದವರಿಗೂ ಕಾಮಧೇನುವೆನಿಸಿರುವ ಹರಿದಾಸ ಸಾಹಿತ್ಯ ಗಹನ ವಿಚಾರಗಳನ್ನು ಸರಳವಾಗಿ ನಿರೂಪಿಸಿ ಜನಸಾಮಾನ್ಯರ ಮನ ಸೂರೆಗೊಂಡಿದೆ. ಉಪನಿಷತ್ತಿನಲ್ಲಿನ ಅಮೂಲ್ಯ ವಿಚಾರಗಳನ್ನು ಸಾಹಿತ್ಯ ಸಂಗೀತದ ಮೂಲಕ ತಲುಪಿಸಿರುವುದು ಇದರ ವೈಶಿಷ್ಟ್ಯವಾಗಿದೆ. ಹರಿದಾಸರು ರಚಿಸಿರುವ ಕೀರ್ತನೆಗಳಲ್ಲಿ ಕೃತಿಗಳಲ್ಲಿ ಬಿಂಬ ಪ್ರತಿಬಿಂಬ ಕುರಿತಅನೇಕ ಸಂಗತಿಗಳು ಹೇರಳವಾಗಿ ಪ್ರಸ್ತಾಪಿತವಾಗಿದ್ದು ಶ್ರೀಹರಿಯೇ ಬಿಂಬ ದೇವರು ಪ್ರತಿಬಿಂಬ ಎಂಬುದನ್ನು ಸಾರಿ ಹೇಳಲಾಗಿದೆ.ಮೋಕ್ಷ ಗಾಮಿಗಳಿಗೆ ಭಗವಂತನ ಅತಿಶಯನಾದ ಅನುಗ್ರಹ ಅತ್ಯಗತ್ಯ ಇದು ಭಗವಂತನ ಅಪರೋಕ್ಷ ಜ್ಞಾನದಿಂದ ಮಾತ್ರಸಾಧ್ಯ ಸಾಧಕನು ಬಿಂಬ ಪ್ರತಿಬಿಂಬ ಭಾವತತ್ವವನ್ನು ಸರಿಯಾಗಿ ಅಂತು ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕು.

ಇಂತಹ ಸಹಜವಾದ ವಿಚಾರಗಳನ್ನು ಲೇಖಕಿ. ಶಾಂತಾ ರಘೋತ್ತಮಾಚಾರ್ ಅವರು ಪಿ.ಎಚ್.ಡಿ ಮೊದಲು ಆಯ್ಕೆ ಮಾಡಿ ಕೊಂಡು ಕನ್ನಡ ಸಂಸ್ಕೃತ ಗ್ರಂಥಗಳನ್ನು ಅಧ್ಯಯನ ಮಾಡಿ ಮಹಾ ಪ್ರಬಂಧವನ್ನು ರಚಿಸಿದ್ದಾರೆ. ಇಂತಹ ಅಪರೂಪವಾದ ಗ್ರಂಥವನ್ನು ಅಚ್ಚು ಕಟ್ಟಾಗಿ ಬರೆದಿದ್ದಾರೆ. ಇದು ಅವರ ಅಧ್ಯಯನ ಶೀಲತೆ ಹಾಗೂ ಬದ್ಧತೆ ಸಾಕ್ಷಿಯಾಗಿದೆ.

ಈ ಕೃತಿಗೆ ತೋರಣ ನಾಂದಿಯಂತೆ ಸೋಸಲೆ ವ್ಯಾಸರಾಜ ಮಠದ ಪೀಠಾಧಿಪತಿಗಳು ಅನುಗ್ರಹ ಸಂದೇಶ ನೀಡಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಇಂತಹ ವಿಸಿಷ್ಟ ಕೃತಿಯನ್ನು ರಚಿಸಿದ ಡಾ.ಶಾಂತಾರಘೋತ್ತಮಾಚಾರ್ ಹಾಗೂ ಇದನ್ನು ಆಧ್ಯಾತ್ಮ ಪಿಪಾಸುಗಳಿಗಾಗಿ ಪ್ರಕಾಶಿಸಿದ ಅನಂತ ಪ್ರಕಾಶನವರು ಅಭಿನಂದನಾರ್ಹರು.

**ಕೆ.ಎಸ್. ರಾಮಮೂರ್ತಿ**
**94497 50618**

# ಶ್ರೀ ವೇದಾಂತದೇಶಿಕರ ಜೀವನ ಹಾಗೂ ಹಂಸ ಸಂದೇಶ



ತತ್ರಾರೂಢೈರ್ಮಹತಿ ಮನುಜೈ ಸ್ವರ್ಗಿಭಿಃ ಶ್ರಾವತೀರ್ಣೈ
ಸತ್ವೋನ್ಮೇಷಾತ್ ವ್ಯಪಗತ ಮಿಥಸ್ತಾರತಮ್ಯಾದಿ ಭೇದೈಃ
ಸಾಧಾರಣ್ಯಾತ್ ಫಲ ಪರಿಣತೇಃ ಸಂಗಶೋಬಧ್ಯ ಮಾನಾಂ
ಶಕ್ತ್ಯಾ ಕಾಮಂ ಮಧು ವಿಜಯಿ ನಸ್ತ್ವಂ ಚ ಕುರ್ಯಾಃ ಸಪರ್ಯಾಂ ॥

ದೊಡ್ಡದಾದ ಆ ತಿರುಮಲೆಯಲ್ಲಿ ಭಕ್ತರಿಗೆಲ್ಲಾ ಸತ್ವಗುಣವೇ ಹೆಚ್ಚಾಗಿದೆ ಆದ್ದರಿಂದ ಬಡವ, ಬಲ್ಲಿದ, ವಿದ್ಯಾವಂತ , ಅಜ್ಞಾನಿ - ಮುಂತಾದ ಯಾವ ಬೇಧ ಭಾವವೂ ಇಲ್ಲ. ಭಗವಂತ ಭಕ್ತ ಪರಾಧೀನವಾದುದರಿಂದ ಎಲ್ಲರನ್ನೂ ಅನುಗ್ರಹಿಸುತ್ತಾನೆ. ಅಂದಿನಿಂದ ಇಂದಿನವರೆಗೂ ಜನಕೋಟಿಯನ್ನು ಯಾವುದೇ ಬೇಧ ಭಾವವಿಲ್ಲದೆ ಶ್ರೀನಿವಾಸನು ಅನುಗ್ರಹಿಸುತ್ತಾನೆ ಎಂಬುದೇ ವೈಶಿಷ್ಟ್ಯ ಭಗವಂತನನ್ನು ಆಶ್ರಯಿಸಿದವರು ತಾವು ವಿಷ್ಣುವಿನ ದಾಸರೆಂದು ಹೇಳಿಕೊಳ್ಳುತ್ತಾರೆ. ದಯೆ ಇರುವುದರಿಂದಲೇ ಚೇತನರು ಭಗವಂತನ ಸಮೀಪಕ್ಕೆ ತಲುಪಲು ಹಾಗೂ ಭಗವಂತನು ಈ ಧರೆಗೆ ಇಳಿದು ಬರಲು ಸಾಧ್ಯ. ಹಾಗೆ ಇಳಿದು ಬಂದ ಕ್ಷೇತ್ರಗಳಲ್ಲಿ ತಿರುಮಲೆಯು ಅತ್ಯಂತ ಶ್ರೇಷ್ಠವಾದದ್ದು, ಜೀವಾತ್ಮನು ಭಗವಂತನನ್ನು ಸೇರಲು ಪ್ರತಿಘಟ್ಟದಲ್ಲಿಯೂ ದಯೆಯು ಸಹಾಯಕಳಾಗಿದ್ದಾಳೆ ಎಂಬುದನ್ನು ವೇದಾಂತದೇಶಿಕರು 'ದಯಾಶತಕ' ದ ಕೆಲವು ಶ್ಲೋಕಗಳಲ್ಲಿ ವ್ಯಕ್ತ ಪಡಿಸಿರುವುದನ್ನು ನಾವು ಗಮನಿಸಬಹುದು. ತಿರುಮಲೆಗೆ ಸೇರಿದ ಹಾಗೆ ಪಕ್ಕದಲ್ಲಿ ಸುವರ್ಣಮುಖಿ ಎಂಬ ನದಿಯು ಹರಿಯುತ್ತದೆ. ಈ ನದಿಯ ದಡದಲ್ಲಿ ಚಂದ್ರಮೌಳಿಯನ್ನು (ಶಿವನನ್ನು) ನೀನು ಸೇವಿಸಬಹುದು. ಎಂದು ರಾಮ ಹಂಸಕ್ಕೆ ನಿರ್ದೇಶಿಸುತ್ತಾನೆ.




2024, ಏಪ್ರಿಲ್ 16 ರಿಂದ 25 ರ ವರೆಗೆ
ನಡೆದ ಒಂಟಿಮಿಟ್ಟ ಶ್ರೀ ಕೋದಂಡ ರಾಮ ಸ್ವಾಮಿಯವರ
ಬ್ರಹ್ಮೋತ್ಸವದ ದೃಶ್ಯಮಾಲಿಕೆ

# ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಸೇವಾಗ್ರೇಸರನು - ಶ್ರೀ ಆಂಜನೇಯ ಸ್ವಾಮಿ

"ದೇವಕಾರ್ಯಗಳ ಸಾಧಕರು, ತನ್ನನ್ನು ಭಜಿಸುವ ಭಕ್ತರನ್ನು ರಕ್ಷಿಸುವ ದಾತನೂ
ಶ್ರೀವೇಂಕಟೇಶ್ವರ ಸೇವಾಗ್ರಣಿಯೂ ಶಾಂತರೂಪನೂ ಸರ್ವ ಶರಣ್ಯನೂ ಈ ಆಂಜನೇಯನು!"

ಎಂದು ಅನ್ನಮಯ್ಯನವರು ಕೀರ್ತಿಸಿದ್ದಾರೆ. ಶ್ರೀರಾಮನ ಸೇವೆಯಲ್ಲಿ ನಿರತನಾದ ಸ್ವಾಮಿ, ಕಲಿಯುಗ ವೈಕುಂಠದಲ್ಲಿ ವಿರಾಜಮಾನವಾಗಿದ್ದಾರೆ. ತಿರುಮಲೆ ಕ್ಷೇತ್ರದಲ್ಲಿ ವಿವಿಧ ರೂಪಗಳಲ್ಲಿ ಪೂಜೆಗಳನ್ನು ಸ್ವೀಕರಿಸುತ್ತಾ ದರ್ಶನ ನೀಡುತ್ತಿದ್ದಾರೆ.



## ಶ್ರೀ ಆಜ್ಞಾಪಾಲಕ ಆಂಜನೇಯ ಸ್ವಾಮಿ (ರಾಮುಲವಾರಿ ಮೇಡ)

ತಿರುಮಲೆಯ ಶ್ರೀವೇಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ಶ್ರೀರಾಮುಲವಾರಿ ಮೇಡದಲ್ಲಿ (ಮೂರನೆಯ ಬಾಗಿಲು) ಈ ಆಂಜನೇಯ ಸ್ವಾಮಿಯ ಉತ್ಸವ ಮೂರ್ತಿ ಇದೆ. ಆ ಮೂರ್ತಿಯನ್ನು ಶ್ರೀ ಆಜ್ಞಾಪಾಲಕ ಆಂಜನೇಯಸ್ವಾಮಿ ಎಂದು ಕರೆಯುತ್ತಾರೆ. ಯಾರಾದರೂ ಹಿರಿಯರು ಸಂಭಾಷಿಸುವ ಸಮಯದಲ್ಲಿ ನಮ್ಮ ಬಾಯಿಂದ ಹೊರಬೀಳುವ ಎಂಜಲಿನ ಹನಿಗಳು, ಉಸಿರು ಅವರ ಮೇಲೆ ಬೀಳದಂತೆ ಇರುವುದಕ್ಕೆ ನಮ್ಮ ಬಾಯಿಗೆ ಕೈಯನ್ನು ಅಡ್ಡ ಹಿಡಿದು ನಿಲ್ಲುತ್ತೇವೆ. ಈ ಆಂಜನೇಯ ಸ್ವಾಮಿಯು ಅದೇ ಭಂಗಿಯಲ್ಲಿ ನಿಂತಿದ್ದಾನೆ. ಅಂದರೆ ಶ್ರೀರಾಮಚಂದ್ರನ ಆಜ್ಞೆಯನ್ನು ಶಿರಸಾವಹಿಸುತ್ತಿರುವ ರೂಪವಿದು. ತಿರುಮಲೆಯಲ್ಲಿ ಶ್ರೀರಾಮನವಮಿ, ಶ್ರೀರಾಮ ಪಟ್ಟಾಭಿಷೇಕದೊಂದಿಗೆ ಶ್ರೀರಾಮನಿಗೆ ನಡೆಯುವ ಎಲ್ಲಾ ಪೂಜೆಗಳು, ಉತ್ಸವಗಳ ಸಮಯದಲ್ಲಿ ಸ್ವಾಮಿಯ ಎದಿರಿನಲ್ಲಿ ನಿಂತು ಸ್ವಾಮಿಯ ಮುಂದೆ ನಡೆಯುತ್ತಾ ಭಕ್ತರಿಗೆ ದರ್ಶನವನ್ನು ನೀಡುತ್ತಿದ್ದಾನೆ. ಈ ಸ್ವಾಮಿಯನ್ನು ದರ್ಶಿಸುವುದರಿಂದ ಭಕ್ತರಲ್ಲಿ ವಿನಯ ವಿಧೇಯತೆಗಳು ಬಲಗೊಳ್ಳುತ್ತವೆಂದು ಪ್ರತೀತಿ.

## ಬೇಡಿ ಆಂಜನೇಯಸ್ವಾಮಿ

ಈ ಬೇಡಿ ಆಂಜನೇಯ ಸ್ವಾಮಿಯು ಶ್ರೀನಿವಾಸನ ದೇವಾಲಯದ ಸನ್ನಿಧಿಯ ಬೀದಿಯಲ್ಲಿ ಎತ್ತರವಾದ ಪ್ರದೇಶದಲ್ಲಿ ಕಂಡು ಬರುತ್ತಾನೆ. ವಿನಮ್ರತೆಯಿಂದ ತನ್ನ ಎರಡೂ ಕೈಗಳನ್ನು ಜೋಡಿಸಿ, ಶ್ರೀನಿವಾಸನ ಎದಿರಿನಲ್ಲಿ ಕಂಡು ಬರುವುದು ಈ ಸ್ವಾಮಿಯ ವಿಶಿಷ್ಟತೆ. ಈ ಸ್ವಾಮಿಗೆ ಬೇಡಿಯನ್ನು ತೊಡಿಸಿರುವುದರಿಂದ ಈತನನ್ನು "ಬೇಡಿ ಆಂಜನೇಯಸ್ವಾಮಿ" ಎಂದು ಕರೆಯುತ್ತಾರೆ. ಆದರೆ ಇನ್ನೂ ಕೆಲವು ಮೂಲಗಳ ಪ್ರಕಾರ ಈತ ತುಂಟಾಟ ಮಾಡುತ್ತಿರುವಾಗ ಆತನ ತಾಯಿಯಾದ ಅಂಜನಾದೇವಿಯು ಆತನಿಗೆ ಬೇಡಿಯನ್ನು ತೊಡಿಸಿ ಆ ಭಗವಂತನ ಎದುರು ನಿಲ್ಲಿಸಿದಳೆಂದು ಹೇಳುತ್ತಾರೆ. ಭಗವಂತನಿಗಿಂತಲೂ ಭಕ್ತರು ಶ್ರೇಷ್ಠ! ಆದ್ದರಿಂದಲೇ ಬೆಟ್ಟದ ಮೇಲ್ಭಾಗದಲ್ಲಿ ಭಕ್ತ, ಕೆಳಗಿನ ಭಾಗದಲ್ಲಿ ಭಗವಂತನನ್ನು ಕಾಣಬಹುದು! ಈ ರಹಸ್ಯವನ್ನು ಸ್ಪಷ್ಟವಾಗಿ ಪ್ರಪಂಚಕ್ಕೆ ಸಾರಲೆಂದೇ ಬೇಡಿ ಆಂಜನೇಯಸ್ವಾಮಿ, ಎತ್ತರವಾದ ಪ್ರದೇಶದಲ್ಲಿ ಕಾಣಿಸಿ ಕೊಳ್ಳುತ್ತಾನೆ.






### ಶ್ರೀ ಕೋನೇಟಿಗಟ್ಟು ಆಂಜನೇಯಸ್ವಾಮಿ (ಪುಷ್ಕರಿಣಿಯ ದಡದ ಆಂಜನೇಯಸ್ವಾಮಿ)

ತಿರುಮಲೆಯಲ್ಲಿ ಸ್ವಾಮಿಯವರ ಪುಷ್ಕರಿಣಿಯ ಈಶಾನ್ಯ ಮೂಲೆಯಲ್ಲಿ ಅಂದರೆ ಶ್ರೀ ವರಾಹಸ್ವಾಮಿ ದೇವಾಲಯದ ಎದಿರಿನಲ್ಲಿ ಶ್ರೀಕೋನೇಟಿಗಟ್ಟು (ಪುಷ್ಕರಿಣಿ ದಡದ) ಆಂಜನೇಯ ಸ್ವಾಮಿಯ ಗುಡಿ ಇದೆ. ಇದು ಪುಷ್ಕರಿಣಿಯ ಕಟ್ಟೆಯ ಮೇಲೆ ಇರುವುದರಿಂದ ಆ ಸ್ವಾಮಿಗೆ ಕೋನೇಟಿಗಟ್ಟು ಆಂಜನೇಯಸ್ವಾಮಿ ಎಂಬ ಹೆಸರು ಬಂದಿದೆ. ತೆಲುಗಿನಲ್ಲಿ ಕೋನೇಟಿ ಅಂದರೆ "ಪುಷ್ಕರಿಣಿ" ಎಂದರ್ಥ! ಇಲ್ಲಿ ಆಂಜನೇಯಸ್ವಾಮಿಯ ಪಶ್ಚಿಮಾಭಿಮುಖವಾಗಿ ನಮಸ್ಕಾರದ ಭಂಗಿಯಲ್ಲಿ ದರ್ಶನವನ್ನು ನೀಡುತ್ತಿದ್ದಾನೆ. ಹದಿನಾರನೆಯ ಶತಮಾನದಲ್ಲಿ ಈ ಸ್ವಾಮಿಯನ್ನು ಶ್ರೀವ್ಯಾಸರಾಯರು ಪ್ರತಿಷ್ಠಾಪನೆ ಮಾಡಿದಂತೆ ಸ್ಥಳಪುರಾಣದ ಮೂಲಕ ತಿಳಿದುಬರುತ್ತಿದೆ.

### ಶ್ರೀ ತಲಯೇರುಗುಂಡು (ಬೆಟ್ಟವನ್ನು ಹತ್ತುವ ಅಲಿಪಿರಿಯ ದಾರಿಯಲ್ಲಿ ಕಂಡು ಬರುವ ಮೊದಲನೆಯ ಕಲ್ಲು ಬಂಡೆ)

ಗುಂಡನೆಯ ಆಕಾರವನ್ನು ಹೊಂದಿರುವ ಕಲ್ಲುಬಂಡೆ . ಇದು ದೊಡ್ಡ ತಲೆಯ ಆಕಾರದಲ್ಲಿ ಕಂಡು ಬರುವ ಮೊದಲ ಕಲ್ಲು ಬಂಡೆ ಆದ್ದರಿಂದ ಇದಕ್ಕೆ "ತಲಯೇರು ಗುಂಡು" ಎಂದು ಕರೆಯುತ್ತಾರೆ. ಈ ಕಲ್ಲು ಬಂಡೆಯ ಮೇಲೆ ಆಂಜನೇಯ ಸ್ವಾಮಿಯ ಅಂಜಲಿ ಮುದ್ರೆಯೊಂದಿಗೆ ಕಂಡು ಬರುತ್ತಾರೆ. ಬೆಟ್ಟವನ್ನು ಹತ್ತುವವರು, ಇಳಿಯುವವರು, ಕಾಲುಗಳ ನೋವು ಬರದಂತೆ ಇರಬೇಕೆಂದು ಅಲಿಪಿರಿಯ ಮಾರ್ಗದಲ್ಲಿ ಇರುವ ಈ ಕಲ್ಲು ಬಂಡೆಗೆ ತಮ್ಮ ತಲೆಯನ್ನು ಮತ್ತು ಮೊಣಕಾಲನ್ನು ಅದಕ್ಕೆ ತಗುಲಿಸುತ್ತಾರೆ. ಭಕ್ತರು ಈ ರೀತಿ ಸ್ಪರ್ಶಿಸುತ್ತಿರುವುದರಿಂದ ಚೆನ್ನಾಗಿ ಅರಗಿಹೋಗಿರುವ ಕಲ್ಲುಬಂಡೆಯ ಮೇಲೆ "ಹಳ್ಳ" ದ ಗುರುತುಗಳು ಕಂಡು ಬರುತ್ತವೆ.




ಈ ರೀತಿ ತಿರುಮಲೆಯ ಕ್ಷೇತ್ರದಲ್ಲಿ ಶ್ರೀ ಆಂಜನೇಯ ಸ್ವಾಮಿಯು ಅತ್ಯಂತ ವೈಭವದಿಂದ ವಿರಾಜಮಾನವಾಗಿದ್ದಾನೆ. ಅಂತಹಾ ವೀರ ಹನುಮನನ್ನು ಪ್ರಾರ್ಥಿಸುತ್ತಾ ಶ್ರೀನಿವಾಸನ ದರ್ಶನ ಭಾಗ್ಯವನ್ನು ಕರುಣಿಸು ಎಂದು ಬೇಡಿಕೊಳ್ಳೋಣ.

– ಡಾ|| ಐ.ಎಲ್. ಎನ್. ಚಂದ್ರಶೇಖರರಾವ್
ಅನುವಾದ: ಬಿ. ಪದ್ಮಜ




# 2024, ಜೂನ್ 14ರಂದು ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ ಪುಷ್ಪಯಾಗ ಮಹೋತ್ಸವ

# ಹರಿಕಥಾಮೃತ ಸಾರ ಮಹಿಮೆ ಬಲು ಅಪಾರ

## (ಮಾತೃಕ ಸಂಧಿ)

ಪ್ರಿಯಾ ಪ್ರಾಣೇಶ ಹರಿದಾಸ
80504 36752



ಈ ಸಂಧಿಯು ಭಗವಂತನ ಅನಂತ ರೂಪಗಳು ತತ್ವಭಿಮಾನಿ ದೇವತೆಗಳೊಳಗೆ ನಿಂತು ಸಲಹುವ ಕಾರ್ಯಗಳ ಬಗ್ಗೆ ಹೇಳಿದ್ದಾರೆ, ಉದಾಹರಣೆಗೆ ಹೇಳುವುದಾದರೆ,

ವೈದ್ಯಕೀಯ ಪದ್ಧತಿಯಲ್ಲಿ ದೇಹದ ಪ್ರತಿಯೊಂದು ಭಾಗ ಅಂಗಾಗಕ್ಕೂ ಪರಿಣತಿ ಹೊಂದಿದ ವೈದ್ಯರು ಇರುವಂತೆ ಭಗವಂತ ಮಾನವ ಶರೀರದ ಪ್ರತಿ ಅಂಗಾಂಗದ ಭಾಗಕ್ಕೂ ಅದರದೇ ಆದ ತತ್ವಭಿಮಾನಿ ದೇವತೆ ಇರುವಂತೆ ಮಾಡಿ ಅವರೊಳಗೆ ತಾನಿದ್ದು ನಮ್ಮನ್ನು ಸಲಹುತ್ತಾನೆ. ಮೊದಲ ನುಡಿಯಲ್ಲಿ ಪಾದದಲ್ಲಿಯ ಹರಿಯ ರೂಪಗಳ ಬಗ್ಗೆ ಹೇಳಿದ್ದಾರೆ.

ಅಂದರೆ ಪಾದಕ್ಕೆ ಅಭಿಮಾನಿ ದೇವತೆ ಜಯಂತನ ಅಂತರ್ಗತನಾದ ಸುಮೇಧ ನಾಮಕ ಹರಿ ಹೆಬ್ಬರಳಲ್ಲಿ ವಾಯು ಅಂತರ್ಗತನಾದ ಭಾರಭೃತ ಎಂಬ ಹರಿ ಇದ್ದಾನೆ ಎಂದಿದ್ದಾರೆ.

ವಿಷ್ಣು ಸಹಸ್ರನಾಮದಲ್ಲಿ ಹೇಳಿರುವಂತೆ "ಭಾರಭೃತಕಥಿತೋಯೋಗಿ" ಅಂತ ಹೀಗೆ ಈ ಸಂಧಿಯಲ್ಲಿ ದೇಹದ ಪ್ರತಿ ಅಂಗದ ತತ್ವಭಿಮಾನಿ ದೇವತೆಯನ್ನು ಚಿಂತಿಸಿ ಧ್ಯಾನಿಸುತ್ತ ಶಾಸ್ತ್ರಗಳಾದ 24 ಕೇಶವಾದಿ ನಾಮಗಳನ್ನು ಚಿಂತಿಸುತ್ತಾ ಪುರುಷರು ಮಾತೃಕಾನ್ಯಾಸ ಮಾಡುತ್ತಾ ಗಾಯತ್ರಿ ಮಂತ್ರ ಜಪ ನಿತ್ಯ ಮಾಡಬೇಕು. ಹಾಗೇ ಮಹಿಳೆಯರು ನಿತ್ಯ ಮಾತೃಕಾನ್ಯಾಸ ಮಾಡುತ್ತಾ ಗುರು ಜಪ ಮಂತ್ರ ಮಾಡಿ ತುಳಸಿ ಪೂಜೆ ಮಾಡಬೇಕು. ಇದರಿಂದ ನಮ್ಮ ಕುಕರ್ಮದ ಫಲದಿಂದ ಆಗುವ ನೋವು ಭಾದಕಗಳು ಕಡಿಮೆ ಆಗುತ್ತವೆ.

ಯೋಗದಲ್ಲಿ ಹೇಳಿರುವಂತೆ ನಮ್ಮ ದೇಹದ ಎಲ್ಲ ಅಷ್ಟ ಕಮಲಗಳು ಚಕ್ರಗಳು, ನಾಡಿಗಳು ಹೇಳಿರುವಂತೆ ಶಾಸ್ತ್ರದಲ್ಲಿ ಇದರ ಅಂತರ್ಗತನಾದ ಬೇರೆ ಬೇರೆ ದೇವತೆಗಳು ಹಾಗೂ ಇವರಲ್ಲಿನ ಭಗವಂತನ ಸ್ವರೂಪ ಚಿಂತನೆಯ ಬಗ್ಗೆ ಹೇಳಿದ್ದಾರೆ.

ನಾಭಿಯಲಿ ಷಟ್ಕೋಣ ಮಂಡಲ ದೀ ಭವಿಷ್ಯದ್ಬ್ರಹ್ಮನೊಳು
ಮುಕ್ತಾಭ ಶ್ರೀಪ್ರದ್ಯುಮ್ನ ನಿಪ್ಪನು ವಿಭುಧಗಣ ಸೇವ್ಯ।

ಶೋಭಿಸುತ ಕೌಸ್ತುಭವೆ ಮೊದಲಾದಾಭರಣ ಆಯುಧಗಳಿಂದ ಮಹಾಭಯಂಕರ ಪಾಪಪುರುಷನ ಶೋಷಿಸುವ ನಿತ್ಯ ಇಲ್ಲಿ ಭಗವಂತನ ನಿತ್ಯ ನಾಭಿಯಲ್ಲಿರುವ ಆರು ಮೂಲೆಯ ಮಂಡಲದಲ್ಲಿ ಭಗವಂತನನ್ನು ವರ್ಣಿಸಿದ್ದಾರೆ.

ನಾವು ಯಾರಿಗೋ ದುಷ್ಟ ಜನರಿಗೆ ಪಾಪಿ ಅಂತ ಬಯ್ಯುತ್ತೇವೆ. ಅಂಥವರಲ್ಲಿನ ಪಾಪ ಪುರುಷ ಹೇಗೆ ಇರುತ್ತಾನೆಂದರೆ ಪಾಪ ಪುರುಷ ಬ್ರಹ್ಮ ಹತ್ಯೆಯೇ ತಲೆ, ಬಂಗಾರ ಕಳ್ಳತನ, ಎರಡು ತೋಳುಗಳೇ ಸುರಪಾನ, ಅವನ ಹೃದಯ ಗುರುತಲ್ಪಗಮನ ಅವನ ಎರಡು ತೊಡೆಗಳು, ಮಹಾಪಾತಕಿಗಳ ಸಹವಾಸವೇ ಎರಡು ಪಾದ ಪಾಪಗಳು ಅವನ ಅವಯವಗಳು ಸಣ್ಣ ಪಾಪಗಳು ಅವನ ಕೂದಲು ಕೆಂಪಾದಕಣ್ಣು, ಕಳೆ ಕುಂದಿದ ಬಾಗಿದ

ಮುಖ ಇಂತಹ ಪಾಪ ಪುರುಷನನ್ನು ಪುರುಷರು ಗಾಯತ್ರಿ ಮಂತ್ರ ಮಾಡುವಾಗ ಮತ್ತು ಹೆಂಗಳೆಯರು ಗುರುಮಂತ್ರ ಮಾಡುವಾಗ ಶ್ವಾಸೋಚ್ಛ್ವಾಸದ ಕುಂಭಕ ರೇಚಕ ಮಾಡುವು ದರ ವಾಯು ಬೀಜದಿಂದ ಶೋಷಿಸಿ ಅಗ್ನಿ ಬೀಜದಿಂದ ಸುಡ ಬೇಕು. ವರುಣ ಬೀಜದಿಂದ ಶುದ್ಧರಾಗಬೇಕು. ಹೀಗೆ ನಮ್ಮ ಪಾಪಪುರುಷನನ್ನು ಕಳೆದುಕೊಳ್ಳಬೇಕು.

ಹಾಗೇ ಭಗವಂತ ಹಗಲು ರಾತ್ರಿ ನಮ್ಮೊಳಗೇ ಇದ್ದು ನಿಯ ಮನ ಮಾಡುತ್ತಿರುತ್ತಾನೆ. ಹೃದಯದ ಅಷ್ಟದಳದ ಕಮಲದಲ್ಲಿ ಪ್ರಾದೇಶ ನಾಮಕನಾಗಿ ಇರುವನು. ಇನ್ನು ಕಣ್ಣಿನಲ್ಲಿ ಸಪ್ತ ಋಷಿಗಳ ಮೂಲಕ ಕಪಿಲ ನಾಮಕನಾಗಿ ಕಾರ್ಯ ಮಾಡು ತ್ತಾನೆ. ಬಲಕಿವಿಯಲ್ಲಿ ಗಂಗಾಜನಕನಾದ ತ್ರಿವಿಕ್ರಮ ರೂಪಿ ಭಗವಂತ ತೀರ್ಥಾಭಿಮಾನಿ ದೇವತೆಗಳಲ್ಲಿ ನಿಂತು ನಮ್ಮನ್ನು ಉದ್ಧರಿಸುತ್ತಾನೆ. ಅದಕ್ಕೆ ಪುರುಷರು ಶೌಚಕ್ಕೆ ಹೋಗ ಬೇಕಾ ದರೆ ಯಜ್ಞೋಪವೀತ ಬಲ ಕಿವಿಗೆ ಹಾಕಿಕೊಳ್ಳಬೇಕು. ಆಚ ಮನ ಮಾಡಬೇಕಾದರೆ ಬಲ ಕಿವಿಯನ್ನು ಹಿಡಿದು ಆಚಮನ ಮಾಡಬೇಕು.

ಮನಸ್ಸಿನ ತತ್ವಾಭಿಮಾನಿ ದೇವರು ರುದ್ರದೇವರು. ವಿಶ್ವ ತೈಜಸ ಪ್ರಾಜ್ಞ ತುರ್ಯ ನಾಮಕನಾಗಿ ಕಾರ್ಯನಿರ್ವಹಿಸಿ ಭೋಗಗಳನ್ನು ಕೊಡುತ್ತಾನೆ.ಇನ್ನು ಅನೇಕ ಇಂದ್ರೀಯಗಳಾದ ನಾಲಿಗೆ, ಗಂಟಲು, ಕೂದಲು, ಉಗುರು, 32 ಸಾವಿರ ನಾಡಿ ಗಳಲ್ಲಿ ಕಲಶಗತ ರೂಪ, ಬ್ರಾಹ್ಮಣರಲ್ಲಿ ಭಗವಂತನನ್ನು ಕಾಣ ಬೇಕು. ಪ್ರಧಾನವಾದ 101 ನಾಡಿಗಳಲ್ಲಿ ಗಂಗಾದಿ ಸಕಲ ನದಿ ಅಭಿಮಾನಿ ದೇವತೆಗಳ ಅಂತರ್ಗತವಾಗಿ ಶ್ರೀ ಹರಿಯು ಇರು ತ್ತಾನೆ. ಜ್ಞಾನಿಗಳು ಮತ್ತು ಯತಿಗಳು ನಿತ್ಯ ಚಿಂತನೆ ಮಾಡಿರು ತ್ತಾರೆ.

"ಅಬ್ದಯನ ಋತು ಮಾಸ ಪಕ್ಷ ಸ
ಶಬ್ದದಿಂದಲಿ ಕರೆಸುತಲಿ ನೀ ಲಾಬ್ದ
ವರ್ಣನಿರುದ್ಧ ಮೊದಲಾದೈದು ರೂಪದಲಿ।
ಹಬ್ಬಿಹನು ಸರ್ವತ್ರದಲಿ ಕರುಣಾಬ್ಧಿ
ನಾಲ್ವತ್ತೈದು ರೂಪದಿ ಲಭ್ಯನಾಗುವನೀ
ಪರಿ ಧೇನಿಸುವ ಭಕುತರಿಗೆ"

ಕಾಲದಲ್ಲಿಯೂ ಇದ್ದು ವರ್ಷ, ಅಯನ, ಋತು ಮಾಸ, ಪಕ್ಷ, ದಿನ ಅನಿರುದ್ಧ ರೂಪದಿಂದ ಇದ್ದು ನಿಯಮನ ಮಾಡು ತ್ತಾನೆ. ನಿತ್ಯವೂ ತ್ರಿವಿಧ ತಾಪತ್ರಯಾಗಳಾದ ಆಧ್ಯಾತ್ಮಿಕ, ಆಧಿ ಭೌತಿಕ, ಆಧಿದೈವಿಕ ತಾಪತ್ರಯಗಳ ದೋಷ ಕಡಿಮೆ ಆಗುತ್ತದೆ.

ಭಗವಂತನ ಗುಣಗಳನ್ನು ತಿಳಿಯಲು ಅವನ ವಕ್ಷಸ್ಥಳ ವಾಸಿಯಾದ ಲಕ್ಷ್ಮಿಗೆ ತಿಳಿಯಲಾಗುವುದಿಲ್ಲ. ನಮ್ಮಂತಹ ಪಾಮ ರರಿಗೆ ಆಗುವುದಿಲ್ಲ ಎಂದರ್ಥ.

ಹಾಗೆಯೇ ಹಾಲು, ಮೊಸರು, ಬೆಣ್ಣೆ, ತುಪ್ಪ ಎಲ್ಲದರಲ್ಲಿಯೂ ಸೌರಭ ರೂಪದಲ್ಲಿ ಅನಿರುದ್ಧ ರೂಪನಾಗಿ ಇಚ್ಛಾಶಕ್ತಿ, ರುದ್ಧ ಜ್ಞಾನಶಕ್ತಿ, ಕ್ರಿಯಾ ಶಕ್ತಿಯಲ್ಲದ್ದು ಸಲಹುತ್ತಾನೆ.

8ವಸುಗಳು,9 ಪ್ರಜಾಪತಿಗಳು,50 ಮರುದ್ಗಣ,11 ಆದಿ ತ್ಯರು,ರುದ್ರರರು,ಅಶ್ವಿನಿದೇವತೆಗಳು ಹೀಗೆ 90 ಜನರಲ್ಲಿ ಗರುಡ, ಸಮೀರ,ಗರುಡ, ಶೇಷರ ಮೂಲಕ ಅನಿರುದ್ಧದಿರೂಪಗ ಳಿಂದ ಹರಿಯು ಇರುತ್ತಾನೆ. ಸಂಧ್ಯಾವಂದನೆಯಲ್ಲಿ ಬಳಸುವ ಪಂಚ ಮುದ್ರೆಗಳಾದ ಚಕ್ರ, ಶಂಖ, ಗಧೆ, ಪದ್ಮ ನಾರಾ ಯಣ ಪಂಚ ನಾಮರೂಪಗಳಾದ ಹಿಂಕಾರ ಪ್ರತಿಹಾರ,ನಿಧನ ಪ್ರಸ್ಥಾವ, ಉದ್ಗೀತನಾಗಿ ಇರುತ್ತಾನೆ. ದೇಹವೆಂಬ ರಥದಲ್ಲಿ ವಾಗಭಿಮಾನಿಯಾದ ಪಾರ್ವತಿ ಹಗ್ಗ ಕಿವಿಯಲ್ಲಿರುವ ರೋಹಿಣಿ ಶಶಾಂಕರು ಪಾಶಗಳನ್ನು ಹಿಡಿದಿರುತ್ತಾರೆ. ಕಣ್ಣಿನಲ್ಲಿ ರುವ ಸೂರ್ಯ ಸಂಜ್ಞೆಯರು ಕುದುರೆಗಳಾಗಿ ಶಿವನು ಸಾರಥಿ ಯಾಗಿರುತ್ತಾನೆ. ಓಂಕಾರನಾದ ಹರಿಯೇ ರಥಿಕನಾಗಿರು ತ್ತಾನೆ.

ಹಣ, ದೇಹ, ಮನೆ, ಹೆಂಡತಿ ಮಗ, ಸ್ನೇಹಿತರು ಎಲ್ಲರ ಲ್ಲಿಯೂ ಹರಿಯೇ ಇದ್ದು ಕಾರ್ಯ ಕಾರಣನಾಗಿರುತ್ತಾನೆ. ಹೀಗಾಗಿ ಸಕಲವೂ ಹರಿಗೆ ಸಮರ್ಪಿತ ಎಂದು ತಿಳಿಯ ಬೇಕು.

**ಕೊನೆಯ ನುಡಿಯಲ್ಲಿ**

ದೇವ ದೇವೇಶನ ಸುಮೂರ್ತಿ ಕಳೇವರಗಳೊಳಗನವರತ
ಸಂಭಾವಿಸುತ ಪೂಜಿಸುತ ನೋಡುತ ಸುಖಿಸುತ್ತಿರುವ
ಬಿಡದೆ।

ಶ್ರೀವರ ಜಗನ್ನಾಥವಿಠಲನು ತಾ ಒಲಿದು ಕಾರುಣ್ಯದಲಿ ಭವ ನೋವ ಪರಿಹರಿಸುವನು ಪ್ರವಿತ್ರತೆ ಪತಿತಪಾವನನು "ಅಣು ತೃಣಾದಿಗಳಲ್ಲಿ ವ್ಯಾಪ್ತಿನಾದ ಭಗವಂತನನ್ನು ಚಿಂತಿ ಸುತ ನಡೆದರೆ ಇಹಪರದಲ್ಲಿ ಸುಖ ಕಾಣುತ್ತೇವೆ.

- ಮುಂದುವರೆಯುತ್ತದೆ.



# ಮಹಾಕ್ಷಾತ್ರೆ ವಿದುಲೆ

– ಡಾ॥ ವಾಣಿಶ್ರೀ ಬಿ. ಎಮ್.
94803 22475

ಮಹಾಭಾರತದ ಉದ್ಯೋಗಪರ್ವದಲ್ಲಿ ಶ್ರೀಕೃಷ್ಣನು ಸಂಧಾನಾರ್ಥವಾಗಿ ಹಸ್ತಿನಾವತಿಗೆ ಬರುತ್ತಾನೆ. ಸಂಧಾನ ವಿಫಲವಾಗಿ ಶ್ರೀಕೃಷ್ಣನು ಹಿಂದಿರುಗುವ ಸಮಯದಲ್ಲಿ ತನ್ನ ಸೋದರತ್ತೆ ಕುಂತಿಯನ್ನು ಭೇಟಿಯಾಗಿ ಪಾಂಡವರಿಗೆ ಆಕೆಯ ಸಂದೇಶವೇನೆಂದು ಕೇಳುತ್ತಾನೆ. ಆಗ ಕುಂತಿಯು ರಾಜಧರ್ಮವನ್ನು ಹೇಳಿ ಅದನ್ನು ಯುಧಿಷ್ಠಿರನಿಗೆ ಹೇಳಲು ತಿಳಿಸುತ್ತಾಳೆ. ಪ್ರಾಜ್ಞೆ ಳಾದ ಕುಂತಿ ವಿಶದಪಡಿಸುವ ರೀತಿ ಅದ್ಭುತ ವಾಗಿದೆ. ರಾಜನ ಕರ್ತವ್ಯಗಳು, ಪ್ರಜಾಪಾಲ ನೆಯ ರೀತಿನೀತಿಗಳು. ದಂಡನೀತಿ ಮೊದಲಾದ ವಿಚಾರಗಳಲ್ಲಿ ಅವಳ ಪ್ರಜ್ಞೆ ಅಮೋಘವಾದುದು "ರಾಜ ಕಾಲಸ್ಯ ಕಾರಣಂ" ಎನ್ನು ತ್ತಾಳೆ. ಹೀಗೆ ರಾಜಧರ್ಮವನ್ನು ವಿವರಿಸುವಾಗ ವಿದುಲೆ ಎಂಬ ಚಕ್ರವರ್ತಿನಿಯ ಉಪಾಖ್ಯಾನವನ್ನು ಕುಂತಿ ಶ್ರೀಕೃಷ್ಣನ ಮೂಲಕ ಯುಧಿಷ್ಠರನಿಗೆ ತಲುಪಿಸು ತ್ತಾಳೆ.

ತಾಯಿಯಾದವಳು ಮೊದಲ ಗುರುವಾಗಿ ರುತ್ತಾಳೆ. ಮಕ್ಕಳನ್ನು ಧರ್ಮ, ಸತ್ಯ, ಪ್ರಾಮಾಣಿ ಕತೆ ಹಾಗೂ ಋಜುತ್ವದ ಮಾರ್ಗದಲ್ಲಿ ನಡೆಸುವಲ್ಲಿ ಆಕೆಯ ಪಾತ್ರ ಅತ್ಯಂತ ಮಹತ್ವದ್ದು. ಕುಂತಿ ಹೇಳುವ ವಿದುಲೆಯ ಪಾತ್ರ ಮಗನಿಗೆ ಸ್ಫೂರ್ತಿ ತುಂಬಿ ಗೆಲುವನ್ನು ದೊರಕಿಸಿಕೊಡುವ ಒಂದು ಪಾತ್ರ.

ವಿದುಲೆ ಎಂಬ ಚಕ್ರವರ್ತಿನಿಯು ಯಶಸ್ವಿನಿಯೂ, ಕೋಪಿಷ್ಠಳೂ ಸತ್ಕುಲಪ್ರಸೂತಳೂ ಆಗಿದ್ದಳು. ತೇಜಸ್ಸಿನಿಂದ ಕೂಡಿದ ಆಕೆ ಜಿತೇಂದ್ರಿಯ ಳಾಗಿ ಕ್ಷಾತ್ರಧರ್ಮರತಳಾಗಿದ್ದಳು. ಅನೇಕ ಶಾಸ್ತ್ರಗಳಲ್ಲಿ ಪಾರಂಗಳಾಗಿದ್ದಳು. ಮಹಾಪುರುಷರಿಂದ ಉಪದೇಶಗಳನ್ನು ಪಡಿದಿದ್ದಳು. ಆಕೆಯ ಮಗನು ಸಿಂಧುರಾಜನಿಂದ ಪರಾಜಿತನಾಗಿ ದೀನನಾಗಿ ಮಲಗಿದ್ದನು.ಅವನಲ್ಲಿನ ಕ್ಷಾತ್ರತೇಜವನ್ನು ಉದ್ದೀಪಿಸುವ ಸಲುವಾಗಿ ಆಕೆ ಮಗನನ್ನು ಬಹುವಾಗಿ ನಿಂದಿಸಿದಳು. ಮೊದಲೇ ಸೋತು ಬಂದಿದ್ದ ಮಗನು ತಾಯಿಯ ಮಾತು ಗಳಿಗೆ ಲಕ್ಷ್ಯ ಕೊಡದೆ ಮಲಗಿಯೇ ಇದ್ದನು. ಆಗ ವಿದುಲೆಯು,

ಉತ್ತಿಷ್ಠೇಹೇ ಕಾಪುರುಷ ಮಾ ಶೇಷ್ವೈವಂ ಪರಾಜಿತಃ

ಅಮಿತ್ರಾನ್ನನ್ದಯನ್ಸರ್ವಾನ್ನಿರ್ಮಾನೋ ಬನ್ಧು ಶೋಕದಃ॥

ಎಂದು ಶತೃಗಳಿಗೆ ಆನಂದದಾಯಕನಾಗಿದ್ದೀಯೆ ಎಂದು ಗರ್ಜಿಸಿ ದಳು. ಸಮಯ ಸಾಧಿಸಿ ಶತೃವಿಗೆ ಪರಾಕ್ರಮವನ್ನು ತೋರಿಸಬೇಕು. ಶತೃವಿನ ಸಮೀಪದಲ್ಲಿಯೇ ಸಂಚರಿಸುತ್ತಿದ್ದು ಅವನಿಗೆ ತಿಳಿಯದ ಹಾಗೆ ಅವನ ಲೋಪದೋಷಗಳನ್ನು ಅರಿತು ಸಮಯ ಕಾದು ರಣರಂಗದಲ್ಲಿ ಎದುರಿಸಬೇಕು ಎನ್ನುತ್ತಾಳೆ.

ಕ್ಷತ್ರಿಯ ಕುಲದಲ್ಲಿ ಹುಟ್ಟಿ ದೀನನಾಗಿರಬಾರದು. ಸಾಮದಾನೋ ಪಾಯಗಳು ಮಧ್ಯಮ, ಭೇದೋಪಾಯವು ಅಧರ್ಮವಾದುದು. ಕಡೆಯ ದಂಡೋಪಾಯವೇ ಪರಮ ಶ್ರೇಷ್ಠವಾದುದು. ವೀರಕ್ಷತ್ರಿಯ ಎಂಬ ಕೆಚ್ಚೆದೆ

ಯಿಂದ ಯುದ್ಧಮಾಡಬೇಕು ಎಂದು ಹಲವಾರು ಉಪಮೆ ಗಳನ್ನು ನೀಡಿ ಪರಾಕ್ರಮಿಯಾಗಿ ಗೆಲ್ಲಲಾಗದಿದ್ದರೆ ಸತ್ತು ಹೋಗು ಎನ್ನುತ್ತಾಳೆ. ತಾಯಿಯಾದವಳಿಗೆ ಮಕ್ಕಳ ಔನ್ನತ್ಯವೇ ಗುರಿ ಮತ್ತು ಜೀವವೇ ಶ್ರೇಷ್ಠ ಹಾಗಿದ್ದೂ ಈಕೆ ಮಗನನ್ನು ಸತ್ತು ಹೋಗು ಎನ್ನುತ್ತಾಳೆ ಎಂದರೆ ಕ್ಷಾತ್ರಧರ್ಮದೆಡೆಗೆ ಆಕೆ ಗಿದ್ದ ಗೌರವ ಭಕ್ತಿಗಳು ವ್ಯಕ್ತವಾಗುತ್ತವೆ.

ಮುಂದುವರಿದು ಆಕೆ ಕ್ಷಾತ್ರ ಧರ್ಮವನ್ನು ವಿವರಿಸು ತ್ತಾಳೆ. ಚಿರಕಾಲ ಅಗ್ನಿಯನ್ನಿಟ್ಟುಕೊಂಡು ಹೊಗೆಯಾಡುವುದ ಕ್ಕಿಂತಲೂ ಭಗ್ಗನೆ ಉರಿದು ಹೋಗುವುದೇ ಮೇಲು. ರಣರಂಗ ದಲ್ಲಿ ವೀರ-ಶೌರ್ಯ ಪರಾಕ್ರಮಗಳಿಂದ ಯುದ್ಧ ಮಾಡಿ ಪ್ರಾಣ ಬಿಡುವುದೇ ಶ್ರೇಯಸ್ಕರ. ಕ್ಷತ್ರಿಯನು ಉತ್ತಮನಾಗಿ ಶತ್ರುವಿ ನೊಡನೆ ಕಾದಾಡಿದರೆ ಮಾತ್ರ ಆತ ಕ್ಷತ್ರಿಯ ಧರ್ಮದ ಋಣ ದಿಂದ ಮುಕ್ತನಾಗುವನು. ಮಗನನ್ನು ನಪುಂಸಕ,ಹೇಡಿ ಶತ್ರು ವಿಗೆ ಹೆದರುವ ಪುಕ್ಕಲ ಎಂದೆಲ್ಲ ನಿಂದಿಸುತ್ತಾಳೆ.

ಮನುಷ್ಯನಾಗಿ ಹುಟ್ಟಿದ ಮೇಲೆ ಕೀರ್ತಿವಂತನಾಗ ಬೇಕು. ದಾನಶೀಲನಾಗಬೇಕು, ತಪಸ್ವಿ, ಸತ್ಯಸಂಧ, ವಿದ್ಯಾ ವಂತ, ಪಂಡಿತ, ಶಾಸ್ತ್ರಕೋವಿದ,ಎಂಬ ಹೆಸರನ್ನು ಗಳಿಸ ಬೇಕು. ಅಂತಹವನು ಮಾತ್ರವೇ ತಾಯಿಗೆ ನಿಜವಾದ ಅರ್ಥ ದಲ್ಲಿ ಮಗನೆನಿಸುವನು.ಕೋಪರಹಿತನಾಗಿ,ನಿರ್ವೀರ್ಯ ನಾದ, ಶತ್ರುಗಳಿಗೆ ಆನಂದದಾಯಕನಾದ ಇಂತಹ ಪುತ್ರನನ್ನು ಯಾವ ತಾಯಿಯೂ ಪ್ರಸವಿಸದಿರಲಿ ಎನ್ನುತ್ತಾಳೆ.

ಶೂರನಾಗಿ ಪರಾಕ್ರಮವುಳ್ಳವನು ಯುದ್ಧದಲ್ಲಿ ಪ್ರಾಣ ತ್ಯಾಗ ಮಾಡಿದರೂ ಪ್ರಜೆಗಳು ಸುಖದಿಂದಿರುತ್ತಾರೆ. ತಾಯಿಯ ನಿಂದನೆಯ ಮಾತುಗಳನ್ನು ಕೇಳಿ ಸಂಜಯನು ತಡೆಯಲಾಗದೆ "ಮನುಷ್ಯ ಪ್ರಾಣದಿಂದ ಉಳಿದರೆ ತಾನೆ ಯುದ್ಧ ಮಾಡುವುದು ಶತ್ರುಗಳನ್ನು ಪರಾಜಿತಗೊಳಿಸುವುದು" ಎಂದಾಗ. ವಿದುಲೆಯು ಮಾಡುವ ಕೆಲಸವನ್ನು ಏನವಸರ ಎಂದು ಮುಂದಕ್ಕೆ ಹಾಕುವ ಹೇಡಿಯಂತೆ ತಲೆಮೇಲೆ ಕೈ ಹೊತ್ತು ಕುಳಿತುಕೊಳ್ಳುವ ಹೇಡಿ ಗಳಿಗೆ ಸುಲೋಕಗಳು ದೊರೆಯುವುದಿಲ್ಲ. ಸೋಮಾರಿ ಯಾಗದೆ ಕಾರ್ಯಶೀಲನಾದಲ್ಲಿ ಮಾತ್ರ ಜಯ ಲಭಿಸುತ್ತದೆ ಎಂದು ಮಗನಿಗೆ ಸ್ಫೂರ್ತಿಯ ಮಾತುಗಳಿಂದ ಪ್ರಚೋದಿಸಿ.

ಸಂಜಯೋ ನಾಮತಶ್ಚ ತ್ವಂ ನ ಚ ಪಶ್ಯಾಮಿ ತತ್ತ್ವಯಿ।
ಅನ್ವರ್ಥನಾಮಾ ಭವ ಮೇ ಪುತ್ರ ಮಾ ವ್ಯರ್ಥನಾಮಕಃ॥

ಸಂಜಯ ಎಂದರೆ 'ಚೆನ್ನಾಗಿ ಜಯಿಸು' ಆ ಹೆಸರನ್ನು ಅನ್ವರ್ಥಗೊಳಿಸು ವ್ಯರ್ಥನಾಮನಾಗಬೇಡ ಎಂದು ಬುದ್ಧಿ ಹೇಳುತ್ತಾಳೆ. ಕ್ಷತ್ರಿಯ ಧರ್ಮವನ್ನು, ವೀರನ,ಶೌರ್ಯ,ಪರಾ ಕ್ರಮಗಳ ಮಹತ್ವವನ್ನು ಪರಿಪರಿಯಾಗಿ ತಿಳಿ ಹೇಳುತ್ತಾಳೆ. ಪೌರುಷವೆಂದರೆ ಸರ್ವಕಾಲದಲ್ಲಿಯೂ ಸಿದ್ಧನಾಗಿ ವಿಜಯದ ಸಿದ್ಧಿಗಾಗಿ ಮಾಡುವ ಉದ್ಯೋಗವಾಗಿದೆ ಎಂದು ಹೇಳಿದಾಗ ಮಗ ಸಂಜಯನು ತಾಯಿಗೆ ಅವಳ ಹೃದಯವು ಕಬ್ಬಿಣದ ಗುಂಡಿನದ್ದಾಗಿರಬೇಕ.

ತಾಯಿಯಾಗಿದ್ದೂ ಆಕೆ ನಿಷ್ಕರುಣಿಯಾಗಿದ್ದಾಳೆ. ಬುದ್ಧಿ ಯೇನೋ ವೀರರಿಗೆ ತಕ್ಕುದಾಗಿದೆ. ಕುಪಿತಳಾಗಿ ಮಗನೆಂಬು ದನ್ನು ಮರೆತು ಮಾತನಾಡುತ್ತಿರುವಳು ಎನ್ನುತ್ತಾನೆ. ಆಗ ಮಗ ನಿಗೆ ತತ್ಕಾಲಕ್ಕೆ ಸಿಂಧುರಾಜನೊಡನೆ ಸಂಧಿ ಮಾಡಿಕೊಂಡು ಅವನ ಶತ್ರುಗಳನ್ನು ಮಿತ್ರರಾಗಿಸಿಕೊಂಡು, ಪಕ್ಷ ಬಲಪಡಿಸಿ ಕೊಂಡು ನಂತರ ಅವನ ವಿರುದ್ಧ ವಿಜಯ ಸಾಧಿಸು ಎಂಬ ನೀತಿಯನ್ನು ಉಪದೇಶಿಸುತ್ತಾಳೆ. ತಾಯಿಯ ಪ್ರಚೋದಕ ವಾದ ನುಡಿಗಳಿಂದ ಪ್ರಭಾವಿತನಾಗಿ ಸಂಜಯನು ತನ್ನ ಆಲಸ್ಯವನ್ನು ಬಿಟ್ಟು ಕಾರ್ಯೋನ್ಮುಖನಾದನು. ತಾಯಿಯು ತನಗೆ ಮಾರ್ಗದರ್ಶಕಳಾಗಿ ಶಿಕ್ಷಕಳಾಗಿ, ಭವಿಷ್ಯತ್ತಿನ ವೈಭವ ಸಂಪಾದನೆಗೆ ಹೇತುವಾಗಿರುವ ವಿಚಾರದಿಂದ ಅತ್ಯಂತ ಧೈರ್ಯ ತಾಳಿ,ಶತ್ರುಗಳನ್ನು ಜಯಿಸಿ ರಾಜ್ಯವನ್ನು ಮರಳಿ ಸಂಪಾದಿಸಿದನು. ಈ ಕತೆಯನ್ನು ಕೃಷ್ಣನಿಗೆ ಹೇಳಿ, ಪಾಂಡ ವರಿಗೆ ತನ್ನ ಮನದ ಅಭೀಷ್ಟವನ್ನು ತಿಳಿಸಿ, ಆ ಮೂಲಕ ಕ್ಷತ್ರಿಯ ಧರ್ಮಪಾಲನೆ ಮಾಡಲು ಉಪದೇಶಿಸಿದಳು.

ಪುತ್ರವ್ಯಾಮೋಹದಿಂದ ಮಗನ ಜೀವವನ್ನೇ ಶ್ರೇಷ್ಠ ಎಂದು ತಿಳಿಯದೆ, ಅವನ ಅಭಿವೃದ್ಧಿಗೆ ಅವನನ್ನು ನಾನಾ ರೀತಿ ನಿಂದಿಸಿ, ಪ್ರಚೋದಿಸಿ ಅಭ್ಯುದಯದ ಹಾದಿ ತೋರು ವುದೇ ನಿಜವಾದ ಮಾತೃತ್ವ.

# ಆರೋಗ್ಯ ಸಂರಕ್ಷಣೆಯಲ್ಲಿ ಕರಿಬೇವು



- ಮೂಲ :
**ಡಾ॥ ಮಧುಸೂದನ ಶರ್ಮ**
ಅನುವಾದ :
**ಡಿ.ಎಸ್. ಬದ್ರಿನಾಥ್**

ನಮ್ಮ ದೈನಂದಿನ ಜೀವನದಲ್ಲಿ ಆಹಾರ ಪದಾರ್ಥಗಳ ಪಾಕಶಾಲಾ ಪದಾರ್ಥಗಳ ತಯಾರಿಕೆಗಳಲ್ಲಿ ರುಚಿಗೆ ಹಾಗೂ ಘಮಘಮವೆನ್ನುವ ಸುವಾಸನೆಗಾಗಿ ಕರಿಬೇವನ್ನು ಉಪಯೋಗಿಸುವುದು ಎಲ್ಲರಿಗೂ ತಿಳಿದಿರುವುದೇ, ಕರಿಬೇವು ಆಹಾರ ದ್ರವ್ಯವೊಂದೇ ಅಲ್ಲ, ಅತ್ಯುತ್ತಮವಾದ ಔಷಧ ಗುಣಗಳು ಕೂಡಾ ತನ್ನಲ್ಲಿ ನಿಕ್ಷೇಪ ಮಾಡಿಕೊಂಡ ದಿವ್ಯವಾದ ಔಷಧ ದ್ರವ್ಯವೂ ಕೂಡಾ ಹೌದು. 'ರೂಟೇಸಿ' ಎಂಬ ಸಸ್ಯ ಕುಟುಂಬಕ್ಕೆ ಸೇರಿದ ಈ ಕರಿಬೇವಿನ ಶಾಸ್ತ್ರೀಯ ನಾಮಧೇಯ ಮುರ್ರಯ ಕೊನಿಗಿ, ಆಂಗ್ಲ ಭಾಷೆಯಲ್ಲಿ ಕರಿಬೇವನ್ನು "ಕರಿಲೀವ್ಸ್" ಎಂದು ಸಂಬೋಧಿಸುತ್ತಾರೆ.

ನಿತ್ಯ ಜೀವನದಲ್ಲಿ ನಾವು ಎದುರಿಸುವ ಸರ್ವೇಸಾಧಾರಣ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಕರಿಬೇವನ್ನು ಹೇಗೆ ಸದ್ವಿನಿಯೋಗ ಮಾಡಿಕೊಳ್ಳಬಹುದು ಎಂಬುದನ್ನು ಪ್ರಸ್ತುತ ತಿಳಿದುಕೊಳ್ಳೋಣ.

### ಕಲೆ ಅಥವಾ ಬಿಳಿಮಚ್ಚೆಗಳು ಕಡಿಮೆಯಾಗಲು:

ಕರಿಬೇವಿನ ಪುಡಿ ಆಯುರ್ವೇದ ಔಷಧಾಲಯಗಳಲ್ಲಿ ದೊರಕುವ ಸುಗಂಧಿ ಪಾಲ ಪುಡಿ, ಕಾಡುಗರುಗ (ಭೃಂಗರಾಜ) ಪುಡಿ, ಸ್ಫಟಿಕ ಬೆಲ್ಲದ ಪುಡಿ ಸಮಾನವಾಗಿ ಕಲಿಸಿಟ್ಟುಕೊಂಡು ಬೆಳಗ್ಗೆ, ಸಾಯಂಕಾಲ ಬಾರಿಯೊಂದಕ್ಕೆ 2-3 ಗ್ರಾಂ ಸೇವಿಸುತ್ತಿದ್ದರೆ ಚರ್ಮಕ್ಕೆ ಬಣ್ಣ ಕೊಡುವ ಮೆಲಾನಿನ್ ಎಂಬ ರಂಜಕ ಪದಾರ್ಥ ಉತ್ಪತ್ತಿಯಾಗಿ ಆ ಸಮಸ್ಯೆ ಕಡಿಮೆಯಾಗುವುದು.

### ಕೈಕಾಲು ಉರಿ, ಜೋಮಿನ ಸಮಸ್ಯೆಗೆ

ಕರಿಬೇವು ಪುಡಿ, ಜೀರಿಗೆಯನ್ನು ಹುರಿದು ಕುಟ್ಟಿದ ಪುಡಿ, ಶುಂಠಿ ಪುಡಿಯನ್ನು ಸಮಾನವಾಗಿ ಕಲಿಸಿಟ್ಟುಕೊಂಡು ದಿನಕ್ಕೆರಡು ಬಾರಿ, ಬಾರಿಯೊಂದಕ್ಕೆ ಕಾಲು ಟೀ ಸ್ಪೂನ್‌ನಿಂದ ಅರ್ಧ ಟೀಸ್ಪೂನ್‌ವರೆಗೆ ತಕ್ಕಷ್ಟು ಜೇನನ್ನು ಕಲಿಸಿ, ಶುಗರ್ ವ್ಯಾಧಿಗ್ರಸ್ತರಾಗಿದ್ದಲ್ಲಿ 50 ಮಿ.ಲೀ ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಒಳ್ಳೆಯ ಫಲಿತಾಂಶಗಳನ್ನು ಕಾಣಬಹುದು.

### ರಕ್ತ ಪರಿಚಲನೆ ನಿಯಂತ್ರಣಕ್ಕೆ

ಕರಿಬೇವು, ತುಲಸಿ, ಪುದೀನ, ಜೀರಿಗೆಯನ್ನು ಕಲಿಸಿ ಪುಡಿಮಾಡಿದ ಚೂರ್ಣ, ಕೊತ್ತಂಬರಿ ಬೀಜದ ಪುಡಿಯನ್ನು ಸಮಾನವಾಗಿ ಕಲಿಸಿಟ್ಟುಕೊಂಡು ಬೆಳಗ್ಗೆ ರಾತ್ರಿ ಆಹಾರದ ನಂತರ ಬಾರಿಯೊಂದಕ್ಕೆ 50 ಮಿ.ಲೀ. ನೀರಿನಲ್ಲಿ ಒಂದು ಟೀ ಸ್ಪೂನ್ ಪುಡಿ ಕಲಿಸಿ ಸೇವಿಸುತ್ತಿರಬೇಕು. ಈ ಔಷಧದ ಸೇವನೆಯಿಂದ ರಕ್ತ ಪರಿಚಲನೆಯಿಂದುಂಟಾಗುವ ತಲೆನೋವು, ತಲೆಸುತ್ತು ಪೈತ್ಯ ವಿಭೇದಗಳು ಸಹಾ ತಗುತ್ತವೆ.

### ಹಸಿರು ವಾಂತಿಗೆ:

25 ಗ್ರಾಂ ಕಾಳುಮೆಣಸನ್ನು 2-3 ಗಂಟೆಗಳ ಕಾಲ ಸುಣ್ಣದ ನೀರಿನಲ್ಲಿ ನೆನೆಸಿ ತೆಗೆದು ಒಣಗಿಸಿ ಚೂರ್ಣಮಾಡಿ ಅದರಲ್ಲಿ 25 ಗ್ರಾಂ ಕರಿಬೇವು ಪುಡಿ ಕಲಿಸಿ ತಕ್ಕಷ್ಟು ನಿಂಬೆ ರಸದಲ್ಲಿ ನಾದಿ ಶೇಂಗಾ ಬೀಜದಷ್ಟು ಗಾತ್ರದ ಮಾತ್ರಗಳನ್ನು ಮಾಡಿ ಆರಿಸಿ ದಿನವೂ ಮೂರು ಬಾರಿ ಆಹಾರಕ್ಕೆ 15 ನಿಮಿಷಗಳ ಮೊದಲು ಒಂದು ಮಾತ್ರೆಯನ್ನು ನೀರಿನೊಡನೆ ಸೇವಿಸುತ್ತಿರಬೇಕು.

### ಅಧಿಕವಾದ ಕೊಲೆಸ್ಟ್ರಾಲ್ ತಗ್ಗಿಸಲು :

ದಿನವೂ ಖಾಲಿಹೊಟ್ಟೆಯಲ್ಲಿ 100 ಮಿ.ಲೀ. ಉಗುರುಬೆಚ್ಚಗಿನ ನೀರಿನಲ್ಲಿ ಒಂದು ಟೀ ಸ್ಪೂನ್ ಕರಿಬೇವಿನ ಪುಡಿ ಕಲಿಸಿ ಸೇವಿಸುತ್ತಿದ್ದರೆ ಉತ್ತಮ ಫಲಿತಾಂಶವುಂಟಾಗುತ್ತದೆ.

### ಮಧುಮೇಹ ನಿಯಂತ್ರಣಕ್ಕೆ:

ಕರಿಬೇವು ಪುಡಿ ಮೆಂತ್ಯವನ್ನು ಹುರಿದು ಪುಡಿ ಮಾಡಿ ಸಮಾನವಾಗಿ ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ ಬಾರಿಯೊಂದಕ್ಕೆ 50 ಮಿ.ಲೀ. ಉಗುರುಬೆಚ್ಚಗಿನ ನೀರಿನಲ್ಲಿ ಒಂದು ಟೀ ಸ್ಪೂನ್ ಪುಡಿ ಕಲಿಸಿ ಕುಡಿಯುತ್ತಿರಬೇಕು.





### ಸೈನಸೈಟಿಸು ಕಡಿಮೆಯಾಗಲು :

ಕರಿಬೇವಿನ ಪುಡಿ, ಸಕ್ಕರೆ ಸಮಾನವಾಗಿ ಕಲಿಸಿ ದಿನವೂ ಎರಡು ಬಾರಿ ಬಾರಿಯೊಂದಕ್ಕೆ ಒಂದು ಟೀ ಸ್ಪೂನ್ ಪುಡಿಯನ್ನು 50 ಮಿ.ಲೀ. ಉಗುರುಬೆಚ್ಚಗಿನ ನೀರಿನಲ್ಲಿ ಕಲಿಸಿ ಸೇವಿಸುತ್ತಿರಬೇಕು.

### ಕೇಶ ಒತ್ತಾಗಿ ಬೆಳೆಯಲು :

ವಾರಕ್ಕೆ 2-3 ಬಾರಿ ಕರಿಬೇವು, ದಾಸವಾಳದ ಹೂ ಸಮಾನವಾಗಿ ತೆಗೆದುಕೊಂಡು ಸ್ವಲ್ಪ ನೀರು ಹಾಕಿ ಮೆತ್ತಗೆ ನಾದಿ, ಪೇಸ್ಟಿನಂತೆ ಮಾಡಿ, ತಲೆಗೆ ಹಚ್ಚಿ ಒಂದು ತಾಸಿನ ನಂತರ ತಲೆಸ್ನಾನ ಮಾಡುತ್ತಿದ್ದರೆ ಕೂದಲು ಒತ್ತಾಗಿ, ಮೃದುವಾಗಿ, ಸುಂದರವಾಗಿ ಬೆಳೆಯುತ್ತದೆ.

### ಮಲದ್ವಾರದ ಉರಿ ಶಮನಕ್ಕೆ:

ದಿನವೂ ಉದಯದಲ್ಲಿ 200 ಮಿ.ಲೀ. ನೀರಿನಲ್ಲಿ 20-30 ಕರಿಬೇವಿನ ಎಲೆಗಳು, ಒಂದು ಟೀ ಸ್ಪೂನ್ ತಾಳೆ ಸಕ್ಕರೆ ಕಲಿಸಿ 100 ಮಿ.ಲೀ. ನೀರುಳಿಯುವಂತೆ ಮರಳಿಸಿ ಕೆಳಗಿಳಿಸಿ ಉಗುರ ಬೆಚ್ಚಗಿರುವಾಗಲೇ ಶೋಧಿಸಿ ಕುಡಿಯುತ್ತಿದ್ದರೆ ಶೀಘ್ರದಲ್ಲಿ ಫಲಿಂತಾಶ ಹೊರಬರುತ್ತದೆ.

### ರಕ್ತವೃದ್ಧಿಗೆ:

ದಿನವೂ ಒಂದು ಬಾರಿ 200 ಮಿ.ಲೀ. ನೀರಿನಲ್ಲಿ 25ಗ್ರಾಂ ಒಣಗಿಸಿದ ಕರಿಬೇವಿನ ಎಲೆಗಳು 15 ಒಣಗಿದ ದ್ರಾಕ್ಷಿ ಹಾಕಿ ಒಂದು ತಾಸು ನೆನೆಸಿ ಅರ್ಧ ಟೀ ಸ್ಪೂನ್ ತಾಳೆ ಸಕ್ಕರೆ ಇಲ್ಲವೇ ಸ್ಫಟಿಕ ಬೆಲ್ಲದ ಪುಡಿ ಕಲಿಸಿ, ಸ್ವಲ್ಪ ಹೊತ್ತು ಮರಳಿಸಿ, ಶೋಧಿಸಿ ಉಗುರುಬೆಚ್ಚಗಿರುವಾಗಲೇ ಕುಡಿಯುತ್ತಿದ್ದರೆ ರಕ್ತವೃದ್ಧಿಯಾಗಿ ಆಯಾಸ, ನಿಸ್ತ್ರಾಣ ತಗ್ಗುತ್ತದೆ.

### ತ್ರಿದೋಷಗಳು ಸಮಸ್ಥಿತಿಗೆ ಬರಲು :

ಒಣಗಿದ ಕರಿಬೇವನ್ನು ತಪ್ಪುದಲ್ಲಿ ಹುರಿದು ಮಾಡಿದ ಪುಡಿ 50ಗ್ರಾಂ, ಜೀರಿಗೆ, ಹವೀಜವನ್ನು ಹುರಿದು ಮಾಡಿದ ಚೂರ್ಣವನ್ನು ಒಂದೊಂದು 10 ಗ್ರಾಂ, ಸೈಂಧವಲವಣ ಚೂರ್ಣ 10 ಗ್ರಾಂ ಲವಂಗ ಚೂರ್ಣ 5 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ಊಟದ ಸಮಯದಲ್ಲಿ ಆಹಾರದ ಮೊದಲ ತುತ್ತಿನಲ್ಲಿ 2-3 ಗ್ರಾಂ ಪುಡಿ ಕಲಿಸಿ ಸೇವಿಸುತ್ತಿದ್ದರೆ ಉಲ್ಬಣಿಸಿದ ವಾತ, ಪಿತ್ತ, ಶ್ಲೇಷ್ಮ ದೋಷಗಳು ಸಮಸ್ಥಿತಿಗೆ ಒಂದು ವ್ಯಾಧಿಗಳು ಶೀಘ್ರದಲ್ಲಿ ಶಮನಗೊಳ್ಳುತ್ತವೆ.




## ಏಪ್ರಿಲ್ 2024 ತಿಂಗಳ ರಸಪ್ರಶ್ನೆಯ ಉತ್ತರಗಳು

1. 12 ವರ್ಷ
2. ಚೈತ್ರಮಾಸ
3. ಬೇವು
4. ರಾಮ
5. ಭರತನು
6. ಮಳೆಯ ರೂಪ
7. ಶ್ರೀಯೋಗ ನರಸಿಂಹ ದೇವಾಲಯ
8. ರಾಮ ಲಕ್ಷ್ಮಣರು.
9. ವೈಶಾಖ
10. ಮಲಗಿರುವಭಂಗಿಯಲ್ಲಿರುತ್ತಾನೆ
11. ಅಶ್ವಮೇಧಯಾಗ
12. ನೀಲಮೇಘಪೆರುಮಾಳ್
13. ತಂದೆಮುದ್ದುಮೋಹನವಿಠ್ಠಲ
14. ನಂದಕ ಖಡ್ಗ
15. ಕಪಿಲ ತೀರ್ಥ

ವೆಳ್ಳಿಯಂಗುಡಿ ಪುರೇ ವಿರಾಜತೇ।
ಬ್ರಹ್ಮತೀರ್ಥಕವಿ ಪದ್ಮಿನೀಯತೇ।
ಕೋಲವಿಲ್ಲಿ ರಘುನಾಥ ನಾಮಕೋ।
ನಾಯಕಿಂ ಮರತಕಾಭಿಧಾಂ ಶ್ರಿತಃ॥
ಶೋಭನಾಭಿದ ವಿಮಾನ ಮಧ್ಯಗೋ।
ಭೋಗಿರಾಜ ಶಯತೇಂದ್ರ ದಿಜ್ಞುಖಃ॥
ಇಂದ್ರ ಶುಕ್ರ ವಿಧಿಶಕ್ತಿ ಸೂನುಭಿಃ
ಸೇವಿತಃಕತಿಹ ಸಂಸ್ತುತೋಽನಿಶಮ್॥

"ತಿರುವೆಳ್ಳಿಯಂಗುಡಿ'' ಎಂಬ ದಿವ್ಯಕ್ಷೇತ್ರ ಕುಂಭಕೋಣದಿಂದ ಚೆನ್ನೈಗೆ ಹೋಗುವ ಮಾರ್ಗದಲ್ಲಿ "ಅನೆಕ್ಕರೈ'' ಸಮೀಪದಲ್ಲಿರುವ ಚೋಳಪುರ ಮತ್ತು ತಿರುಪ್ಪನಂತಾಳ್ ಎಂಬ ಪ್ರದೇಶಕ್ಕೆ ಐದು ಕಿ.ಮೀ. ದೂರದಲ್ಲಿ ನೆಲೆಸಿದೆ. ಶಂಗಣೂರ್‌ನಿಂದ ಒಂದು ಕಿ.ಮೀ.ದೂರದಲ್ಲಿದೆ. ಈ ಪುಣ್ಯಕ್ಷೇತ್ರವು ಚತುರ್ಯುಗಗಳಿಗೆ ಪ್ರತೀಕವಾಗಿದೆಯೆಂದು ಕೊಂಡಾಡಲ್ಪಡುತ್ತಿದೆ. ಕೃತಯುಗದಲ್ಲಿ ಬ್ರಹ್ಮಪುತ್ರವೆಂದು, ತ್ರೇತಾಯುಗದಲ್ಲಿ ಪರಾಶರವೆಂದು, ದ್ವಾಪರದಲ್ಲಿ ಇಂದ್ರನಗರವೆಂದು, ಕಲಿಯುಗದಲ್ಲಿ ಭಾರ್ಗವಪುರಿ ಎಂದು ಕೀರ್ತಿಸಲ್ಪಡುತ್ತಿದೆ.

ಮೂಲಮೂರ್ತಿಯ ಪೂರ್ವಮುಖವಾಗಿ, "ಕೋಲವಿಲ್ಲಿರಾಮನ್'' ಎಂಬ ಹೆಸರಿನೊಂದಿಗೆ, ಶಯನ ಭಂಗಿಯಲ್ಲಿ ನೆಲೆಸಿದ್ದಾನೆ. ಉತ್ಸವ ಮೂರ್ತಿಯನ್ನು "ಶೃಂಗಾರಸುಂದರ ಪೆರುಮಾಳ್'' ಎಂದು ಕರೆಯುತ್ತಾರೆ. ಅಮ್ಮನವರು ಪ್ರತ್ಯೇಕವಾದ ಸನ್ನಿಧಿಯಲ್ಲಿ "ಮರಕದವಲ್ಲಿ'' ಎಂಬ ಹೆಸರಿನಿಂದ ರಾರಾಜಿಸುತ್ತಿದ್ದಾಳೆ. ಈ ಪ್ರದೇಶವು ಅನೇಕ ತೀರ್ಥಗಳಿಂದ ಅಂದರೆ,ಶುಕ್ರತೀರ್ಥ, ಬ್ರಹ್ಮತೀರ್ಥ, ಇಂದ್ರತೀರ್ಥ, ಪರಾಶರತೀರ್ಥ, ಶುಕ್ರಪುಷ್ಕರಿಣಿ, ಮೊದಲಾದ ವುಗಳೊಂದಿಗೆ "ಪುಷ್ಕಲಾವರ್ತಕ'' ಎಂಬ ವಿಮಾನ ಗೋಪುರದೊಂದಿಗೆ ಸ್ಥಳವೃಕ್ಷವಾದ ಕದಲೀವೃಕ್ಷದೊಂದಿಗೆ ಅತ್ಯದ್ಭುತವಾದ ಪ್ರಕೃತಿ ಸೌಂದರ್ಯದ ನಡುವೆ ನೆಲೆ ನಿಂತಿವೆ. ಉಳಿದಂತೆ ಈ ಕ್ಷೇತ್ರವು ಹೇರಳವಾದ ಮಹಿಮೆಗಳನ್ನು ಒಳಗೊಂಡಿವೆ. ಇಲ್ಲಿ ವೈನತೇಯನು ನಾಲ್ಕು ಭುಜಗಳೊಂದಿಗೆ ನೆಲೆಸಿದ್ದು ಭಗವಂತನ ಸೇವೆಯನ್ನು ಮಾಡುತ್ತಾ ಇಲ್ಲಿಗೆ ಬರುವ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಈ ಕ್ಷೇತ್ರದಲ್ಲಿ ನೆಲೆಸಿರುವ ಭಗವಂತನು ಶ್ರೀವೈಖಾನಸ ಆಗಮೋಕ್ತವಾಗಿ ಸಕಲ ವಿಧವಾದ ಆರಾಧನೆಗಳನ್ನು ಸ್ವೀಕರಿಸುತ್ತಿದ್ದಾನೆ.

**ಸ್ಥಳ ಪುರಾಣ :**

ಈ ಕ್ಷೇತ್ರದ ಬಗೆಗೆ ನಾಲ್ಕು ವಿಧವಾದ ಕಥೆಗಳನ್ನು ನಾವು ಕಾಣಬಹುದಾಗಿದೆ.

1) ಚಿತ್ರಕೂಟದಲ್ಲಿ ಶ್ರೀರಾಮಚಂದ್ರನು ಸೀತಾದೇವಿಯೊಂದಿಗೆ ಏಕಾಂತದಲ್ಲಿರುವಾಗ, ಇಂದ್ರನ ಪುತ್ರನಾದ ಜಯಂತನು ಕಾಗೆಯ ರೂಪದಲ್ಲಿ ಸೀತಾದೇವಿಯ ಮೇಲೆ ಆಕ್ರಮಣ ಮಾಡಿದ. ಆಗ ಶ್ರೀರಾಮಚಂದ್ರನು ಅತ್ಯಂತ ಕೋಪೋದ್ರಿಕ್ತನಾದ. ಆದರೆ ಆ ಸಮಯದಲ್ಲಿ ಆತನ ಕೈಯಲ್ಲಿ ಧನುರ್ಭಾಣಗಳು ಇಲ್ಲದಿರುವ ಕಾರಣದಿಂದಾಗಿ ತನ್ನ ಕೈಬೆರಳುಗಳನ್ನೇ ಬಿಲ್ಲನ್ನಾಗಿ ಮಾಡಿಕೊಂಡು ಅಲ್ಲೇ ಇದ್ದ ದರ್ಭೆಯನ್ನು ತೆಗೆದು ಬಾಣದಂತೆ ಆ ಕಾಕಾಸುರನ ಮೇಲೆ ಪ್ರಯೋಗಿಸಿದ. ಭಕ್ತರೆಲ್ಲರೂ ಆ ಅದ್ಭುತವಾದ ಭಂಗಿಯಲ್ಲೇ ಸಾಕ್ಷಾತ್ಕರಿಸಬೇಕೆಂದು ಬೇಡಿಕೊಂಡಿದ್ದರಿಂದ ಇಲ್ಲಿ "ಕೋಲ ವಿಲ್ಲಿರಾಮನ್'' ಎಂಬ ಹೆಸರಿನಿಂದ ಈ ತಿರುವೆಳ್ಳಿಯಂಗುಡಿಯಲ್ಲಿ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ.

2)ದೇವಲೋಕದ ಶಿಲ್ಪಿಯಾದ ವಿಶ್ವಕರ್ಮನು ದೇವದೇವನ ಅತ್ಯದ್ಭುತವಾದ ಆಲಯಗಳನ್ನು ನಿರ್ಮಾಣ ಮಾಡಿ ಅತ್ಯಂತ ಉತ್ತಮವಾದ ಕೀರ್ತಿಯನ್ನು ಹೊಂದಿದ. ಅವನ ಕೀರ್ತಿಯನ್ನು ನೋಡಿದ, ಅಸುರರ ಶಿಲ್ಪಿಯಾದ ಮಯನೂ ತನಗೂ ಅಂತಹ ಕೀರ್ತಿಲಭಿಸಬೇಕೆಂದು, ಈ ಕ್ಷೇತ್ರದಲ್ಲಿ ತಪಸ್ಸನ್ನು ಆಚರಿಸಿದನಂತೆ. ಅವನ ತಪಸ್ಸಿಗೆ ಮೆಚ್ಚಿ ಭಗವಂತನು ಪಂಚಾಯುಧಗಳಿಂದ ಅವನ ಎದುರು ಪ್ರತ್ಯಕ್ಷನಾದ. ಆದರೆ ಮಯನು ಆನಂದಿಸದೇ,"ಸ್ವಾಮೀ! ನೀನು ಕೋಲವಿಲ್ಲಿರಾಮ ನಂತೆ ದರ್ಶನವನ್ನು ನೀಡು'' ಎಂದು ಬೇಡಿಕೊಂಡನಂತೆ, ಆಗ ಭಗವಂತನು ಅವನ ಪ್ರಾರ್ಥನೆಯ ಅನುಸಾರವಾಗಿ ವೈನತೇಯನಿಗೆ ಶಂಖ ಚಕ್ರಗಳನ್ನು ಪ್ರಸಾದಿಸಿ, ಎರಡು ಭುಜಗಳೊಂದಿಗೆ ಮಯನಿಗೆ ದರ್ಶನ ನೀಡಿ ದನಂತೆ. ಈ ಕಾರಣದಿಂದ ಇಲ್ಲಿ ಇರುವ ಗರುಡ ದೇವರು ಎರಡು ಕೈಗಳನ್ನು ಜೋಡಿಸಿ, ಉಳಿದ ಎರಡು ಕೈಗಳಲ್ಲಿ ಶಂಖ, ಚಕ್ರಗಳನ್ನು ಧರಿಸಿ, ಚತುರ್ಭುಜಗಳೊಂದಿಗೆ ಭಗವಂತನಿಗೆ ಸೇವೆಯನ್ನು ಸಲ್ಲಿಸುತ್ತಿದ್ದಾನೆ.

3)ಬಲಿ ಚಕ್ರವರ್ತಿಯ ಅಹಂಕಾರವನ್ನು ಅಡಗಿಸಿ, ಇಂದ್ರನಿಗೆ ಅವನ ಐಶ್ವರ್ಯವನ್ನು ಹಿಂದಿರುಗಿ





# ತಿರುವೆಳ್ಳಿಯಂಗುಡಿ



ಅನುಗ್ರಹಿಸಬೇಕೆಂದು ಭಗವಂತನು ವಾಮನ ಅವತಾರವನ್ನು ಸ್ವೀಕರಿಸಿ, ಬಲಿಚಕ್ರವರ್ತಿಯನ್ನು ಯಾಚಿಸಿದ ಸಂದರ್ಭದಲ್ಲಿ ಅಸುರರ ಗುರುವಾದ ಶುಕ್ರಾಚಾರ್ಯರು ಅದನ್ನು ತಡೆಯಲು ಹೋದಾಗ, ಚಕ್ರವರ್ತಿಯು ಸಜಲದಾನಕ್ಕೆ ಮುಂದಾದ, ಆಗ ಶುಕ್ರಚಾರ್ಯರು ಆ ಕಮಂಡಲದಲ್ಲಿನ ರಂಧ್ರಕ್ಕೆ ದುಂಬಿಯ ರೂಪದಲ್ಲಿ ಅಡ್ಡವಾಗಿ ನಿಂತು ನೀರನ್ನು ತಡೆದಾಗ, ವಾಮನನು ಒಂದು ಚಿಕ್ಕ ದರ್ಭೆಯ ಮೂಲಕ ಆ ರಂಧ್ರವನ್ನು ಚುಚ್ಚಿದಾಗ ಶುಕ್ರಾಚಾರ್ಯರು ತಮ್ಮ ಒಂದು ಕಣ್ಣನ್ನು ಕಳೆದುಕೊಂಡರು, ನಂತರ ಭಗವಂತನು ತ್ರಿವಿಕ್ರಮನಾಗಿ ಮೂರೂ ಲೋಕಗಳನ್ನು ಅಳೆದು ಅಸುರನ ಅಹಂಕಾರವನ್ನು ಮಣಿಸಿ, ಲೋಕರಕ್ಷಣೆಯನ್ನು ಮಾಡಿದ್ದು ಪ್ರಪಂಚಕ್ಕೆಲ್ಲಾ ತಿಳಿದಿರುವ ವಿಷಯವೇ ಆಗಿದೆ! ಈ ಸಂದರ್ಭದಲ್ಲಿ ದುಂಬಿಯ ರೂಪದಲ್ಲಿ ಭಗವಂತನ ಕೆಲಸಕ್ಕೆ ಅಡ್ಡಿಯಾಗಿ ಬಂದು ತಮ್ಮ ಒಂದು ಕಣ್ಣನ್ನು ಕಳೆದುಕೊಂಡ ಶುಕ್ರಾಚಾರ್ಯರು ತನ್ನ ತಪ್ಪನ್ನು ತಿಳಿದುಕೊಂಡು ಆ ಭಗವಂತನ ಅನುಗ್ರಹ ಪಡೆಯುವುದಕ್ಕಾಗಿ ಈ ತಿರುವೆಳ್ಳಿ ಯಂಗುಡಿಗೆ ದುಂಬಿಯಾಗಿ ಬಂದು, ತಪಸ್ಸು ಮಾಡಿ ತಾನು ಶೇಖರಿಸಿಕೊಂಡಂತಹಾ ಜೇನುತುಪ್ಪವನ್ನು ಭಗವಂತನಿಗೆ ಸಮರ್ಪಿಸಿದರು. ಅದರ ಫಲವಾಗಿ ಭಗವಂತನು ಶುಕ್ರಾ ಚಾರ್ಯರಿಗೆ ಕಣ್ಣನ್ನು ಪ್ರಸಾದಿಸಿದ. ಆದ್ದರಿಂದ ಈ ಕ್ಷೇತ್ರವು "ಶುಕ್ರದೋಷ ಪರಿಹಾರ ಕ್ಷೇತ್ರ" ವೆಂದು ಪ್ರಸಿದ್ಧಿ ಯನ್ನು ಪಡೆದಿದೆ.









4) ಬ್ರಹ್ಮದೇವರು ಕಳೆದುಕೊಂಡಿದ್ದ ಬ್ರಹ್ಮಪದವಿಯನ್ನೂ ಈ ಸ್ಥಳದಲ್ಲಿ ತಪಸ್ಸನ್ನು ಮಾಡಿ ಪುನಃ ಹೊಂದಿರುವುದು. ದುರ್ವಾಸಮಹರ್ಷಿಯ ಶಾಪಕ್ಕೆ ಗುರಿಯಾದ ಇಂದ್ರದೇವನು ಇಲ್ಲಿ ತಪಸ್ಸು ಮಾಡಿ ಶಾಪವನ್ನು ಕಳೆದುಕೊಂಡಿದ್ದು ಪರಾಶರನು ಕೋಲವಿಲ್ಲಿರಾಮನನ್ನು ಮಂತ್ರಗಳಿಂದ ಉಪಾಸನೆ ಮಾಡಿ ಶ್ರೀವೈಕುಂಠವನ್ನು ಪಡೆದಿದ್ದು, ಹೀಗೆ ಹಲವಾರು ಮಹಿಮೆ ಗಳನ್ನು ಒಳಗೊಂಡಿರುವ ಪ್ರಸಿದ್ಧವಾದ ಕಥೆಗಳು ನಮಗೆ ಪುರಾಣಗಳಿಂದ ತಿಳಿದು ಬರುತ್ತಿವೆ.

ತಿರುಮಂಗೈ ಆಳ್ವಾರರಿಂದ ಮಂಗಳಾಶಾಸನವನ್ನು ರಚಿಸಿ ಕೊಂಡಂತಹಾ ಮರಕದವಲ್ಲಿ ಸಮೇತನಾದ ಈ ಕೋಲವಿಲ್ಲಿ ರಾಮನನ್ನು ದರ್ಶಿಕೊಂಡವರು ಸಕಲವಿಧವಾದ ಪಾಪಗಳನ್ನು, ದೋಷಗಳನ್ನು, ಶಾಪಗಳನ್ನು ಕಳೆದುಕೊಂಡು ಇಹಪರ ಸೌಖ್ಯಗಳನ್ನು ಹೊಂದುತ್ತಾರೆಂದು ಪುರಾಣಗಳು ಸಾರುತ್ತಿವೆ. ಅಂತಹ ದೋಷ ಪರಿಹಾರಕನಾದ ಕೋಲವಿಲ್ಲಿರಾಮನನ್ನು, ಮರಕ ದವಲ್ಲಿ ದೇವಿಯನ್ನು ದರ್ಶಿಸಿ ಧನ್ಯರಾಗೋಣ.

**ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**
**ಅನುವಾದ : ಸೂರ್ಯವಂಶಿ**

# एक त्रिंशः पाठः

## ಪಾಠ : 32

ರಚನೆ:-ಕೆ. ಸೂರ್ಯನಾರಾಯಣ
ಅನುವಾದ: ವಿ. ಪ್ರದೀಪ್ ಕುಮಾರ್

तस्मै = ಅವನಿಗೋಸ್ಕರ तस्मात् = ಅವನದೆಸೆಯಿಂದ तेभ्यः = ಅವರಿಗೋಸ್ಕರ त्वत् = ನಿನ್ನ ದೆಸೆಯಿಂದ
मत् = ನನ್ನ ದೆಸೆಯಿಂದ भवतु नाम = ಆಗಲಿ चलितुम् = ಕದುಲುವುದಕ್ಕಾಗಿ कारयति = ಮಾಡಿಸುತ್ತಿದ್ದಾನೆ.
भूत्वा = ಆಗಿ भवितुम् = ಆಗುವುದಕ್ಕಾಗಿ चलित्वा = ಕದಲಿ/ಸಿ उषित्वा = ಜೀವಿಸಿ वस्तुम् = ಇರುವುದಕ್ಕಾಗಿ
अस्तु नाम = ಆಗಲಿ/ ಇರಲಿ यच्छति = ಕೊಡುತ್ತಿದ್ದಾನೆ दास्यति = ಕೊಡುತ್ತಾನೆ

### ಪ್ರಶ್ನೆ

1. अहं मर्कटाय अन्नं यच्छामि।
2. त्वं तस्मै पानीयं दास्यसि किम्?
3. क्षीरं कुत्रास्ति वा?
4. बालकेभ्यः अद्य प्रातः क्षीरं कः दास्यति?
5. त्वं शीघ्रं गत्वा मम जनकं स्नानं कारय।
6. त्वं न चेत् कः कारयिष्यति?
7. गृहात् बहिः अनेके ब्राह्मणाः सन्ति।
8. तेभ्यः सर्वेभ्यः भोजनं यच्छत।
9. तव जनकाय एषः फलं एतत्।
10. अस्तु नाम कः यच्छति चेत्किम्?
11. तथैव भवतु।
12. अहम् अद्यैव खलु फलम् अयच्छम्।

### ಉತ್ತರ

1. ನಾನು ಕೋತಿಗೋಸ್ಕರ ಅನ್ನವನ್ನು ಕೊಡುತ್ತಿದ್ದೇನೆ.
2. ನೀನು ಅವನಿಗೋಸ್ಕರ ಪಾನೀಯವನ್ನು ಕೊಡುತ್ತೀಯಾ?
3. ಹಾಲು ಎಲ್ಲಿವೇ?
4. ಬಾಲಕರಿಗೋಸ್ಕರ ಇವತ್ತು ಬೆಳಗ್ಗೆ ಹಾಲನ್ನು ಯಾವನು ಕೊಡುತ್ತಾನೆ?
5. ನೀನು ಬೇಗನೆ ಹೋಗಿ ನನ್ನ ತಂದೆಗೆ ಸ್ನಾನವನ್ನು ಮಾಡಿಸು.
6. ನೀನು ಅಲ್ಲದೇ ಯಾವನು ಮಾಡಿಸುತ್ತಾನೆ?
7. ಮನೆಯ ಹೊರಗೆ ಅನೇಕ ಮಂದಿ ಬ್ರಾಹ್ಮಣರು ಇದ್ದಾರೆ.
8. ಅವರೆಲ್ಲರಿಗೋಸ್ಕರ ಭೋಜನವನ್ನು ಕೊಡಿರಿ.
9. ನಿನ್ನ ತಂದೆಗೋಸ್ಕರ ಈ ಹಣ್ಣನ್ನು ಕೊಡು.
10. ಆಗಲಿ ಬಿಡು ಯಾವನು ಕೊಟ್ಟರೇನು?
11. ಹಾಗೆಯೇ ಆಗಲಿ.
12. ನಾನು ಇವತ್ತೇ ಅಲ್ಲವೇ ಹಣ್ಣನ್ನು ಕೊಟ್ಟಿದ್ದೇನೆ.

### ಪ್ರಶ್ನೆ

1. ಕೋತಿಗಳು ಪರ್ವತಗಳಲ್ಲಿ ಹೋಗುತ್ತಿದ್ದಾವೆ.
2. ಬಹಳ ಕೋತಿಗಳು ವೃಕ್ಷಗಳ ದೆಸೆಯಿಂದ ಬಿದ್ದವು.
3. ನೀವು ನಮ್ಮೊಟ್ಟಿಗೆ ಏಕೆ ಯುದ್ಧವನ್ನು ಮಾಡುತ್ತೀರಿ?
4. ನಾವು ನಿಮ್ಮೊಟ್ಟಿಗೆ ಯಾವಾಗಲೂ ಯುದ್ಧವನ್ನು ಮಾಡುವುದಿಲ್ಲ
5. ನೀವೆ ನಮ್ಮೊಟ್ಟಿಗೆ ಯುದ್ಧವನ್ನು ಮಾಡಲು ಬರುತ್ತಿದ್ದೀರಿ
6. ಅವರು ಯಾರೂ ಅಲ್ಲಿ ಇಲ್ಲ.
7. ಆ ಪರ್ವತದಲ್ಲಿ ಎಷ್ಟು ಕೋತಿಗಳು ಇವೆ?
8. ಯಾವನು ನೋಡಿದ್ದಾನೆ?
9. ಅಯ್ಯೋ ಆ ಬೆಕ್ಕಿಗೋಸ್ಕರ ಹಾಲನ್ನು ಕೊಡಿರಿ.
10. ಇವತ್ತು ನಾನು ಊರಿಗೆ ಹೋಗಬೇಕು. ಬೇಗನೇ ಅಡಿಗೆಯನ್ನು ಮಾಡಿಸು.
11. ನೀವು ಮೊದಲು ನೀರನ್ನು ತಂದಲ್ಲಿ ನಾನು ಅಡಿಗೆಯನ್ನು ಮಾಡಿಸುತ್ತೇನೆ.
12. ಆ ಬ್ರಾಹ್ಮಣರನ್ನು ಕುರಿತು ನೀರನ್ನು ತರಲು ಹೇಳಿರಿ.

### ಉತ್ತರ

1. मर्कटाः पर्वतेषु गच्छन्ति।
2. बहवः मर्कटाः वृक्षेभ्यः अपतन्।
3. यूयं अस्माभिः किमर्थं युद्धं कुरुथ?
4. वयं युष्माभिः कदापि युद्धं न कुर्मः।
5. यूयमेव अस्माभिः युद्धं कर्तुम् आगच्छथ।
6. ते केपि अत्र न सन्ति।
7. तस्मिन् पर्वते कति मर्कटाः सन्ति।
8. कः दृष्टवान्?
9. अहो! तस्मै मार्जालाय क्षीरं ददतु।
10. अद्य मया ग्रामं गन्तव्यं शीघ्रं पाकं कारयतु।
11. यूयं प्रथमं जलं आनयथ चेत् अहं पाकं कारयिष्यामि।
12. तान् ब्राह्मणान् जलम् आनयन्तु इति वदत।

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ

**ಕಳೆದ ಸಂಚಿಕೆಯಿಂದ**

ಹೀಗೆಂದು ವಾಮನ, ವರಾಹ, ಮಾರ್ಕಂಡೇಯಾದಿ ಪುರಾಣಗಳಲ್ಲಿ ತೀರ್ಥ ವೈಭವವು ಪ್ರಶಂಶಿಸಿಲ್ಪಟ್ಟಿದೆ. ಈ ದಿನದ ಸ್ನಾನದ ಮೂಲಕವೇ ಸುಖ ಗಳು ಸಿದ್ಧಿಸುವವೆಂದು ಶಾಸ್ತ್ರದಲ್ಲಿ ಹೇಳಿರುವುದರಿಂದ ಕಾಮ್ಯ ತೀರ್ಥವೆಂದು ಪ್ರಸಿದ್ಧವಾಗಿರುವ ತೀರ್ಥದಲ್ಲಿ ಶ್ರೀರಾಮಾನುಜ ಸಿದ್ಧಾಂತ ನಿಷ್ಠರಾದ ಪ್ರಪನ್ನ ಜನರಿಗೆ ಸ್ನಾನವುಚಿತವೆಂದು ಶ್ರೀವೈಷ್ಣವ ಧರ್ಮ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವುದರಿಂದಲೇ ತಿರುಮಲೆ ತಿರುಪತಿಯಲ್ಲಿರುವ (ಬೆಟ್ಟದ ಮೇಲೆ) ಗೋಪುರವನ್ನು ದಿನವೂ ದರ್ಶಿಸುವ ಮಹಾಭಾಗವತರು ಸಹಾ ಈ ಕಾಮ್ಯ ತೀರ್ಥದಲ್ಲಿ ಮೀಯುವ ಮೂಲಕ ರಾಜಸ,ತಾಮಸ, ಪ್ರಾಕೃತರಿಗೆ ಶ್ರೀವೈಷ್ಣವವೃಂದವನ್ನು, ಅವೈಷ್ಣವಜನರ ಮೂಲವೃಂದವನ್ನು ರಾಜದ್ವಾರವರ್ತಕರಾಗಿ (ರಾಜಾಶ್ರೀತ) ಹಲವು ಅಪಂಡಿತವೃಂದದವರನ್ನು, ಸ್ಥಲವಾಸರಾದ ಜಿಯ್ಯರುಗಳನ್ನು (ಸನ್ಯಾಸಿಗಳನ್ನು) ಆಚಾರ್ಯಪುರುಷರಾದ ಶ್ರೀ ಮಹಾ ಭಾಗವತರು ಮುಂತಾದವರು ಈ ಸ್ಥಳಕ್ಕೆ ಶ್ರೀಮಹಾಭಾಗವತರಿಗೆ ಬಂದ ಅಪಕೀರ್ತಿ ತಿಳಿದ ಈ ಕಾಲದಲ್ಲಿ ತೀರ್ಥಸ್ನಾನ ಮಾಡಲೆಂದೇ ಮುಂಚೂಣಿಯಲ್ಲಿದ್ದಾಗ್ಗೇ ಮಾಡಿ ಬಿಡಬೇಕೆಂದು ಚಿಂತಿಸಿ,

ಭಕ್ತೋತ್ಸವಂ ಪ್ರಕುರ್ವೀತ ಚಾಪಂ ಪ್ರಾಪ್ತೆ ದಿವಾಕರೇ
ಶುಕ್ಲೇ ಚ ಪಕ್ಷೇ ತ್ರಿದಿನಂ ಸೂರೀಣಾಮರ್ಚನಂ ಭವೇತ್

(ಸೂರ್ಯನು ಧನುರಾಶಿಯಲ್ಲಿ ಪ್ರವೇಶಿಸಲು, ಅದು ಧರ್ನುಮಾಸವಾಗಿ ಅದರ ಶುಕ್ಲ ಪಕ್ಷದ ದಿನದಿಂದ ಭಕ್ತೋತ್ಸವವನ್ನು ಮಾಡತಕ್ಕದ್ದು. ಮೂರು ದಿನಗಳ ಅನ್ನವನ್ನು ಅರ್ಪಿಸಬೇಕು) ಎಂದು ವೈಖಾಸನಶಾಸ್ತ್ರದಲ್ಲಿನ ಆನಂದ ಸಂಹಿತೆಯಲ್ಲಿ ಈ ಪ್ರಮಾಣವನ್ನು ಸಂಗ್ರಹಿಸಿದವರು ಸಂಹಿತಾಂತರ ವಚನಗಳನ್ನು ಆಯ್ದ ಭಾಗಗಳಲ್ಲಿನ ವ್ಯಾಖ್ಯಾನದಲ್ಲಿ -

ಪಂಚಾಯುಧಾನಾಂ ಭಕ್ತಾನಾಂ ಸೇನಾನೀ ಶೇಷಯೊರಪಿ
ವೈನತೇಯಸ್ಯ ಸೇನೇಶ ಭಕ್ತಾವಾಂ ಚಪೃಥಕ್ಪೃಥಕ್
ಚಂಡಾದೀನಾಂ ಚ ಭಕ್ತಾನಾಂ ಕುಮುದಾದಿಗಣಸ್ಯ ಚ
ಸರ್ವೇಷಾಂ ಭಕ್ತಿತಃ ಕುರ್ಯಾತ್ ಮುಮಾಂಕುರ ವಿವರ್ಜಿತಂ
ಅರ್ಚನಂ ವಿಷ್ಣುಭಕ್ತಾನಾಂ ಹರಿಪಾದ್ವಾತೈಸ್ಸುಮೈಃ
ತುಲಸಿ ದಳಸಮ್ಮಿಶ್ರೈಃ ಸುಗಂಧೈ ಸುಮನೋಹರೈಃ




ತತ್ತನ್ಮೂರ್ತಿಪರ್ಯೆರ್ಮಂತ್ರ್ಯೇ ರ್ವಿಷ್ಣು ಭಕ್ತಿ ವಿಶೇಷಣಃ
ತದ್ವಿಷ್ಣೋರಿತಿ ಮಂತ್ರೇಣ ಸಂಯುತ್ಯೆರಂತತಶ್ಯುಬೈಃ
ತ್ರಿಸಂಧ್ಯಂ ಭಗವದ್ಭುಕ್ತ ದ್ವಾದಶಾನ್ನಂ ನಿವೇದಯೇತ್
ಏತನ್ಮುಖೇನ ಭಗವಾನ್ ಪ್ರೀತೋ ಭೂತ್ವಾ ಜನಾರ್ದನಃ
ದದಾತಿ ಸಕಲಾನ್ಭೋಗಾನ್ ಭಕಾನಾಂ ಭಕ್ತವತ್ಸಲಃ

(ಹರಿಭಕ್ತಯುತರಾಗಿ ಪಂಚಾಯುಧಗಳಿಗೂ, ಅನಂತ, ಗರುಡ, ವಿಷ್ವಕ್ಸೇನರಿಗೂ ಸೇನಾಧಿಪತಿ ಭಕ್ತರಿಗೂ, ಚಂಡಾದಿ ಭಕ್ತರಿಗೂ, ಕುಮುದಾದಿ ಗಣಗಳಿಗೂ-ಬೇರೆ ಬೇರೆಯಾಗಿ ಎಲ್ಲರಿಗೂ ಹೋಮ, ಅಂಕುರಾರ್ಪಣವಿಲ್ಲದೇ ತುಳಸಿದಳದಿಂದ ಯುತವಾದ ಸುವಾಸನಾದ್ರವ್ಯ ಮನೋಹರಾದಿ ಗಳನ್ನು ಶ್ರೀಹರಿ ಪಾದಗಳಿಗೆ ದರ್ಶಿಸಲ್ಪಟ್ಟ ಆಯಾ ಕುಸುಮಗಳನ್ನು ಆಯಾ ಮೂರ್ತಿ ವಿಷಯಗಳಿಗೆ ವಿಷ್ಣುಭಕ್ತರಿಂದ ವಿಶೇಷಣಗಳನ್ನು ಮೊದಲು 'ತದ್ವಿಷ್ಣೋ' ಎನ್ನುವ ಮಂತ್ರದಿಂದ ಕೂಡಿದ ಮಂಗಳಕರವಾದ ಮಂತ್ರ ಗಳಿಂದ ಭಕ್ತಿಯುತವಾಗಿ ಅರ್ಚನೆಯನ್ನು ಮಾಡಬೇಕು. ಮೂರು ಹೊತ್ತು ಭಗವನ್ನಿವೇದಗಳನ್ನು ಹನ್ನೆರಡು ವಿಧವಾದ ಅನ್ನಗಳನ್ನು ನಿವೇದನೆ ಮಾಡಬೇಕು. ಹೀಗೆ ಮಾಡುವುದರಿಂದ ಭಕ್ತವತ್ಸಲನಾದ ಜನಾರ್ದನನು ಸಂತೃಪ್ತ ನಾಗಿ ಭಕ್ತರಿಗೆ ಸಕಲಭೋಗಗಳನ್ನು ಕೈಗೂಡಿಸುತ್ತಾನೆ.

ಎಂದು ವಿಸ್ತಾರವಾಗಿ ಹೇಳಿದ ಮೂಲಕ ಭಕ್ತಾಗ್ರೇಸರರಾದ ಅನಂತ ಗರುಡು, ವಿಷ್ವಕ್ಸೇನ,ಸುದರ್ಶನಾದಿಗಳನ್ನು ಯಾಗಶಾಲೆಯಲ್ಲಿ ಮೆರವಣಿಗೆಯನ್ನು ಮಾಡಿಸಿ, ತೀರ್ಥವನ್ನು ಪ್ರಸಾದಿಸುವಂತೆ ಕಟ್ಟಳೆ ಹಾಕಿ ಆ ಮೂಲಕ ಸಮಸ್ತ ಜನರಿಗೆ ಆಯಾ ಕಾಲದ ತೀರ್ಥಸ್ನಾನ ಪರಿಹಾರರ್ಥದ ಸ್ನಾನವನ್ನಾಗಿ ಮಾಡಬೇಕೆಂದು ಏರ್ಪಾಟು ಮಾಡಿದ್ದಾರೆ ಹಿರಿಯರು ಎಂದು ವಿರಾಮವನ್ನು ತೆಗೆದುಕೊಂಡಿದ್ದಾರೆ.

ಭಗವದ್ರಾಮಾನುಜರ ದಿವ್ಯ ಸಂಕಲ್ಪದಿಂದ ಗೋವಿಂದರಾಜ ಸ್ವಾಮಿ ತಿರುಮಲೆ ಭೂಪ್ರದೇಶದಲ್ಲಿ ಪ್ರತಿಷ್ಠಿತರಾದ ನಂತರ ತಿರುವೇಂಕಟ ನಾಡಿಗೆ ನಾಯಕನಾದ ಕಟ್ಟಿಯಂ ಯಾದವರಾಜು ಭಗದ್ರಾಮಾನುಜರ ಪಾದಗಳನ್ನಾಶ್ರಯಿಸಿ ಗೋವಿಂದರಾಜಸ್ವಾಮಿ ಕೈಂಕರ್ಯವನ್ನು ಶ್ರೀರಾಮಾನುಜಾಚಾರ್ಯರ ಆಜ್ಞೆ ಮೇರೆಗೆ ಸಕಲೋತ್ಸವಗಳನ್ನು ನೆರವೇರಿಸಿಕೊಂಡಾಡುತ್ತಾ, ಸಕಲ ಭೋಗೋಪೇತವಾದ ಅತಿಮನೋಹರವಾದ ಒಂದು ಶ್ರೀಮಹಾಮಣಿಮಂಟಪವನ್ನು ನಿರ್ಮಿಸಿ ಅದರ ಹತ್ತಿರವೇ ಶ್ರೀನಮ್ಮಾಳ್ವಾರರಿಗೆ ಗರ್ಭಗುಡಿಯನ್ನು ಕಟ್ಟಿಸಿ ಅಧ್ಯಯನೋತ್ಸವಕ್ಕಾಗಿಯೇ ನಮ್ಮಾಳ್ವಾರರ ಉತ್ಸವ ವಿಗ್ರಹವನ್ನು ಮಾತ್ರವೇ ಮೆರವಣಿಗೆ ಮಾಡಿ ಮಹಾಪ್ರತಿಷ್ಠೆ ಮಾಡಿದರು.



- ಮುಂದುವರೆಯುತ್ತದೆ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧ ವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪ ಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗ ವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ಕಳೆದ ಸಂಚಿಕೆಯಿಂದ ....

ಇದು ಸಾಧ್ಯವಾಗಿರುವುದು ಅವನು ವೇಂಗಡದ ಮೇಲೆ ನೆಲಸಿರುವುದರಿಂದ ಅಲ್ಲವೆ? (68) ಭಕ್ತಿಯಿಂದ ಅವನನ್ನು ಆಶ್ರಯಿಸಿವವರು, ವೇದದಲ್ಲಿ ಉಕ್ತವಾಗಿರುವ ಸ್ವರೂಪವನ್ನು ಪಡೆಯುತ್ತಾರೆ. ಭೂಮಿಯನ್ನು ಅಳೆದ ಕಲ್ಯಾಣಗುಣ ಗಣಭರಿತನಾಗಿರುವ ಪರಮಾತ್ಮನ ಸ್ವರೂಪವೇ ತಿರುವೇಂಗಡ! ದೋಷ ಲೋಪವಿನಿತಿಲ್ಲದೆ ಆಶ್ರಿತರಿಗೆ ಪರಮಪದವನ್ನು ನೀಡಬಲ್ಲ ಸಾಮರ್ಥ್ಯ ವೇಂಗಡಕ್ಕೆ ಇರುತ್ತದೆ. (76)ವೇಂಗಡ, ವೇಕಾ, (ಕಾಂಚಿಪುರದ 'ಯಥೋಕ್ತಕಾರಿ'ಎನ್ನುವ ದೇವರ ಸನ್ನಿಧಿ) ಪರಮಪದ ಮತ್ತು ನೀರು ಮತ್ತು ಪುಷ್ಪಗಳಿಂದ ಸಮೃದ್ಧಗೊಂಡ ತಿರುಕ್ಕೋವಲೂರ್ ಕ್ಷೇತ್ರಗಳಲ್ಲಿ ದೇವನು ನಿಂತಿದ್ದಾನೆ, ಕುಳಿತಿದ್ದಾನೆ, ಶಯನಿಸಿದ್ದಾನೆ ಮತ್ತು ಸಂಚಾರ ಮಾಡುತ್ತಿದ್ದಾನೆ. ಈ ದಿವ್ಯ ಕ್ಷೇತ್ರಗಳನ್ನೂ ಅಲ್ಲಿನ ಸ್ವಾಮಿಯ ಸ್ವರೂಪ, ರೂಪ, ಗುಣ ವಿಭವಾದಿಗಳನ್ನು ನೆನೆದರೇ ಸಾಕು ಭವರೋಗಾದಿ ಬಾಧೆಗಳೆಲ್ಲವೂ ಪರಿಹಾರಗೊಳ್ಳುತ್ತವೆ. (77) ಕತ್ತಿಯ ಅಲಗಿನಂತೆ ಪ್ರಕಾಶಮಾನವಾಗಿರುವ ಕಣ್ಣಿನ ಪ್ರಕಾಶವನ್ನುಳ್ಳ ಸ್ತ್ರೀಯರು ದ್ವಾದಶಿಯ ಪವಿತ್ರದಿನದಂದು ಹೂಮಾಲೆಗಳಿಂದ ಸುಸಜ್ಜಿತರಾಗಿ ಬಂದು ಪರಮಾತ್ಮನಿಗೆ ಭಕ್ತಿಯಿಂದ ಸಮರ್ಪಿಸುವ ಧೂಪದ ಹೊಗೆಯು ಆಕಾಶವನ್ನೆಲ್ಲಾ ಆಕ್ರಮಿಸಿಕೊಂಡು ಅಲ್ಲಿನ ನಕ್ಷತ್ರಗಳನ್ನು ಅದರ ದಟ್ಟ ಆವರಣದಿಂದ ಮುಚ್ಚಿ ಬಿಟ್ಟಿದೆ. ಇಂತಹ ದಿವ್ಯ ಮಹಿಮೆಯನ್ನುಳ್ಳ. ದೇವನು ಹಿಂದೊಮ್ಮೆ ಮಾಯಾಮೃಗವನ್ನು ಕೊಂದು ಹಾಕಿದನು. ಅವನೇ ನೆಲಸಿರುವ ದಿವ್ಯಧಾಮ ವೇಂಗಡ (82) ಒಳ್ಳೆಯ ಮನಸ್ಸೇ ಆ ಪುರುಷೋತ್ತಮನು ನಮ್ಮ ಉಳಿಯುವಿಕೆಗೆ ಕಾರಣನಾಗಿದ್ದಾನೆ. ಯಾವಾಗಲೂ ನಮ್ಮನ್ನು ಕಾಪಾಡುತ್ತಾನೆ.ಧ್ಯಾನಿಸುವವರ ಮನಸ್ಸಿನಲ್ಲಿ ಮನೆ ಮಾಡಿಕೊಂಡಿರುವವನು ಅವನು. ಕ್ಷೀರಸಾಗರದಲ್ಲಿಯೂ, ವೇಂಗಡದಲ್ಲಿಯೂ ಇರುವವನೇ, ನಮ್ಮ ಹೃದಯದಲ್ಲೂ ನೆಲಸಿರುವುದು ನಾವೆಷ್ಟು ಧನ್ಯ ಜೀವಿಗಳು.

ಇನ್ನು 'ಎರಡನೆಯ ತಿರುವಂದಾದಿ'ಯನ್ನು ಗಮನಿಸೋಣ. ಇದನ್ನು ಪೂದತ್ತಾಳ್ವಾರ್ ರಚಿಸಿದ್ದಾರೆ. ಇದೂ ನೂರು ಪಾಶುರಗಳ ಪ್ರಬಂಧ.13 ಪಾಶುರಗಳಲ್ಲಿ ವೇಂಗಡದ ಪ್ರಸ್ತಾಪವಿದೆ. ಈ ಆಳ್ವಾರ್ 25, 46, 53,54 ಪಾಶುರಗಳಲ್ಲಿ ವೇಂಗಡವನ್ನು ವರ್ಣಿಸಿದ್ದಾರೆ. ತಿರುವೇಂಗಡಂ ಎಂದು (75)ನೇ ಪಾಶುರದಲ್ಲಿ ನಾಮ ನಿರ್ದೇಶ ಮಾಡಿದ್ದಾರೆ. 28, 45, 54 ಪಾಶುರಗಳ ವೇಂಗಡತ್ತಾನ್ ಎಂದು ಕರೆಯಲ್ಪಡುವ ತಿರುವೇಂಗಡದೊಡೆಯನೆ ಪ್ರಶಂಸೆಯಿದೆ. ವೇಂಗಡವನ್ ಎಂದು 33,37 ನೇ ಪಾಶುರದಲ್ಲಿ ಕೀರ್ತಿ

ಸಲ್ಪಟ್ಟಿದೆ. 48 ನೇ ಪಾಶುರದಲ್ಲಿ ಶೋಲೈಮಲೆ, ಹೊಸದಾಗಿ ವೇಂಗಡವನ್ನು ಕರೆದಿದ್ದಾರೆ. 70 ನೇ ಪಾಶುರದಲ್ಲಿ ತಣ್ ಪೊರುಪ್ಪು "ಶೀತಳವಾದ ಬೆಟ್ಟ" ವೆಂಬುದಾಗಿ ವೇಂಗಡವನ್ನು ಶ್ಲಾಘಿಸಿದ್ದಾರೆ.ವೇಂಗಡದೊಡೆಯನನ್ನು "ಪತಿ" ಎಂಬುದಾಗಿ ಹೊಸ ಸಂಬೋಧನೆಯೊಡನೆ 26, 27 ನೇ ಪಾಶುರಗಳಲ್ಲಿ ಹಾಡಿದ್ದಾರೆ. ಬಿದಿರು ಕಾಡಿನಿಂದ ತುಂಬಿದ ವೇಂಗಡವನ್ನು "ಶೋಲೈ ಮಲೈ" (ಉದ್ಯಾನದಿಂದ ಕೂಡಿದ ಬೆಟ್ಟ) ಎಂದೂ, ಅಬ್ಬಿ, ಜಲಪಾತ, ಕಾಲುವೆಗಳಿಂದ ಕೂಡಿದ ಈ ತಾಣವನ್ನು 'ತಣ್ ಪೊರುಪ್ಪ' ಎಂದು ನಿರ್ದೇಶನ ಮಾಡಿರುವುದೂ 'ಪತಿ' ಎನ್ನುವ ಹೊಸ ಸಂಬೋಧನೆಯಿಂದ ಸ್ವಾಮಿಯನ್ನು ನಮಿಸಿರುವುದೂ ಈ ಆಳ್ವಾರರ ವೈಶಿಷ್ಟ್ಯಗಳು. ಸಾಮಾನ್ಯವಾಗಿ "ಶೋಲೈಮಲೈ"ಎನ್ನುವುದು ತಿರುಮಾಲಿರುಂ ಶೋಲೈಗೆ ಅನ್ವಯ. ಆಳ್ವಾರ್ ಇಲ್ಲಿ ತಿರುಮಲೆಯನ್ನು ಆ ರೀತಿ ಕರೆದಿರುವುದು ನೋಡಿದರೆ ಈ ಎರಡು ಬೆಟ್ಟಗಳನ್ನೂ, ಪರಮಾತ್ಮನು ಒಲಿದಿರುವುದರಿಂದಲೇ ಒಂದೇ ಹೆಸರಿನಿಂದಲೂ, ವಡ ವೇಂಗಡಂ, ತೆನ್‌ವೇಂಗಡಂ, ಎಂಬುದಾಗಿಯೂ ಗುರುತಿಸಿದ್ದಿರಬಹುದಾದ ಭಾವವೇರ್ಪಡುತ್ತದೆ. ಆದರೆ ತಿರುಮಾಲಿರುಂ ಶೋಲೈ ಅನ್ನು ತೆನ್‌ವೇಂಗಡವೆಂದೋ, ವೇಂಗಡವೆಂದೋ ಕರೆದಿಲ್ಲ. ತಿರುಮಲೆಯನ್ನು ವಡವೇಂಗಡವೆಂದು ನಿರ್ದೇಶಿಸಿರುವುದರಿಂದ ಅದಕ್ಕೆ ಒಂದು 'ತೆನ್' ಇರಬೇಕೆಂಬುದಾಗಿ ವಾದ ಮಾಡುವ ದೆಸೆಯಿಂದ ಹೇಳಿದ್ದೇನೆ ಅಷ್ಟೇ!

ನಿತ್ಯಸೂರಿಗಳಿಂದ ಸ್ತುತಿಸಲ್ಪಡುವ ಅನಾದಿ ಕೀರ್ತಿತನಾದ ಸರ್ವೇಶ್ವರನು ಲಂಕೆಗೆ ಹೋಗಿ ರಾವಣನನ್ನು ಸಂಹರಿಸಿದನು. ನಂತರ ಭಕ್ತರ ಉದ್ಧಾರಕ್ಕೆಂದೇ ಅವನು ಬಂದು ನಿಂತಿರುವುದು ಬಿದಿರು ಮಳೆಗಳಿಂದ ಕೂಡಿ, ದೊಡ್ಡದೂ, ವಿಸ್ತಾರವೂ, ತಂಪೂ ಆದ ಶಿಖರಗಳನ್ನು ಉಳ್ಳ ಈ ವೇಂಗಡದ ಗಿರಿಯಲ್ಲಿಯೇ ಅಲ್ಲವೆ! (25) ಸನ್ಮಾರ್ಗ ವಿರೋಧಿಗಳು ಎನಿಸಲ್ಪಡುವ "ಪಂಚಭೂತ ಪಂಚೇಂದ್ರಿಯ" ಗಳನ್ನು ಸ್ವಾಧೀನಪಡಿಸಿಕೊಂಡು, ಪ್ರೀತಿಯಿಂದ ದೇವನನ್ನು ನಮಸ್ಕರಿಸಬೇಕೆಂದು ನಾಮುಂದು, ತಾಮುಂದು ಎಂದು ತಳ್ಳಾಡುತ್ತಿರುವ ಮರ್ತ್ಯರನ್ನು ಕ್ಷೀರಸಾಗರ ಶಾಯಿಯಾದ ಪರಮಾತ್ಮನು,ತನ್ನ ದರ್ಶನಕ್ಕೆಂದೇ ಕಾದು ನಿಂತಿರುವ ಬ್ರಹ್ಮಾದಿ ದೇವತೆಗಳಿಗೆ ಅನುಗ್ರಹಿಸುವಂತೆಯೇ ಕರುಣಿಸಬೇಕೆಂಬ ವ್ಯಾಜದಿಂದ ಇಲ್ಲಿ ನಿತ್ಯ ವಾಸ ಮಾಡುತ್ತಿದ್ದಾನೆ ಅಂತಹ 'ಪತಿ'ಯ ವೇಂಗಡ ನಿಜಕ್ಕೂ ಪವಿತ್ರವೇ ಸರಿ! (26)ನಿತ್ಯ ಸೂರಿಗಳಿಗೆ ಪವಿತ್ರವಾದ ವೈಕುಂಠದಂತೆ,ಮರ್ತ್ಯರಿಗೆ ಭೂಲೋಕದಲ್ಲಿನವೈಕುಂಠ ಇದು. ವೇಂಗಡದಲ್ಲೇ ನಿಂತರೂ ಕೂಡ ವ್ಯಾಪಕವಾಗಿ ಸಂಚಾರ ಮಾಡುವ ಮನಸ್ಸು ಪರಮಾತ್ಮನನ್ನು ಹುಡುಕುತ್ತಾ ಚಂದ್ರನನ್ನು ಆಗಸವನ್ನೂ ಮೀರಿ, ಸುಂದರ ವೃಕ್ಷವನ್ನು ಆಶ್ರಯಿಸುವ ಬಳ್ಳಿಯಂತೆ ಮುಂದು ಮುಂದಕ್ಕೆ ಸಾಗುತ್ತಲೇ ಇದೆ. 27 ಭಕ್ತರಿಂದಲೂ, ದೇವತೆಗಳಿಂದಲೂ ಏಕರೂಪದಲ್ಲಿ ಸ್ತುತಿಸಲ್ಪಡುತ್ತಾನೆ ನಮ್ಮ ಸ್ವಾಮಿ! ಸಾಗರದಲ್ಲಿ ಶಯನಿಸಿದ್ದಾನೆ. ಹಿಂದೆ ಕುದುರೆಯಂತೆ ಬಂದ ಕೇಶಿಯನ್ನು ಬಾಯಿ ಸೀಳಿ ಕೊಂದ ಬಾಲಕನೇ ಈತ. ಇವನೇ ಅಭೇದ್ಯವಾದ ಮದಿಳುಗಳಿಂದ ಆವರಿಸಲ್ಪಟ್ಟು ಮೆರೆಯುವ ಶ್ರೀರಂಗ ಕ್ಷೇತ್ರದಲ್ಲಿಯೂ ನೆಲಸಿರುವುದು. ಇವನೇ ನನ್ನ ಮನಸ್ಸಿನಲ್ಲಿಯೂ ಸರ್ವದಾ ನೆಲೆಗೊಂಡಿರುವುದು (28) ಮನಸ್ಸು ತುಳಸೀಮಾಲಾಧರನನ್ನೇ ನೆನೆಯುತ್ತಿರುವುದು. ಅವನ ನಾಮ ಸಂಕೀರ್ತನಕ್ಕೆ ತಹತಹಿಸುತ್ತಿರುವುದು. ಅಂಗವು ಅವನಿಗೆ ನಮಿಸುತ್ತಿದೆ.

- ಮುಂದುವರೆಯುತ್ತದೆ.



## ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ!** **ನಿಮ್ಮ ರಕ್ಷಣೆ ನಿಮ್ಮ ಕೈಯಲ್ಲಿ** **ವಾಹನ ನಡೆಸಿ!!**

# ಶ್ರೀವೆಂಕಟಾಚಲ ಮಹಾತ್ಮ್ಯೆ






ತೆಲುಗು ಮೂಲ - ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ - ಶ್ರೀಮತಿ. ಎನ್. ಪಾರ್ವತಿ

ಹಿಂದಿನ ಸಂಚಿಕೆಯ ನಂತರ.....

ಆಗ ಸೂತರು ಹೇಳಿದರು. 'ನಾನು ನಿಮ್ಮ ಜಿಜ್ಞಾಸೆಯನ್ನು ಗುರುತಿಸಿದ್ದೇನೆ. ಜೈಮಿನಿ ಒಮ್ಮೆ ನನ್ನೊಂದಿಗೆ ಹಂಚಿಕೊಂಡಿದ್ದ ರಾಮಚರಿತ ಕಥೆಯನ್ನು ನಿಮಗೆ ಹೇಳುತ್ತೇನೆ ಕೇಳಿ.

ಶ್ರೀಹರಿಯು ತ್ರೇತಾಯುಗದಲ್ಲಿ ದಶರಥನ ಮಗನಾಗಿ ಜನಿಸಿದನು. ವಿಶ್ವಾಮಿತ್ರನ ಯಜ್ಞವನ್ನು ಸಂರಕ್ಷಿಸಿದನು. ಅವನು ಶಿವಧನಸ್ಸನ್ನು ಭಂಗ ಮಾಡಿದನು. ಜಾನಕಿಯನ್ನು ವರಿಸಿದನು. ಜಮದಗ್ನಿ ಕುಮಾರನ ಗರ್ವ ಭಂಗ ಮಾಡಿದನು. ಸಾಕೇತಪುರಂ ಸೇರಿದನು. ನಂತರ ತಂದೆಯ ಆಜ್ಞೆಯ ಮೇರೆಗೆ ಅರಣ್ಯ ವಾಸಕ್ಕೆ ತೆರಳಿದನು. ಆ ಅರಣ್ಯದಲ್ಲಿ ರಾವಣ ಜಾನಕಿಯನ್ನು ಅಪಹರಿಸಿದ ಅದಕ್ಕಾಗಿಯೇ ರಾಮನು ರಾವಣನನ್ನು ಕೊಲ್ಲಲು ಸಿದ್ಧನಾದನು. ಸುಗ್ರೀವ ಮತ್ತು ಆಂಜನೇಯರೊಂದಿಗೆ ಸಂಚರಿಸುತ್ತಿದ್ದಾಗ ವೆಂಕಟಾದ್ರಿಪಥದಲ್ಲಿ ಚಲಿಸಿದರು. ಈ ದೃಶ್ಯವನ್ನೆಲ್ಲ ಅಂಜನಾದೇವಿ ನೋಡಿದಳು. ಸುವರ್ಣ ಬೆಟ್ಟದಿಂದ ಇಳಿದು ಬಂದು ಶ್ರೀರಾಮನಿಗೆ ನಮಸ್ಕರಿಸಿದಳು. ಭಗವಾನ್ ರಾಮನು ಸಾಮಾನ್ಯ ಮನುಷ್ಯನಲ್ಲ, ಭಗವಾನ್ ವಿಷ್ಣುವೇ ರಾಮನಾಗಿ ಅವತರಿಸಿದ್ದಾನೆ ಎಂದು ಅವಳು ತಿಳಿದಿದ್ದಳು. ಅದಕ್ಕೆ ಅಂಜನಾದ್ರಿಣಿಯು

ರಾಮ ಸುಕೀರ್ತಿಕಾಮ ! ಬಹುರಾಕ್ಷಸ್ಯುಧವಿರಾಮ ಸದ್ಗಣ
ಸ್ತೋಮ ದಿನೇದ್ರವಂಶ ಘನತೋಯಧಿ ಸೋಮಃದ ಶಸ್ಯ ಭೀಮ ಜಗದೀಶ್ವರ

ಎಂದು ಸ್ತುತಿಸಿದಳು. ತದನಂತರ ಸ್ವಾಮಿ ನಾನು ಈ ವೆಂಕಟಾದ್ರಿಯಲ್ಲಿ ವಾಸಿಸುತಿದ್ದೇನೆ. ನನ್ನ ಮೇಲೆ ಕರುಣೆ ತೋರಿ ವೆಂಕಟಾದ್ರಿಗೆ ಬಾ ಎಂದು ಕೈ ಜೋಡಿಸಿದಳು. ಆಗ ಶ್ರೀರಾಮ,

ಅಮ್ಮ, ನನ್ನ ಪ್ರಯಾಣ ಇಲ್ಲಿಗೆ ಮುಗಿದಿಲ್ಲ. ದೂರ ಹೋಗಬೇಕು. ನನ್ನ ಕೆಲಸ ಮುಗಿದ ನಂತರ ಬರುತ್ತೇನೆ ಎಂದು ಭರವಸೆ ನೀಡಿದರು. ಆದರೆ ಅಂಜನಾದೇವಿಯ ಮಗನು ಸ್ವಾಮಿ ನನ್ನ ತಾಯಿಯ ಆಸೆಯನ್ನು ಪೂರೈಸಲು ನಾನು ಬಯಸುತ್ತೇನೆ. ಮೇಲಾಗಿ ನಿನ್ನನ್ನು ಹಿಂಬಾಲಿಸುತ್ತಿರುವ ಕಪಿವೀರರು ನಿರಂತರ ಪ್ರಯಾಣದಿಂದ ದಣಿದಿದ್ದಾರೆ. ಆದ್ದರಿಂದ ನನ್ನ ಕೋರಿಕೆಯ ಮೇರೆಗೆ ಶ್ರೀವೆಂಕಟಾದ್ರಿಗೆ ಹೋಗುವುದು ಹಿತ ಎಂದನು. ತದನಂತರ ಸ್ವಾಮಿ ! ನಮ್ಮ ತಾಯಿಯ ಆಶ್ರಮ ಸುಂದರವಾಗಿದೆ. ಪ್ರೇಕ್ಷಣೀಯವೂ ಕೂಡ ವಿವಿಧ ರೀತಿಯ ಹಣ್ಣಿನ ಮರಗಳು ಮತ್ತು ಗೆಡ್ಡೆ ಗೆಣಸುಗಳಿವೆ. ಇದಲ್ಲದೆ ಸ್ನಾನ ನೈವೇದ್ಯಕ್ಕೆ ಸೂಕ್ತವಾದ ತೀರ್ಥಗಳಿವೆ. ಅಂಜನಾದ್ರಿ ನಮ್ಮ ಊರಿನಿಂದ ಅನತಿ ದೂರದಲ್ಲಿದೆ. ಪ್ರಭು ! ನಾವು ಸೇರಬೇಕಾದ ಸ್ಥಳವನ್ನು ತಲುಪುವ ಮಾರ್ಗವೂ ಇದೇ ನನ್ನ ತಾಯಿಯ ಆಸೆಯನ್ನು ಪೂರೈಸು ಎಂದು ಹೇಳಿದನು.

ಶ್ರೀರಾಮನು ಅಂಜನಾ, ಅಂಜನಾತನಯು ಮತ್ತು ಕಪಿವೀರರನ್ನು ಭೇಟಿಯಾದನು. ಆದರೆ ತನ್ನ ಸಹೋದರ ಲಕ್ಷ್ಮಣನೊಂದಿಗೆ ಸೌಮಿತ್ರಿ! ಹನುಮಂತನ ಕೋರಿಕೆಯನ್ನು ಕೇಳಿದೆಯಾ? ನಿನ್ನ ಅಭಿಪ್ರಾಯ ಏನು? ಎಂದು ಲಕ್ಷ್ಮಣನನ್ನು ನೋಡಲು ತಕ್ಷಣ ಲಕ್ಷ್ಮಣನು ದೇವ! ವೆಂಕಟಾದ್ರಿಗೆ ಹೋಗಬಹುದು ಎಂದನು. ಆಗ ಶ್ರೀರಾಮನು ಹನುಮಂತನನ್ನು ನೋಡಿ,

'ಮಾರುತಿ ನಿನ್ನ ಮನವಿ ಆಲಿಸಿದೆ. ನಿನ್ನ ಕೋರಿಕೆ ಸಮಂಜಸವಾಗಿದೆ. ನನಗೂ ಇಷ್ಟ ಆದರೂ ನೀನು ಅಂಜನಾದ್ರಿಯ ಮಾರ್ಗವನ್ನು ತಿಳಿದಿರುವೆ ಅದಕ್ಕೆ ನಮಗೆ ಮಾರ್ಗದರ್ಶನ ಮಾಡು ಎಂದನು. ಹಾಗೆಯೇ ಕಪಿವೀರ ಮತ್ತು ಸೀತಾ ಲಕ್ಷ್ಮಣರು ಅಂಜನಾದ್ರಿಯ ಹಾದಿ ಹಿಡಿದರು. ವಾನರ ಸೈನ್ಯವು ರೋಮಾಂಚನದಿಂದ ಚಲಿಸುತ್ತಿರುವಾಗ ದೂರದಲ್ಲಿನ ಮುನಿಗಣವನ್ನು ಕಂಡರು. ವೆಂಕಟಾದ್ರಿಯ ದಾರಿಯಲ್ಲಿ ಸಾಗುತ್ತಿದ್ದ ಸನ್ಯಾಸಿಗಳು ದೂರ ದಿಂದಲೇ ತಮ್ಮ ಕಡೆಗೆ ಬರುತ್ತಿದ್ದ ಶ್ರೀರಾಮನನ್ನು ಕಂಡು ಭಗವಂತನನ್ನು,

ರಾಮ ನೃಪಾಲ! ಘೋರತರ ರಾವಣ ಶೌರ್ಯ ವೈಫಲ್ಯ! ಭವ್ಯ ಸುತ್ರಾಮಾ! ಸುರಾರ್ಯಯೋಗಿ ಜನ ತಾಮಸ ಪಾಲ ಶ್ರೀ ಭೂಮಿ ಸುತ ತ್ಮೋಲಾ ಪರಿಪೂರ್ಣ ಸುಕೀರ್ತಿ ಶೀಲ ! ಎಂದು ಹೊಗಳಿದರು.

'ಸ್ವಾಮಿ! ನಮ್ಮ ಜನ್ಮ ಸಾರ್ಥಕವಾಯಿತು. ಈ ವೆಂಕಟಾದ್ರಿಯಲ್ಲಿ ತಪಸ್ಸು ಮಾಡುವ ತಪಸ್ವಿಗಳು ನಾವು ನಮ್ಮ ತಪೋನಿಷ್ಠೆಗೆ ಬ್ರಹ್ಮ ಮೆಚ್ಚಿದ್ದಾನೆ. ಅಷ್ಟೇ ಅಲ್ಲದೇ, ಶ್ರೀರಾಮನು ಈ ಬೆಟ್ಟಕ್ಕೆ ಬರಬಹುದು ಆ ಭಗವಂತನ ದರ್ಶನ ಪಡೆದು ಸತ್ಯಲೋಕವನ್ನು ತಲುಪಬಹುದು ಎಂದು ಹೇಳಿದ್ದರು. ನಾವು ಆ ಭರವಸೆಯೊಂದಿಗೆ ಇಲ್ಲಿಯೇ ಇದ್ದೇವೆ. ನಮ್ಮ ಆಶಯ ಈಡೇರಿದೆ. ತಾವು ಅನುಮತಿಸಿದರೆ ನಾವು ಸತ್ಯಲೋಕಕ್ಕೆ ಹೋಗುತ್ತೇವೆ ಎನ್ನುತ್ತಾರೆ. ಶ್ರೀರಾಮನು ''ಮುನಿಗಳೇ! ನೀವು ನನಗಾಗಿ ಬಹಳ ದಿನಗಳಿಂದ ಕಾಯು ತ್ತಿದ್ದೀರಿ. ಮೇಲಾಗಿ ನಾನು ಕೂಡ ನಿಮ್ಮಂತೆ ತಪಸ್ವಿಗಳನ್ನು ನೋಡಿ ತೃಪ್ತನಾ ಗಿದ್ದೇನೆ. ಧೈರ್ಯದಿಂದ ಸತ್ಯಲೋಕಕ್ಕೆ ಹೋಗಿ'' ಎಂದು ತಪಸ್ವಿಗಳಿಂದ ಅನುಮತಿ ನೀಡಿದನು. ಅವರು ಸತ್ಯಲೋಕಕ್ಕೆ ತೆರಳಿದರು ಎಂದು ಸೂತರು ಹೇಳಿದಾಗ ಮುನಿಗಳ ಪುರಾಣಕೋವಿದ! ಅದರ ನಂತರ ಶ್ರೀರಾಮನು ಕಪಿ ವೀರರೊಂದಿಗೆ ಆ ಬೆಟ್ಟದಲ್ಲಿ ಹೇಗೆ ಸಮಯ ಕಳೆದನು ಎಂದು ಕೂತೂಹಲ ದಿಂದ ಕೇಳಿದರು.

ಶ್ರೀರಾಮನು ಪರ್ವತದ ಉತ್ತರ ಭಾಗಕ್ಕೆ ನಡೆದು ಅಂಜನಾಶ್ರಮ ವನ್ನು ತಲುಪಿದನು. ಅಲ್ಲಿಯ ಆಕಾಶಗಂಗೆಯಲ್ಲಿ ತೀರ್ಥ ಸ್ನಾನ ಮಾಡಿದರು. ಸಂಧ್ಯಾದಿವಿಧಿಗಳನ್ನು ಮುಗಿಸಿದರು.

ಆಗಲೇ ಸಿದ್ಧಪಡಿಸಿದ್ದ ಫಲಪುಷ್ಪಗಳನ್ನು ಶ್ರೀರಾಮನಿಗೆ ಅರ್ಪಿಸಿ ಆತಿ ಥ್ಯವನ್ನು ನೀಡಿದರು. ನಂತರ ಶ್ರೀರಾಮನು ಅಂಜನಾ ದೇವಿಯಿಂದ ಬೀಳ್ಕೊಂಡು ಸ್ವಾಮಿಪುಷ್ಕರಿಣಿ ಪ್ರದೇಶವನ್ನು ತಲುಪಿದನು. ಪವಿತ್ರ ಪುಷ್ಕರಿಣಿ ಯಲ್ಲಿ ಸ್ನಾನ ಮಾಡಿದನು. ಶ್ರೀರಾಮನು ಅಲ್ಲಿನ ಮುನಿಗಳಿಗೆ ಅನುಗ್ರಹಿಸಿ ದನು. ಪುಷ್ಕರಿಣಿಯ ನೈರುತ್ಯಭಾಗದಲ್ಲಿ ನಿರ್ಮಿಸಿದ ತಾತ್ಕಾಲಿಕ ಪರ್ಣಶಾಲೆ ಯಲ್ಲಿ ಕಪಿವೀರರು ವಿಶ್ರಮಿಸುತ್ತಿದ್ದಾಗ ಅಂಜನೇಯಸ್ವಾಮಿ ಮಧುರಫಲ ಕಂದಮುಲಗಳನ್ನು ಅರ್ಪಿಸಿದಾಗ ಅಯೋಧ್ಯಾ ಪುರದಲ್ಲಿದ್ದಂತೆ ಶ್ರೀರಾಮ ಚಂದ್ರರು ಭಾಸವಾಯಿತು.

ಆಗ ಹನುಮಂತನು ಕಪಿವರ್ಯರನ್ನು ನೋಡಿ ಸಹಚರರೇ! ಈ ಪರ್ವತ ದಲ್ಲಿಲ್ಲದ ಹಣ್ಣುಗಳಿಲ್ಲ. ಹಲಸು,ಮಾವು, ದ್ರಾಕ್ಷಿ, ಬಡಲಿಕಾ, ಬಾಳೆಹಣ್ಣು ಎಲ್ಲವೂ ಇವೆ. ನಿಮ್ಮನ್ನು ತಡೆಯುವವರು ಯಾರೂ ಇಲ್ಲ. ''ಮನಸಾ ಇಚ್ಛೆಯಂತೆ ತಿರು ಗಾಡಿ ಸವಿಯಿರಿ'' ಎನ್ನಲು ಅದಕ್ಕಾಗಿ ಕಾಯುತ್ತಿದ್ದ ಕಪಿವರರು ಜಿಗಿದರು. ಅವರ ಆಟ, ಕುಣಿತ, ಸಂಭ್ರಮಕ್ಕೆ ಮಿತಿಯೇ ಇರಲಿಲ್ಲ.

ಕಪಿವೀರರು ಮೊದಲು ಜೇನು ಸಂಗ್ರಹ ಮಾಡಿ ರಾಶಿ ಹಾಕಿದರು. ಎಲ್ಲವನ್ನೂ ಹಂಚಿಕೊಂಡರು. ಜೇನನ್ನು ಚಪ್ಪರಿಸುತ್ತಾ ಪಕ್ಕದವರಿಗೆ ಅಣಕಿಸುತ್ತಾ ಮೂಗು ಹಿಸುಕುತ್ತಾ ,ತಲೆ ಕೆರೆದುಕೊಳ್ಳುತ್ತಾ ಒಬ್ಬರನ್ನೊಬ್ಬರು ಕಚ್ಚುತ್ತಾ, ಇನ್ನೊ ಬ್ಬರ ಕಿವಿಗಳನ್ನು ಚಪ್ಪರಿಸುತ್ತಾ, ಹಣ್ಣು, ಹಂಪಲುಗಳನ್ನು ಕಸಿದುಕೊಳ್ಳುತ್ತಾ ಒಂದು ಬೆಟ್ಟದಿಂದ ಇನ್ನೊಂದು ಗುಟ್ಟಕ್ಕೆ ಹಾರುತ್ತಾ ಪರ್ವತಾಕಾರದ ಕಪಿಗಳು ತಮ್ಮ ನಿಜಜಾತಿ ಕುಲಚೇಷ್ಟಗಳನ್ನು ಮಾಡುತ್ತಿದ್ದರು.

ತರುವಾಯ ಜೇನುಪಾನದ ಅಮಲಿನಲ್ಲಿ ಕಪಿಗಳು ಅನೇಕ ಬೆಟ್ಟಗಳನ್ನು ನೋಡಿದರು. ಈ ಬೆಟ್ಟವು ಅದ್ಭುತವಾಗಿದೆ, ಈ ಪರ್ವತದ ಮಹಿಮೆ ಅನಂತ ವಾದದು. ಶ್ರೀರಾಮನ ಕೃಪೆಯಿಂದ ಇಲ್ಲಿಗೆ ಬರಲು ಸಾಧ್ಯವಾಯಿತು. ರಾಮನ ಋಣ ತೀರಿಸಬೇಕು. ಎಂದು ಕಪಿವರು ಹೇಳಿದರೆ ಹೌದು ನಿಜ ಶ್ರೀರಾಮನಿಗೆ ಅಪಚಾರವೆಸಗಿದ ರಾವಣನನ್ನು ನನ್ನ ಬಾಲದಿಂದ ಬಂಧಿಸಿ ಬಿಡಿಸಿಕೊಳ್ಳಲು ಪ್ರಯತ್ನಿಸಿದರೂ ಅವನನ್ನು ಬಿಡದೇ ರಾಮನ ಮುಂದೆ ತಂದು ಎಸೆಯುತ್ತೇನೆ ಎಂದನು.

ಇನ್ನೊಬ್ಬ ಕಪಿಯು ನಾನೇನು ನಿನಗಿಂತ ಕಡಿಮೆಯೇ ಸಮುದ್ರ ತೀರ ದಲ್ಲಿರುವ ಲಂಕಾಪುರವನ್ನೇ ತಂದು ಬಿಡುತ್ತೇನೆ ಎಂದನು. ಎಲ್ಲಾ ಕಪಿಗಳು ಸೈ ಸೈ ಎಂದರು.

ಹತ್ತು ತಲೆಯ ಮನುಷ್ಯ ಭೂಗತ ಲೋಕದಲ್ಲಿ ಅಡಗಿಕೊಂಡಿದ್ದರೂ, ಅವನನ್ನು ಕಟ್ಟಿಹಾಕಿ ಎಳೆದು ತರುತ್ತೇನೆ ಎಂದು ಕೆಲವರೆಂದರು.

ಆಕಾಶದಲ್ಲಿ ಸೂರ್ಯಚಂದ್ರರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿದೆ. ಎಂದು ಕೆಲವರು ವೀರೋಚಿತವಾಗಿ ಜಂಭಿಸಿದರು. ಒಬ್ಬರಿಗೊಬ್ಬರು ಮಾತ ನಾಡುತ್ತಿರುವಾಗ ಸ್ವಾಮಿ ಪುಷ್ಕರಿಣಿಯ ಈಶಾನ್ಯದಲ್ಲಿ ಒಂದು ಗುಹೆಯನ್ನು ನೋಡಿದರು ಮತ್ತು ಆ ಗುಹೆಯನ್ನು ಪ್ರವೇಶಿಸಿದರು ಎಂದು ಸೂತರು ಹೇಳಿ ಮುಗಿಸಿದರು. ಮಂಗಗಳು ಬೆಟ್ಟದಲ್ಲಿ ಒಂದು ಗುಹೆಯನ್ನು ನೋಡಿ ಆಶ್ಚರ್ಯ ಚಕಿತರಾದರು. ಅವರು ಕುತೂಹಲದಿಂದ ಗುಹೆಯನ್ನು ಪ್ರವೇಶಿಸಿದರು. ಗುಹೆ ತುಂಬಾ ದೊಡ್ಡದು. ಹಾಗೆಯೇ ಇಡೀ ಗುಹೆ ಕತ್ತಲೆಯಾಗಿದೆ ಆದರೂ ಮಂಗ ಗಳು ಕುತೂಹಲದಿಂದ ಮುಂದೆ ಸಾಗಿದವು ಗುಹೆಯಲ್ಲಿ ದಿವ್ಯ ದೀಪ ದರ್ಶನ ವಾಯಿತು. ಆ ಜ್ಯೋತಿಯ ಬಳಿ ಹೋಗಲು ಹೆಜ್ಜೆ ಹಾಕಿದರು.

ಮುಂದುವರೆಯುತ್ತದೆ.



## ಜೂನ್ ತಿಂಗಳ

# ರಾಶಿ ಫಲಗಳು

ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್



**ಮೇಷ**

ಹಠಾತ್ತಾಗಿ ಸಂಭವಿಸುವ ಪರಿಣಾಮಗಳನ್ನು ಎದುರಿಸಲು ಸಿದ್ಧರಾಗುವಿರಿ. ಅಣ್ಣತಮ್ಮ ಅಕ್ಕ - ತಂಗಿಯರ ಸಂಬಂಧಗಳು ಅಷ್ಟಷ್ಟೇ ಇರುತ್ತದೆ. ಮನಶಾಂತಿ ಕಡಿಮೆ ಇರುತ್ತದೆ. ಅವಶ್ಯಕತೆಗೆ ತಕ್ಕಂತೆ ಸಾಕಗುವಷ್ಟು ಹಣವನ್ನು ಹೊಂದಿಸಿ ಕೊಳ್ಳುವಿರಿ.

**ವೃಷಭ**

ರಕ್ತಪರಿಚಲನೆ ಆರೋಗ್ಯ ಸಮಸ್ಯೆಗಳು ನಿರೂಪಯುಕ್ತ ತಿರುಗಾಟ ನೆನೆದ ಕಾರ್ಯಗಳಲ್ಲಿ ಅಲಸ್ಯ ಕಾರ್ಯ ವಿಲಂಬ ಆದಾಯಕ್ಕೆ ಮೀರಿದ ಖರ್ಚು ಮಾಸವೆಲ್ಲ ಆರ್ಥಿಕ ಕುಟುಂಬ ವಿಷಯಗಳನ್ನು ಮುಂದೂಡುವಿರಿ.

**ಮಿಥುನ**

ಈ ಸಮಯದಲ್ಲಿ ಲೇವಾದೇವಿ ಲಾಭದಾಯಕವಾಗಿರುತ್ತದೆ. ಆರ್ಥಿಕ ಪರಿಸ್ಥಿತಿ ಬೆಳವಣಿಗೆ ಆಗಲಿದೆ. ಆರೋಗ್ಯ ವಿಷಯಗಳಿಗೆ ಸಹ ಇದು ಸಕಾಲ ಈ ದಿನಗಳಲ್ಲಿ ಶೀತಲ ಪ್ರದೇಶಗಳ ಪ್ರವಾಸಗಳು ಲಾಭದಾಯಕವಾಗಿರುತ್ತದೆ.

**ಕರ್ಕಾಟಕ**

ನೀವು ಅಪಾರ ತಿಳುವಳಿಕೆಯಿಂದ ಸ್ಪರ್ಧೆಯಲ್ಲಿ ಪ್ರತಿವಾದಿಗಳನ್ನು ಅಬ್ಬರದಿಂದ ಕೆಳಗೆಡುವಿರಿ. ಪ್ರಜಾ ಆಧಾರ ಅಭಿಮಾನಗಳನ್ನು ತೋರುವಿರಿ. ಇತರರಿಗೆ ನಿಮ್ಮ ಮೇಲೆ ಸಾನೂಕೂಲ ದೋರಣೆ ಉಂಟಾಗುತ್ತದೆ. ಧನ ದಾನ್ಯಗಳನ್ನು ವೃದ್ಧಿ ಪಡಿಸಿಕೊಳ್ಳುವಿರಿ.

**ಸಿಂಹ**

ವ್ಯಾಧಿಯಿಂದ ಉಪಶಮನ ಆದಾಯ ಹಾಗೂ ವೃದ್ಧಿಯನ್ನು ಹೊಂದುವಿರಿ. ಎಲ್ಲರೂಂದಿಗೆ ಸತ್ಸಂಬಂಧವಿರುತ್ತದೆ. ಎಲ್ಲ ಮಾರ್ಗಗಳಲ್ಲಿಯೂ ಆದಾಯವಿರುತ್ತದೆ. ವ್ಯಾಪಾರಸ್ಥರಿಗೆ ಫಲಗಳು ಒದಗುತ್ತದೆ. ಲಾಭದ ಆದಿಯಲ್ಲಿ ಪ್ರಯಣಿಸುವಿರಿ.

**ಕನ್ಯ**

ಸರ್ಕಾರದಿಂದ ಸತ್ಕಾರ ಪುರಸ್ಕಾರಗಳು ಲಭಿಸುತ್ತದೆ. ತಂದೆಯೊಂದಿಗೆ ವಾದ ವಿವಾದಗಳನ್ನು ನಿವಾರಿಸಿಕೊಳ್ಳುವುದು ಒಳ್ಳೆಯದು. ದೂರಪ್ರಯಾಣಗಳು ಒದಗಿ ಬಂದು ಅನುಕೂಲಕರವಾಗಿರುತ್ತವೆ. ಓದಿನಲ್ಲಿ ವೃದ್ಧಿ ಕಾಣಿಸಿಕೊಳ್ಳಲಿದೆ.

**ತುಲಾ**

ತಿಂಗಳಾರಂಭದಲ್ಲಿ ವಿಶೇಷ ಫಲಗಳು ಸಾಮಾನ್ಯವಾಗಿರುತ್ತವೆ. ಆನಂದಭರಿತವಾದ ಜೀವನವನ್ನು ಹೊಂದುತ್ತಾರೆ. ಕೋಪತಾಪಗಳನ್ನು ಆವೇಶವನ್ನು ಹದ್ದುಬಸ್ತಿನಲ್ಲಿಟ್ಟು ಕೊಳ್ಳಬೇಕು.

**ವೃಶ್ಚಿಕ**

ಓದಿನ ವಿಷಯದಲ್ಲಿ ಮತ್ತಷ್ಟುಶ್ರಮ ಹಾಗೂ ಮತ್ತಷ್ಟುಶ್ರದ್ಧೆ ಅಗತ್ಯ. ಎಲ್ಲಾ ಪ್ರಯತ್ನಗಳು ಜಯದಲ್ಲಿ ಕೊನೆಗೊಳ್ಳುತ್ತದೆ. ಲೇವಾದೇವಿಗಳಿಗೆ ಸೂಕ್ತ ಕಾಲವಲ್ಲ. ದೂರ ಪ್ರಯಾಣ ಮಾಡುವಲ್ಲಿ ಯೋಚಿಸಿ ಮುಂದುವರಿಯಿರಿ. ಶುತ್ರುವರ್ಗ ಹೆಚ್ಚಾಗಲಿವೆ.

**ಧನಸ್ಸು**

ಆರ್ಥಿಕವಾಗಿ ಬಹಳ ಅನುಕೂಲಕರವಾದ ಪರಿಸ್ಥಿತಿ. ಕುಟುಂಬದಿಂದಲೂ ನಿಮಗೆ ಒಳ್ಳೆಯ ಸಹಾಯ ದೊರಕಲಿದೆ. ಸಂತಾನ ವಿಷಯಗಳಲ್ಲಿ ಸಹಾ ಬಹಳ ಪ್ರೋತ್ಸಾಹಕರವಾಗಿರುತ್ತದೆ. ಲೇವಾದೇವಿಗಳು ಒಳ್ಳೆಯ ಫಲಗಳನ್ನು ಕೊಡುತ್ತದೆ.

**ಮಕರ**

ವ್ಯಕ್ತಿಗತ ಜೀವನ ಸಮಸ್ಯಗಳಿಂದ ಕೂಡಿರುತ್ತದೆ. ತಿಂಗಳ 2 ನೇ ಭಾಗದಲ್ಲಿ ಒಳ್ಳೆಯ ಆದಾಯ ಮೇಲಿನ ಅಧಿಕಾರಿಗಳಿಂದ ಸಹೋದರರಿಂದ ಒಳ್ಳೆಯ ಸಂಬಂಧಗಳು ಏರ್ಪಡಲಿವೆ.

**ಕುಂಭ**

ನಿಮ್ಮ ಪ್ರಯತ್ನಗಳು ಒಳ್ಳೆಯ ಪ್ರತಿಫಲಗಳನ್ನು ನೀಡಲಿದೆ. ನಿಮಗೆ ಇದು ಮತ್ತಷ್ಟು ಪ್ರೇರಣೆ ಶಾರೀರಿಕ ಶಕ್ತಿ ಹಾಗೂ ಆರೋಗ್ಯ ಸಂತೃಪ್ತಿಕರವಾಗಿರುತ್ತದೆ. ದೀರ್ಘಕಾಲದ ವ್ಯಾಧಿಗಳಿಂದ ಉಪಶಮನವಾಗಲಿದೆ.

**ಮೀನ**

ಉದ್ಯೋಗದಲ್ಲಿ ಹೊಸ ಜವಾಬ್ದಾರಿಯನ್ನು ಹೊಂದುವುದು ಅಮೋಘವಾದ ವಾಕ್‌ಜರೀಯನ್ನು ಪ್ರದರ್ಶಿಸುವಿರಿ. ಇತರರ ಮೇಲೆ ಜಯ ದೀರ್ಘಕಾಲ ಸೋಂಕುಗಳಿಗೆ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವಿರಿ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ. ಅನಸೂಯ ಎಸ್.ರಾಜೀವ್

**1. ತೀರ್ಥಸ್ನಾನ ಮಾಡುವುದರಿಂದ ಮಂತ್ರಪಠಣದಿಂದ ಹಾಗೂ ಸತ್ಕರ್ಮಗಳನ್ನು ಮಾಡುವುದರಿಂದ ಪಾಪ ಹೇಗೆ ಪರಿಹಾರವಾಗುತ್ತದೆ? ಪುಣ್ಯಕ್ಕೆ ಹೇಗೆ ಕಾರಣವಾಗುತ್ತದೆ?**

**ಉತ್ತರ:** ಪಾಪದ ಗುರುತುಗಳು ಮನಸ್ಸನ್ನು ಕಲಕುತ್ತವೆ. ಕಲುಷಿತವನ್ನಾಗಿ ಮಾಡುತ್ತವೆ. ಕ್ಷೋಭೆಯನ್ನುಂಟು ಮಾಡುತ್ತದೆ. ಪುಣ್ಯದ ಗುರುತುಗಳು ಅಂತಹ ಕ್ಷೋಭೆಯನ್ನೂ ಹೋಗಲಾಡಿಸುವ ಪ್ರತಿರಂಗಗಳನ್ನು ಏಳಿಸುತ್ತವೆ. ಮತ್ತು ಕಾಲುಷ್ಯವನ್ನು ಕಳೆದು ನೆಮ್ಮದಿಯ ಸ್ಥಿತಿಯನ್ನುಂಟು ಮಾಡಲು ಕಾರಣವಾಗುತ್ತವೆ. ತೀರ್ಥಸ್ನಾನ ಮಾಡಿದಾಗ ಶರೀರದಲ್ಲಿರುವ ಮಲವೂ ಜಾಡ್ಯವೂ ತೊಳೆದು ಹೋಗುತ್ತವೆ. ಆದ್ದರಿಂದ ಅಂತಃಕರಣದಲ್ಲಿ ಪ್ರಸನ್ನತೆ ಉಂಟಾಗುತ್ತದೆ. ಪಾಪದ ಗುರುತಿನಿಂದ ಉಂಟಾಗಿರುವ ಗಲಿಬಿಲಿಯ ಕಾಲುಷ್ಯವು ನೀಗುತ್ತದೆ. ಮನಸ್ಸು ತಿಳಿಯಾಗುತ್ತದೆ. ಇದರಿಂದ ದುಃಖದ ಕೆಲವು ಗುರುತುಗಳು ಅಳಿಸಲ್ಪಟ್ಟು ನೆಮ್ಮದಿ ಉಂಟಾಗುತ್ತದೆ. ಆ ನೆಮ್ಮದಿಯನ್ನುಂಟು ಮಾಡುವ ಗುರುತುಗಳೇ ಪುಣ್ಯ. ಅಳಿಸಿಹೋದ ವಕ್ರರೇಖೆಗಳೇ ಪಾಪ. ಪವಿತ್ರವಾದ ಮಂತ್ರಗಳನ್ನು ಪಠಿಸುತ್ತಾ ಸ್ನಾನ ಮಾಡುವುದರಿಂದ ಕೆಲವು ಕೆಟ್ಟ ಗುರುತುಗಳು ಅಳಿದು ಒಳ್ಳೆಯ ಗುರುತುಗಳು ಮನಸ್ಸಿನ ಪಟಲದಲ್ಲಿ ಮುದ್ರಿತವಾಗುತ್ತವೆ.

**2.ಪುಣ್ಯ ಪಾಪಗಳೆಂದರೇನು? ಪುಣ್ಯ ಪಾಪಗಳನ್ನೂ ಮಾಡುವ ವ್ಯಕ್ತಿ ಸತ್ತ ಮೇಲೆ ಅವನಲ್ಲಿದ್ದ ಪುಣ್ಯ ಪಾಪಗಳೂ ಅವನ ಜೊತೆಯಲ್ಲಿ ಸುಟ್ಟುಹೋಗುವುದಿಲ್ಲವೇ?**

**ಉತ್ತರ:** ಪುಣ್ಯ ಪಾಪಗಳು ಒಂದು ತರಹದ ಗುರುತುಗಳು ಸಂಸ್ಕಾರಗಳು, ವಾಸನೆಗಳು ಅವುಗಳಲ್ಲಿ ಸುಖಕ್ಕೆ ಕಾರಣವಾಗುವ ಗುರುತುಗಳಿಗೆ ಪುಣ್ಯವೆಂದು ಹೆಸರು. ದುಃಖಕ್ಕೆ ಕಾರಣವಾಗುವ ಗುರುತುಗಳಿಗೆ ಪಾಪ ಎಂದು ಹೆಸರು. ಅವೆರಡೂ ಮನಃಪಟಲದ ಮೇಲೆ ಮುದ್ರಿತವಾಗುತ್ತದೆ. ಆ ಒಳಗಿನ ಗುರುತುಗಳನ್ನು ಅಳಿಸುವುದು ದುಃಸಾಧ್ಯ. ದೇಹಿಯು ದೇಹವನ್ನು ಬಿಟ್ಟಾಗಲೂ ಅವು ನಾಶ ಹೊಂದುವುದಿಲ್ಲ. ಮನಷ್ಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ಎಂಬಂತೆ ಮನಸ್ಸೂ ಶುದ್ಧಾತ್ಮನ ಜೊತೆಯಲ್ಲಿಯೇ ಹೋಗುತ್ತದೆ. ಅದರಲ್ಲಿ ಆ ಹಳೆರೆಕಾರ್ಡುಗಳೆಲ್ಲಾ ಇರುತ್ತವೆ. ಮನಸ್ಸಿನ ಚಕ್ರವನ್ನು ದಾಟಿ ಬ್ರಹ್ಮಸ್ಥಾನಕ್ಕೇ ಹಾರಿ ಹೋದವನನ್ನು ಮಾತ್ರ ಆ ಗುರುತುಗಳು ಸೋಂಕುವುದಿಲ್ಲ. ಅಂದರೆ ಮೋಕ್ಷ ಹೊಂದಿದವರಿಗೆ ಅದರ ಭಯವಿಲ್ಲ. ಉಳಿದವರಲ್ಲಿ ಸುಖಕ್ಕೆ ಕಾರಣವಾದ ಒಳ್ಳೆಯ ಗುರುತುಗಳು ಅಂದರೆ ಪುಣ್ಯದ ವಾಸನೆಗಳೂ ಹಾಗೆಯೇ ದುಃಖಕ್ಕೆ ಕಾರಣವಾಗುವ ಕೆಟ್ಟ ಗುರುತುಗಳಾದ ಪಾಪದ ವಾಸನೆಗಳೂ ಇದ್ದೇ ಇರುತ್ತವೆ. ಇವುಗಳಲ್ಲಿ ಪುಣ್ಯದ ಗುರುತುಗಳನ್ನು ಮುದ್ರಿಸುವ ಕೆಲಸಗಳನ್ನು ಮಾಡಿದರೆ ಸುಖ ಅದಕ್ಕೆ ವಿಪರೀತ ಗುರುತುಗಳನ್ನು ಮಾಡುವ ಕೆಲಸ ಮಾಡಿದರೆ ದುಃಖ.

**3.ಪಿತೃಗಳ ಹೆಸರಿನಲ್ಲಿ ನೀಡಲಾದುದು ಅವರಿಗೆ ದೊರೆಯುತ್ತದೆಯೇ?**

**ಉತ್ತರ :** ಪಿತೃಗಳ ಹೆಸರಿನಲ್ಲಿ ಏನೆಲ್ಲ ಕೊಡಲಾಗುವುದೋ ಅದೆಲ್ಲವೂ ಅವರಿಗೆ ದೊರೆಯುತ್ತದೆ. ಅವರು ಬೇಕಾದರೆ ಯಾವ ಯೋನಿಯಲ್ಲಿಯೇ ಇರಲಿ, ಅವರ ಹೆಸರಿನಿಂದ ಕೊಡಲ್ಪಟ್ಟ ಪಿಂಡ ತರ್ಪಣವು ಅವರಿಗೇ ಅದೇ ಯೋನಿಗನುಸಾರವಾಗಿ ಖಾದ್ಯ ಅಥವಾ ಪೇಯ ಪದಾರ್ಥಗಳ ರೂಪದಲ್ಲಿ ದೊರೆಯುತ್ತದೆ. ಹೇಗೆಂದರೆ ಪಿತೃವು ಹಸುಯೋನಿಯಲ್ಲಿದ್ದರೆ ಹುಲ್ಲಾಗಿ ದೊರೆಯುವುದು. ಎಂತಹ ವಸ್ತುವಿನಿಂದ ಅವರ ನಿರ್ವಹಣೆಯಾಗುತ್ತದೆಯೋ ಅಂತಹ ವಸ್ತು ಅವರಿಗೆ ದೊರೆಯುತ್ತದೆ. ಯಾರ ಪಿತೃಗಳು ಮುಕ್ತಿಯನ್ನು ಹೊಂದಿರುತ್ತಾರೋ ಅವರಿಗೆ ಪಿಂಡಪ್ರದಾನ ಮಾಡಿದರೆ ಅದರ ಫಲ ವ್ಯಕ್ತಿಯ ಮರಣಾನಂತರ ದೊರೆಯುತ್ತದೆ.

**4. ಮನೆಯಲ್ಲಿ ನಾಯಿ ಸಾಕುವುದು ಒಳ್ಳೆಯದೋ ಇಲ್ಲವೋ?**

**ಉತ್ತರ :** ಮನೆಯಲ್ಲಿ ನಾಯಿಯನ್ನು ಇಟ್ಟುಕೊಳ್ಳಬಾರದು. ನಾಯಿ ಸಾಕುವವನು ನರಕಕ್ಕೆ ಹೋಗುತ್ತಾನೆ ಎಂದು ಮಹಾಭಾರತದಲ್ಲಿ ಇಂದ್ರ ಯುಧಿಷ್ಠರನಿಗೆ ಹೇಳುತ್ತಾನೆ. ಮಹಾಭಾರತದಲ್ಲಿ ತಿಳಿಸಿರುವಂತೆ ಮನೆಯಲ್ಲಿ ಒಡೆದ ಪಾತ್ರೆ, ಮುರಿದ ಮಂಚ ಕೋಳಿ, ನಾಯಿ, ಅಶ್ವತ್ಥವೃಕ್ಷ ಇರುವುದು ಒಳ್ಳೆಯದಲ್ಲ. ಒಡೆದ ಪಾತ್ರೆಯಲ್ಲಿ ಕಲಿಯುಗದ ವಾಸ ಎಂದು ಹೇಳಲಾಗಿದೆ. ಮುರಿದ ಮಂಚ ಇರುವುದರಿಂದ ಧನ ಹಾನಿಯಾಗುತ್ತದೆ. ಕೋಳಿ ಮತ್ತು ನಾಯಿಗಳಿರುವುದರಿಂದ ದೇವರು ಆ ಮನೆಯಲ್ಲಿ ಹವಿಸ್ಸನ್ನು ಸ್ವೀಕರಿಸುವುದಿಲ್ಲ ಹಾಗೂ ಮನೆಯಲ್ಲಿ ಯಾವುದಾದರೂ ದೊಡ್ಡ ಮರವಿದ್ದರೆ ಅದರ ಬುಡದಲ್ಲಿ ಹಾವು, ಚೇಳು ಮುಂತಾದ ಜಂತುಗಳು ಸೇರಿಕೊಳ್ಳುವುದು ಸ್ವಾಭಾವಿಕ. ಮನೆಯಲ್ಲಿ ನಾಯಿಯನ್ನು ಸಾಕುವುದು ವಾಸ್ತು ಪ್ರಕಾರ ದೋಷವೆಂದೇ ಹೇಳಲಾಗಿದೆ. ಆದರೆ ನಾಯಿಯನ್ನು ಸಾಕಲೇ ಬೇಕೆಂದಿದ್ದರೆ ಮನೆಯ ಹೊರಗೆ ಸಾಕಿ. ನಿಮ್ಮಿಂದ ದೂರವಿರಿಸಬೇಕಾಗುತ್ತದೆ. ನಾಯಿಯನ್ನು ಸಾಕಿ ಅದನ್ನು ರಕ್ಷಿಸಿ ಆದರೆ ನಾಯಿಯೊಡನೆ ಮಿಳಿತವಾಗಿರುವುದು ಅದನ್ನು ಜೊತೆಯಲ್ಲಿ ಇಟ್ಟು ಕೊಳ್ಳುವುದು ಅದರಲ್ಲಿ ಮಿತಿ ಮೀರಿದ ಆಸಕ್ತಿ ಇಡುವುದು ಪತನಕ್ಕೆ ಕಾರಣವಾಗಿದದೆ. ಏಕೆಂದರೆ ಅಂತ್ಯ ಕಾಲದಲ್ಲೂ ಅನ್ನು ನೆನೆಸಿಕೊಂಡರೆ ಮುಂದಿನ ಜನ್ಮದಲ್ಲಿ ನಾಯಿಯೇ ಆಗ ಬೇಕಾಗುತ್ತದೆ.

ನೀತಿ ಕಥೆ

# ನಮಸ್ಕಾರದ ಪ್ರಾಮುಖ್ಯತೆ

- ಪ್ರಣವ



ಮಹಾಭಾರತದ ಯುದ್ಧ ನಡೆಯುತ್ತಿತ್ತು. ಒಂದು ದಿನ ದುರ್ಯೋಧನನ ಚುಚ್ಚು ಮಾತಿನಿಂದ ನೊಂದ ಭೀಷ್ಮ ಪಿತಾಮಹ ಹೀಗೆ ಘೋಷಿಸುತ್ತಾರೆ. ''ನಾನು ನಾಳೆ ಪಾಂಡವರನ್ನು ಕೊಲ್ಲುತ್ತೇನೆ" ಅವರ ಘೋಷಣೆ ಬಂದ ಕೂಡಲೇ ಪಾಂಡವರ ಶಿಬಿರದಲ್ಲಿ ಆತಂಕ ಹೆಚ್ಚಾಯಿತು.


ಭೀಷ್ಮರ ಸಾಮರ್ಥ್ಯಗಳ ಬಗ್ಗೆ ಎಲ್ಲರಿಗೂ ತಿಳಿದಿತ್ತು. ಆದ್ದರಿಂದ ಪ್ರತಿಯೊಬ್ಬರೂ ಕೆಟ್ಟದ್ದರ ಸಾಧ್ಯತೆಯ ಬಗ್ಗೆ ಚಿಂತೆ ಮಾಡಿದರು. ನಂತರ ಶ್ರೀಕೃಷ್ಣ ದ್ರೌಪದಿಗೆ, ಈಗ ನನ್ನೊಂದಿಗೆ ಬಾ ಎಂದು ಹೇಳಿ ಶ್ರೀಕೃಷ್ಣನು ದ್ರೌಪದಿಯೊಂದಿಗೆ ನೇರವಾಗಿ ಭೀಷ್ಮ ಪಿತಾಮಹನ ಶಿಬಿರವನ್ನು ತಲುಪಿದರು. ಶಿಬಿರದ ಹೊರಗೆ ನಿಂತು ಕೃಷ್ಣ ದ್ರೌಪದಿಗೆ 'ಒಳಗೆ ಹೋಗಿ, ಅಜ್ಜನಿಗೆ ನಮಸ್ಕರಿಸು" ಎಂದು ಹೇಳಿದ ದ್ರೌಪದಿ ಒಳಗೆ ಹೋಗಿ ಪಿತಾಮಹ ಭೀಷ್ಮ ನಿಗೆ ನಮಸ್ಕರಿಸಿದಾಗ ಅವರು "ಅಖಂಡ ಸೌಭಾಗ್ಯವತಿ ಭವ" ಎಂದು ಆಶೀರ್ವದಿಸಿ ನಂತರ ಅವರು ದ್ರೌಪದಿಯನ್ನು ಕೇಳಿದರು.

"ಮಗಳೇ , ಇಂತಹ ರಾತ್ರಿಯಲ್ಲಿ ನೀನು ಏಕಾಂಗಿಯಾಗಿ ಇಲ್ಲಿಗೆ ಹೇಗೆ ಬಂದಿದ್ದೀ ಶ್ರೀಕೃಷ್ಣನು ನಿನ್ನನ್ನು ಇಲ್ಲಿಗೆ ಕರೆತಂದಿದ್ದಾನಾ? ದ್ರೌಪದಿ ಹೇಳಿದಳು. "ಹೌದು ಮತ್ತು ಅವರು ಕೋಣೆಯ ಹೊರಗೆ ನಿಂತಿದ್ದಾರೆ. ನಂತರ ಭೀಷ್ಮನು ಸಹ ಕೋಣೆಯಿಂದ ಹೊರಬಂದನು. ಇಬ್ಬರೂ ಪರಸ್ಪರ ನಮಸ್ಕರಿಸಿದರು. ಭೀಷ್ಮ ಹೇಳಿದ ನನ್ನ ಒಂದು ವಚನವನ್ನು ನನ್ನ ಇತರ ವಚನಗಳಿಂದ ಕತ್ತರಿಸಲು ಶ್ರೀಕೃಷ್ಣನಿಂದ ಮಾತ್ರ ಸಾಧ್ಯ" ಶಿಬಿರದಿಂದ ಹಿಂದಿರುಗುವಾಗ, ಶ್ರೀಕೃಷ್ಣನು ದ್ರೌಪದಿಗೆ ಹೀಗೆ ಹೇಳಿದನು.

ಒಮ್ಮೆ ನೀನು ಹೋಗಿ ಅಜ್ಜನಿಗೆ ಗೌರವ ಸಲ್ಲಿಸಿದ್ದರಿಂದ ನಿನ್ನ ಗಂಡಂದಿರಿಗೆ ಜೀವನ ಸಿಕ್ಕಿದೆ."ನೀನು ಈ ಮುಂಚೆ ಭೀಷ್ಮ, ಧೃತರಾಷ್ಟ್ರ ದ್ರೋಣಾಚಾರ್ಯ ಮುಂತಾದ ಹಿರಿಯರುಗಳಿಗೆ ನಮಸ್ಕಾರ ಮಾಡುತ್ತಿದ್ದರೆ ಮತ್ತು ದುರ್ಯೋಧನ-ದುಶ್ಯಾಸನ, ಇನ್ನುಳಿದವರ ಪತ್ನಿಯರು ಸಹ ಪಾಂಡವರಿಗೆ ನಮಸ್ಕಾರ ಮಾಡುತ್ತಿದ್ದರೆ ಬಹುಶಃ ಈ ಯುದ್ಧವು ಆಗುತ್ತಿರಲಿಲ್ಲ.

ಅಂದರೆ, ಪ್ರಸ್ತುತ ನಮ್ಮ ಮನೆಗಳಲ್ಲಿ ಅನೇಕ ಸಮಸ್ಯೆಗಳಿಗೆ ಮೂಲ ಕಾರಣವೆಂದರೆ ತಿಳಿಯದೆ ಆಗಾಗ್ಗೆ ಮನೆಯ ಹಿರಿಯರನ್ನು ಕಡೆಗಣಿಸಲಾಗುತ್ತದೆ. ಮನೆಯ ಮಕ್ಕಳು ಮತ್ತು ಸೊಸೆಯಂದಿರು ಪ್ರತಿ ದಿನ ಮನೆಯ ಎಲ್ಲ ಹಿರಿಯರಿಗೆ ನಮಸ್ಕರಿಸಿ ಅವರ ಆಶೀರ್ವಾದವನ್ನು ತೆಗೆದು ಕೊಂಡರೆ, ಯಾವುದೇ ಮನೆಯಲ್ಲಿ ಎಂದಿಗೂ ಕ್ಲೇಶಗಳು ಉಂಟಾಗುವುದಿಲ್ಲ. ಹಿರಿಯರು ನೀಡಿದ ಆಶೀರ್ವಾದಗಳು ರಕ್ಷಾಕವಚವಾಗಿ ಕಾರ್ಯನಿರ್ವಹಿಸುತ್ತವೆ. ಯಾವುದೇ ಆಯುಧ ಭೇದಿಸಲು ಸಾಧ್ಯವಿಲ್ಲ .

ಪ್ರತಿಯೊಬ್ಬರೂ ಈ ಸಂಸ್ಕೃತಿಯನ್ನು ಅಳವಡಿಸಿಕೊಂಡರೆ , ನಿಯಮಬದ್ಧವಾಗಿ ಮಾಡಿದರೆ ಮನೆ ಸ್ವರ್ಗವಾಗುತ್ತದೆ. ನಮಸ್ಕಾರ ಪ್ರೀತಿ - ಶಿಸ್ತು - ಶೀತಲತೆ - ಗೌರವವನ್ನು ಕಲಿಸುತ್ತವೆ. ನಮಸ್ಕಾರದಿಂದ ಸುವಿಚಾರ ಬರುತ್ತದೆ. ನಮಸ್ಕಾರ ಬಾಗುವುದನ್ನು ಕಲಿಸುತ್ತದೆ. ನಮಸ್ಕಾರ ಕೋಪವನ್ನು ಅಳಿಸುತ್ತದೆ. ನಮಸ್ಕಾರ ಅಹಂ ಅನ್ನು ಅಳಿಸುತ್ತದೆ. ನಮಸ್ಕಾರ ನಮ್ಮ ಸಂಸ್ಕೃತಿ ಅದೆಷ್ಟು ಸಮೃದ್ಧವಾಗಿದೆ ನನ್ನ ಹೆಮ್ಮೆಯ ಭಾರತ. ಇದೋ ನಿನಗೆ ನಮಸ್ಕಾರ.





















1.ಹನುಮಂತ ಜಯಂತಿ

2. ಅಭಿಷೇಕ ದ್ರವ್ಯಗಳು


3. ಯೋಗ ದಿನ






ಮೇಲೆ ಹೇಳಿರುವ ಹಬ್ಬ ಹರಿದಿನಗಳಿಗೆ
ಸಂಬಂಧಿಸಿದ ಚಿತ್ರದ ಹತ್ತಿರವಿರುವ
ರೌಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ







**ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....**

ರೆ ಪು ಟ್ಟ ದ ಟ್ಟ


ತೊ ಚಂ ಕ್ಕ ಟ್ಟ ಇ ರೆ

ಉತ್ತರಗಳು:
ಇಟ್ಟರೆ ತೊಟ್ಟರೆ ಪುಟ್ಟಕ್ಕ ಚಂದ



| | | | | | |
|---|---|---|---|---|---|
| | 3 | 4 | 13 | 14 | 15 |
| 1 | 2 | 15 | 12 | 13 | 14 |
| 4 | 3 | 12 | 11 | 20 | 15 |
| 5 | 4 | 9 | 10 | 19 | 16 |
| 6 | 5 | 8 | 19 | 18 | 17 |
| 7 | 6 | 7 | 17 | 19 | 18 |
| 8 | 9 | 10 | 16 | 20 | |
| 9 | 10 | 11 | 15 | | |

ಹನುಮಂತನು
ಯಾವ ದಾರಿಯಿಂದ
ಹೋಗಿ
ಸೀತೆಯನ್ನು
ಸೇರುತ್ತಾರೆ.







1. ಶ್ರೀ ಕಾಮಕಾಯ ದೇವಸ್ಥಾನ
2. ಸರೈ ಘಾಟ್
3.ಗುವಾಹಟಿ

ತಿರುಮಲೆ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



## ರಸಪ್ರಶ್ನೆಗಳು

01.ಶ್ರೀಪಾದರಾಜರ ತಂದೆ ತಾಯಿ ಹೆಸರೇನು? ..............................

02.ಭಾನುವಳ್ಳಿಯ ಶ್ರೀಲಕ್ಷ್ಮೀನಾರಾಯಣ ದೇವಾಲಯವನ್ನು ನಿರ್ಮಿಸಿದವರು ಯಾರು? ..............................

03.ಏಕಾಂಬರೇಶ್ವರ ದೇವಾಲಯದಲ್ಲಿರುವ ವೃಕ್ಷ ಯಾವುದು?..............................

04.ವಿಜಯೀಂದ್ರ ತೀರ್ಥರು ಎಂದು ವೃಂದಾವನಸ್ಥರಾದರು? ..............................

05.ಪ್ರಯಾಗಗಳಲ್ಲಿ ಮೂರನೆ ಪ್ರಯಾಗ ಯಾವುದು? ..............................

06.ಯಾವ ಹೆಸರಿನಿಂದ ಕೆರೆಯನ್ನು ನಿರ್ಮಿಸಿದರು? ..............................

07.ಆನಂದ ನಿಲಯದ ಮೇಲಿರುವ ವೆಂಕಟೇಶ್ವರನ ಹೆಸರೇನು? ..............................

08.ತತ್ವಾಭಿಮಾನಿ ದೇವರು ಯಾರು? ..............................

09.ಮಕ್ಕಳ ಮೊದಲ ಗುರು ಯಾರು? ..............................

10.ಕರಿಬೇವನ್ನು ಆಂಗ್ಲ ಭಾಷೆಯಲ್ಲಿ ಏನೆಂದು ಕರೆಯುತ್ತಾರೆ?..............................

11.ತಿರುವೆಳ್ಳಿಯಂಗುಡಿ ದೇವಾಲಯ ಎಲ್ಲಿದೆ? ..............................

12. ಸೂರ್ಯನು ಯಾವ ರಾಶಿಯಲ್ಲಿ ಪ್ರವೇಶಿಸಿದರೆ ಧನುರ್ಮಾಸ ಪ್ರಾರಂಭವಾಗುತ್ತದೆ? ..............................

13. ಹುಡುಗನು ಏನನ್ನು ಕೈಯಲ್ಲಿ ಹಿಡಿದು ಕೊಂಡಿದ್ದನು? ..............................

14.ವೆಂಗಮಾಂಬ ಎಲ್ಲಿ ಯೋಗ ಸಾಧನೆ ಮಾಡಿದರು?..............................

15.ತೇಜಪತ್ರೆಯನ್ನು ಆಂಗ್ಲಭಾಷೆಯಲ್ಲಿ ಏನೆಂದು ಕರೆಯುತ್ತಾರೆ? ..............................

## ಸೂಚನೆಗಳು




1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.05.2024
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**


ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ, ತಿರುಪತಿ : 517 507
ಆಂಧ್ರ ಪ್ರದೇಶ್


ಹೆಸರು :

ಚಂದಾ ಸಂಖ್ಯೆ :


ತಂದೆಯ ಹೆಸರು :


ತಾಯಿಯ ಹೆಸರು:

ವಿಳಾಸ :


ದೂರವಾಣಿ ಸಂಖ್ಯೆ :

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿ ರುವ ಬಾಕ್ಸ್‌ನಲ್ಲಿಯೇ ಬರೆಯಿರಿ






1) ವಾಯು 2)ರಾಮ 3) ರಾಮನಾಮ 4)ಪವನ ಪುತ್ರ 5)ಹನುಮಂತ 6) ಹನುಮಂತ 7) ಅಂಜನಾ ದೇವಿ 8)ಸಂಜೀವಿನಿ



ಮಕ್ಕಳೇ ಈಗ ಶಾಲೆ ಪ್ರಾರಂಭವಾಗಿದೆ. ಶಾಲೆಗೆ ಹೋಗುವ ಮಕ್ಕಳೇ ಈ ಚಿತ್ರದಲ್ಲಿ ಒಂದು ತಪ್ಪು ಇದೆ. ಅದು ಏನೆಂದು ನೋಡಿ ಆ ಬಾಕ್ಸ್‌ನಲ್ಲಿ ತುಂಬಿರಿ.

ಶೂ



## ಒಗ್ಗಟ್ಟಿನಲ್ಲಿ ಬಲವಿದೆ




ಬಲೆಯಲ್ಲಿ ಸಿಕ್ಕಿದ ಪಕ್ಷಿಗಳು ಜೊತೆಯಾಗಿ ಹಾರಿ ಪ್ರಾಣವನ್ನು ಉಳಿಸಿಕೊಂಡವು.

ಚಿನ್ನಾರಿ ಮಕ್ಕಳೇ ನಾವು ಕೂಡ ಪಕ್ಷಿಗಳ ರೀತಿಯಲ್ಲಿ ಒಗ್ಗಟ್ಟಾಗಿ ಇದ್ದರೆ ಯಾವಾ ಕೆಲಸದಲ್ಲೂ ಜಯ ನಿಶ್ಚಯ.

ಚಿತ್ರಕಥೆ

# ಹರಿನಾಮ ಮಹಿಮೆ

ಕಥೆ: ತೆಲುಗು ಮೂಲ : ಶ್ರೀನಿವಾಸ ದೀಕ್ಷಿತರು
ಅನುವಾದ : ಆರ್.ಕೆ.ವಿ.
ಚಿತ್ರಗಳು : ದ್ವಾರಕನಾಥ್





ಅನ್ನದ ಚೀಲ ಮರದ ಕೆಳಗೆ ಇತ್ತು. ವಿದ್ಯಾಪತಿ ಮರದ ಮೇಲೆ ಇದ್ದನು. ಅಷ್ಟರಲ್ಲೇ ಅಲ್ಲಿಗೆ ಕಳ್ಳರು ಬಂದರು.
ಕದ್ದ ಹಣವನ್ನು ಹಂಚಿಕೊಂಡರು. ಹಿಂತಿರುಗುವಾಗ ಕಳ್ಳರು ಅನ್ನದ ಚೀಲವನ್ನು ನೋಡಿದರು.....
ಇಲ್ಲಿ ಅನ್ನದ ಚೀಲ ಇದೆಯಾ! ನಮ್ಮ ಶತ್ರುಗಳು ಯಾರಾದರೂ ಇದರಲ್ಲಿ ವಿಷ ಬೆರೆಸಿದ್ದಿರಬಹುದೇ..
ಅನುಮಾನಾಸ್ಪದವಾಗಿ ಕಳ್ಳರು ಎಲ್ಲವನ್ನು ಹುಡುಕಿದರು. ಮರದ ಮೇಲಿರುವ ವಿದ್ಯಾಪತಿಯನ್ನು ಹಿಡಿದು ಕೆಳಗೆ ಇಳಿಸಿದರು.
ಹೇ! ಈ ಅನ್ನವನ್ನು ನೀನು ತಿನ್ನು! ಇದರಲ್ಲಿ ವಿಷ ಬೆರೆಸಿದ್ದೀಯಾ?
ನಾನು ತಿನ್ನುವುದಿಲ್ಲ.. ಇದರಲ್ಲಿ ವಿಷವನ್ನು ಬೆರೆಸಿಲ್ಲ...
ಕಳ್ಳರು ಬಲವಂತವಾಗಿ ವಿದ್ಯಾಪತಿಗೆ ಅನ್ನವನ್ನು ತಿನ್ನಿಸಲಾಯಿತು.
ನಡೆಯಿರಿ ಹೋಗೋಣ....
ಕಳ್ಳರು ಹೊರಟು ಹೋದರು ವಿದ್ಯಾಪತಿ...
ಸಂಕೀರ್ತನೆಯ ಮಹಿಮೆ ವರ್ಣಿಸಲಾಗದು. ಆ ಮಹಿಮೆಯಿಂದ ನನಗೆ ಅನ್ನಸಿಕ್ಕಿತು... ಭಕ್ತರು ಹೇಳಿದ್ದು ಸರಿಯೇ!
ವಿದ್ಯಾಪತಿಯು ಸಂಪೂರ್ಣವಾಗಿ ಬದಲಾವಣೆ ಗೊಂಡನು. ಭಗವನ್ನಾಮ ಸಂಕೀರ್ತನೆ ಮಾಡುವ ಮೂಲಕ ಉತ್ತಮ ಮಾರ್ಗವನ್ನು ಅನುಸರಿಸಿದನು.
ಎಲ್ಲರೂ ! ಭಗವನ್ನಾಮ ಮಾಡೋಣ! ದೇವರನ್ನು ಸ್ತುತಿಸೋಣ!
ನೀತಿ :
ಭಗವನ್ನಾಮ ಸಂಕೀರ್ತನೆ ಭಕ್ತಿ ಮುಕ್ತಿ ದಾಯಕಮ್
ಲೋಕಃ ಸಮಸ್ತಾಃ ಸುಖಿನೋ ಭವಂತು!

ತಿರುಮಲ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./

ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸು ವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507.
Editor : Dr. V. G. Chokkalingam, M.A., Ph.D.



2024, ಏಪ್ರಿಲ್ 21 ರಿಂದ 23 ರ ವರೆಗೆ ತಿರುಮಲೆಯ
ವಸಂತೋತ್ಸವ ಮಂಡಪದಲ್ಲಿ
ನಡೆದ ಸ್ವಾಮಿಯವರ ವಸಂತೋತ್ಸವ ದೃಶ್ಯಮಾಲಿಕೆ.



2024, ಏಪ್ರಿಲ್ 21 ರಿಂದ 23 ರ ರ ವರೆಗೆ ತಿರುಪತಿ
ಶ್ರೀ ರಾಮಚಂದ್ರ ಪುಷ್ಕರಿಣಿಯಲ್ಲಿ ವೈಭವವಾಗಿ ನಡೆದ
ಶ್ರೀಕೋದಂಡರಾಮ ಸ್ವಾಮಿಯವರ ತೆಪ್ಪೋತ್ಸವಗಳು.



22-04-2024 ರಂದು ಒಂಟಿಮಿಟ್ಟದಲ್ಲಿ ನಡೆದ ಶ್ರೀ ಸೀತಾರಾಮರ ಕಲ್ಯಾಣಕ್ಕೆ
ಆಂಧ್ರಪ್ರದೇಶದ ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ
ಆಂಧ್ರಪ್ರದೇಶದ ದತ್ತಿ ಇಲಾಖೆಯ ಪ್ರತ್ಯೇಕ ಮುಖ್ಯ ಕಾರ್ಯದರ್ಶಿಗಳಾದ
ಶ್ರೀ ಆರ್. ಕರಿಕಾಲವಲವನ್ ಐ.ಎ.ಎಸ್., ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ
ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ರವರು



22-04-2024 ರಂದು ಒಂಟಿಮಿಟ್ಟ ಶ್ರೀ ಕೋದಂಡರಾಮರ ಕಲ್ಯಾಣೋತ್ಸವ
ಸಂದರ್ಭಕ್ಕೆ ತಿರುಮಲೆ ವತಿಯಿಂದ ಚಿನ್ನದ ಆಭರಣಗಳು, ಬೆಳ್ಳಿ ಪೂಜಾ ಸಾಮಾಗ್ರಿಗಳು
ಮತ್ತು ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ
ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ದಂಪತಿಗಳು. ಈ ಕಾರ್ಯಕ್ರಮಕ್ಕೆ ತಿ.ತಿ.ದೇ.,
ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಶ್ರೀ ವೀರಬ್ರಹ್ಮ ಐ.ಎ.ಎಸ್., ರವರು ಮತ್ತು
ಶ್ರೀಮತಿ. ಗೌತಮಿ ಐ.ಎ.ಎಸ್., ರವರು ಪಾಲ್ಗೊಂಡರು.



26-04-2024 ರಂದು ತಿರುಮಲೆ ಸ್ವಾಮಿಯವರ ದರ್ಶನಾನಂತರ
ಭಾರತದ ಉಪರಾಷ್ಟ್ರಪತಿ ಗೌ॥ ಶ್ರೀ ಜಗದೀಪ್ ಧನ್‌ಖರ್
ದಂಪತಿಗಳಿಗೆ ಸ್ವಾಮಿಯವರ ತೀರ್ಥ ಪ್ರಸಾದಗಳನ್ನು ನೀಡುತ್ತಿರುವ
ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ
ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ಯವರು



26-04-2024 ರಂದು ತಿರುಪತಿಯಲ್ಲಿರುವ ಬರ್ಡ್, ಶ್ರೀ ಪದ್ಮಾವತಿ ಚಿಕ್ಕಮಕ್ಕಳ
ಹೃದಯಾಲಯ ಆಸ್ಪತ್ರೆಗಳನ್ನು ಆಂಧ್ರಪ್ರದೇಶದ ರಾಜ್ಯಪಾಲರು ಗೌ॥ ಶ್ರೀ ಎಸ್. ಅಬ್ದುಲ್
ನಜೀರ್ ದಂಪತಿಗಳು ಸಂದರ್ಶಿಸಿದ ದೃಶ್ಯ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಸಂಯುಕ್ತ
ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ರವರು, ಮತ್ತು
ಶ್ರೀಮತಿ. ಗೌತಮಿ ಐ.ಎ.ಎಸ್., ರವರು ಮತ್ತು ಬರ್ಡ್ ಆಸ್ಪತ್ರೆಯ
ಓ.ಎಸ್.ಡಿ ಡಾ॥ ರೆಡ್ಡೆಪ್ಪ ರೆಡ್ಡಿಯವರು ಚಿಕ್ಕ ಮಕ್ಕಳ ಆಸ್ಪತ್ರೆ ಡೈರೆಕ್ಟರ್
ಡಾ॥ ಶ್ರೀನಾಥರೆಡ್ಡಿಯವರು ಪಾಲ್ಗೊಂಡರು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-05–2024 and Posting at Tirupati RMS. Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment No. PMGK/RNP/WPP-04(6)/ 2024-2026" Posting on 5th of Every Month.

